ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 32, ₹12

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume -15
Issue - 01
January - 2018



ಬಾ ಇಲ್ಲಿ ಸಂಭವಿಸು ಇಂದೆನ್ನ ಹೃದಯದಲಿ
ನಿತ್ಯವೂ ಅವತರಿಪ ಸತ್ಯಾವತಾರಾ..
ಮಣ್ಣಾಗಿ ಮರವಾಗಿ ಮಿಗವಾಗಿ ಖಗವಾಗಿ
ಭವ ಭವದಿ ಭವಿಸಿಹೇ ಭವ ವಿದೂರಾ
ನಿತ್ಯವೂ ಅವತರಿಪ ಸತ್ಯಾವತಾರ

–ಕುವೆಂಪು

- ಸೌಹಾರ್ದ ಸಹಕಾರಿಗಳ ಸಂಖ್ಯೆ : 4211
- ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1092

**01** ಹೊಸ ವರ್ಷ ಹಾಗೂ ಸೌಹಾರ್ದ ಸಹಕಾರಿ ದಿನ

**15** ಸಂಕ್ರಾಂತಿ

**26** ಗಣರಾಜ್ಯೋತ್ಸವ



“

ಬ್ರಿಟೀಷ್ ಕೊಲಂಬಿಯಾ ವಿಶ್ವವಿದ್ಯಾಲಯದ ಮೂಲಕ ಮಿಸ್. ಲಾರೆನ್ಸ್ ಹಮ್ಮನ್, ವಕೀಲರು ಮತ್ತು ಆಡಳಿತ ತಜ್ಞರು ಇವರು ಕರ್ನಾಟಕದ ಸೌಹಾರ್ದ ಸಹಕಾರಿ ಚಳುವಳಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಯನ ಹಾಗೂ ಸಂಶೋಧನೆಗೆ ಆಯ್ಕೆ ಮಾಡಿಕೊಂಡು ದಿನಾಂಕ 11-12-2017 ರಿಂದ ದಿನಾಂಕ 16-12-2017ರವರೆಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಸಂಶೋಧನೆ ಹಾಗೂ ಅಧ್ಯಯನ ಮಾಡಿರುವುದು ಸ್ವಾಗತಾರ್ಹ.

”

# ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಯಶಸ್ಸಿನ ಚರ್ಚೆ : ಸಂಶೋಧನೆ ಹಾಗೂ ಅಧ್ಯಯನ ವಿಷಯವಾಗಿ ಆಯ್ಕೆ : ಕರ್ನಾಟಕ ಸರಕಾರ ಹಾಗೂ ರಾಜ್ಯದ ಸಹಕಾರಿಗಳಿಗೆ ಹೆಮ್ಮೆ ಹಾಗೂ ಸಂತೋಷದ ವಿಷಯ

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ನೂತನ ಕ್ಯಾಲೆಂಡರ್ ವರ್ಷ 2018, ಸೌಹಾರ್ದ ಸಹಕಾರಿ ದಿನ, ಮಕರ ಸಂಕ್ರಾಂತಿ ಹಾಗೂ 69ನೇ ಗಣರಾಜ್ಯೋತ್ಸವದ ಶುಭಾಷಯಗಳು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಕಳೆದ 17 ವರ್ಷಗಳಿಂದ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳುವುದರ ಜೊತೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಚಳುವಳಿಯ ಯಶಸ್ಸು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯ ಹಾಗೂ ಅಧ್ಯಯನದ ವಿಷಯವಾಗಿ ಹೊರಹೊಮ್ಮಿರುವುದು ಈ ಕ್ಷೇತ್ರದ ಅಭಿವೃದ್ಧಿಗೆ ಪ್ರೋತ್ಸಾಹಿಸುತ್ತಿರುವ ಕರ್ನಾಟಕ ಸರಕಾರ, ರಾಜ್ಯದ ಸಹಕಾರ ಇಲಾಖೆ ಹಾಗೂ ಸಹಕಾರಿಗಳು ಹೆಮ್ಮೆಪಡುವ ಹಾಗೂ ಸಂತೋಷದ ವಿಷಯವೆಂದು ನನ್ನ ಅಭಿಪ್ರಾಯವಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಹಾಗೂ ಅಂತರ ರಾಷ್ಟ್ರಮಟ್ಟದಲ್ಲಿ ನಡೆದ ಸೆಮಿನಾರ್‌ಗಳಲ್ಲಿ ಹಲವು ಬಾರಿ ವಿಷಯಗಳ ಮಂಡನೆಯಾಗಿದೆ. ವಿವಿಧ ರಾಜ್ಯದ ಸಹಕಾರಿಗಳ ಗಮನ ಸೆಳೆಯುವ ಪ್ರಯತ್ನ ನಡೆದಿದೆ. ರಾಜ್ಯದಲ್ಲಿ ವಿವಿಧ ತರಬೇತಿ ಕಾರ್ಯಕ್ರಮಗಳ ಹಾಗೂ ಸಭೆ-ಸಮಾರಂಭಗಳ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ತಿಳಿಸುವ ಪ್ರಯತ್ನ ನಡೆದಿದೆ. ಈ ಎಲ್ಲಾ ಪ್ರಯತ್ನಗಳ ಫಲವಾಗಿ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ – ಏಷ್ಯಾ ವಿಭಾಗದ ವತಿಯಿಂದ (International Cooperative Alliance - Asia Pacific) ಬ್ರಿಟೀಷ್ ಕೊಲಂಬಿಯಾ ವಿಶ್ವವಿದ್ಯಾಲಯದ ಮೂಲಕ ಮಿಸ್. ಲಾರೆನ್ಸ್ ಹಮ್ಮನ್, ವಕೀಲರು ಮತ್ತು ಆಡಳಿತ ತಜ್ಞರು ಇವರು ಕರ್ನಾಟಕದ ಸೌಹಾರ್ದ ಸಹಕಾರಿ ಚಳುವಳಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಯನ ಹಾಗೂ ಸಂಶೋಧನೆಗೆ ಆಯ್ಕೆ ಮಾಡಿಕೊಂಡು ದಿನಾಂಕ 11-12-2017 ರಿಂದ ದಿನಾಂಕ 16-12-2017ರವರೆಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಸಂಶೋಧನೆ ಹಾಗೂ ಅಧ್ಯಯನ ಮಾಡಿರುವುದು ಸ್ವಾಗತಾರ್ಹ.

ಮಿಸ್. ಲಾರೆನ್ಸ್ ಹಮ್ಮನ್‌ನವರು ಅವರ ಅಧ್ಯಯನ ಕಾಲದಲ್ಲಿ ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಸಹಕರಿಸಿದ ಮಾನ್ಯ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ, ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿ, ಪ್ರಾಂತೀಯ ಸಹಕಾರ ನಿರ್ವಹಣಾ ಸಂಸ್ಥೆಯ ಅಧ್ಯಕ್ಷರಾದ ಡಾ. ಬಿ.ಎಸ್.ವಿಶ್ವನಾಥನ್ ಹಾಗೂ ನಿರ್ದೇಶಕರಾದ ಶ್ರೀ ವಸಂತ ನಾಯಕ, ಮೈಸೂರು ವಿಶ್ವವಿದ್ಯಾಲಯದ ಪ್ರೊ. ಯಶವಂತ ಡೊಂಗ್ರೆ ಹಾಗೂ ಅಧ್ಯಾಪಕ ವರ್ಗದವರಿಗೆ, ವೈಕುಂಠ ಮೆಹತಾ ಸಹಕಾರ ನಿರ್ವಹಣಾ ಕೇಂದ್ರ, ಪುಣೆ ಇದರ ನಿವೃತ್ತ ಅಧ್ಯಾಪಕರಾದ ಡಾ. ಪರಂಜ್ಯೋತಿ, ಮಾನ್ಯ ಮಾಜಿ ಮಂತ್ರಿಯಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಡಾ. ಎಸ್.ಎ.ಸಿದ್ಧಾಂತಿ, ಡಾ. ನಂದೀಶ ಹಿರೇಮಠ, ಸಹಕಾರ ಇಲಾಖೆಯ ಅಪರ ನಿಬಂಧಕರುಗಳಾದ ಶ್ರೀ ಕೆ.ಎಸ್.ನವೀನ್, ಶ್ರೀ ಅರುಣಕುಮಾರ್, ಶ್ರೀ ಗೋಪಾಲಕೃಷ್ಣ, ಜಂಟಿ ನಿಬಂಧಕರುಗಳಾದ ಶ್ರೀ ಹೆಚ್.ಬಾಲಶೇಖರ, ಶ್ರೀ ಜಫರುಲ್ಲಾಖಾನ್, ಶ್ರೀಮತಿ ಲೀಲಾದೇವಿ ಇವರುಗಳಿಗೆ ಮತ್ತು ಸಂಯುಕ್ತ ಸಹಕಾರಿಯ ಬೆಂಗಳೂರು ಹಾಗೂ ಮೈಸೂರು ವಿಭಾಗದ ನಿರ್ದೇಶಕರುಗಳಿಗೆ, ಅವರು ಭೇಟಿ ನೀಡಿದ ಸಂದರ್ಭದಲ್ಲಿ ಸಹಕರಿಸಿದ ಬೆಂಗಳೂರು ಹಾಗೂ ತುಮಕೂರು ಜಿಲ್ಲೆಗಳ ಎಲ್ಲಾ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಸಂಯುಕ್ತ ಸಹಕಾರಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಈ ಸಂಶೋಧನೆ ಹಾಗೂ ಅಧ್ಯಯನ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಹಾಗೂ ಕರ್ನಾಟಕದ ಮಾದರಿ ಸೌಹಾರ್ದ ಸಹಕಾರಿ ವ್ಯವಸ್ಥೆಯನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿಗೆ ತರುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ ಎಂದು ಸಂಯುಕ್ತ ಸಹಕಾರಿಯು ಆಶಿಸುತ್ತದೆ.

▸▸ **ಬಿ.ಹೆಚ್. ಕೃಷ್ಣಾರೆಡ್ಡಿ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

## ಒಳಪುಟಗಳಲ್ಲಿ . . .

ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಸಫಲತೆ : ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರಿಂದ ಸಂಶೋಧನೆ ಮತ್ತು ಅಧ್ಯಯನ ................ 5
ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರುಗಳಿಗಾಗಿ ನಡೆದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದ ವರದಿ ........ 9
ಇ-ಸ್ಟ್ಯಾಂಪಿಂಗ್ ನಿರ್ವಹಣಾ ಸಹಕಾರ ಮಹಾಮಂಡಳಗಳ ಪ್ರತಿನಿಧಿಗಳ ಸಭೆ ................ 11
ಮುಖ್ಯಕಾರ್ಯನಿರ್ವಾಹಕರ "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಗಳ ಛಾಯಾಚಿತ್ರಗಳು ................ 15
ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರ ಭೇಟಿ ................ 17
ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರ ಪರಿಚಯ ................ 18
ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು ................ 19
ಸೌಹಾರ್ದ ಸಹಕಾರಿ ದಿನಾಚರಣೆಯ ವರದಿಗಳು ...... 20
ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ ................ 27
ಕಛೇರಿ ಆಡಳಿತ ................ 28
ಆರ್‌ಬಿಐ ನ್ಯೂಸ್ ................ 31

# ಸಂಪಾದಕೀಯ

## ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ – ಭಾಗವಹಿಸುವಿಕೆ ಉತ್ಸಾಹದಾಯಕ – ಹಾಜರಾತಿ ಹೆಚ್ಚುವುದು ಅವಶ್ಯಕ

ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳು ರಾಜ್ಯದಾದ್ಯಂತ ಜರುಗಿವೆ. ಸಂಯುಕ್ತ ಸಹಕಾರಿಯ ಅಧಿಕಾರಿಗಳು ತಮ್ಮ ದೈನಂದಿನ ಎಲ್ಲಾ ಕೆಲಸಗಳ ಜೊತೆಗೆ ಈ ವಾರ್ಷಿಕ ಸಭೆಗಳ ಸಿದ್ಧತೆ ನಡೆಸಿ, ಅವಶ್ಯಕವಾದ ಮಾಹಿತಿಗಳನ್ನು ಸಂಗ್ರಹಿಸಿ, ಜೊತೆಗೆ ಎಲ್ಲಾ ಕಡೆಗಳಲ್ಲೂ ಉಪಯುಕ್ತವಾದ ಒಂದು ವಿಷಯದ ಬಗ್ಗೆ ತರಬೇತಿಯ ವ್ಯವಸ್ಥೆಯನ್ನೂ ಮಾಡಿ, ಹೆಚ್ಚಿನ ದಕ್ಷತೆಯಿಂದ ಸಭೆಗಳನ್ನು ನಡೆಸಿರುವುದು ಸ್ವಾಗತಾರ್ಹ.

ರಾಜ್ಯದಾದ್ಯಂತ ನಿಯೋಜಿಸಲಾಗಿದ್ದ 25 ಸಭೆಗಳ ಪೈಕಿ 21 ಸಭೆಗಳಲ್ಲಿ ಮುಖ್ಯ ಕಾರ್ಯನಿರ್ವಾಹಕರ ಸಭೆಗಳು ನಡೆದಿವೆ. ಅನೇಕ ಸ್ಥಳಗಳಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಮಾನ್ಯ ಉಪಾಧ್ಯಕ್ಷರು, ಮಾನ್ಯ ನಿರ್ದೇಶಕರುಗಳು, ವ್ಯವಸ್ಥಾಪಕ ನಿರ್ದೇಶಕರು, ಹಿರಿಯ ಅಧಿಕಾರಿಗಳು ಭಾಗವಹಿಸಿ, ಮಾರ್ಗದರ್ಶನ ಮಾಡಿರುವುದು ಸ್ವಾಗತಾರ್ಹ. ಈ ಸಭೆಗಳಲ್ಲಿ ಭಾಗವಹಿಸಿದ್ದ ಮುಖ್ಯ ಕಾರ್ಯನಿರ್ವಾಹಕರುಗಳು ಸಕ್ರಿಯವಾಗಿ ಭಾಗವಹಿಸಿ, ತಮ್ಮ ತಮ್ಮ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಅಗತ್ಯ ಮಾಹಿತಿಗಳನ್ನು ನೀಡುವುದರ ಜೊತೆಗೆ ಸಂಯುಕ್ತ ಸಹಕಾರಿಯಿಂದ ಅವರು ಅಪೇಕ್ಷಿಸುವ ವಿಷಯಗಳಾದ ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ಮಾಹಿತಿಗಳಾದ ಲೆಕ್ಕಪರಿಶೋಧನಾ ವರದಿಗಳು, ಕಲಂ 34ರ ಮಾಹಿತಿಗಳು, ವಾರ್ಷಿಕ ಹಾಗೂ ಅರ್ಧ ವಾರ್ಷಿಕ ಮಾಹಿತಿಗಳು ಇತ್ಯಾದಿಗಳು ಪೇಪರ್‌ಲೆಸ್ ಆಗಿರಬೇಕು ಹಾಗೂ ಸಂಯುಕ್ತ ಸಹಕಾರಿಗೆ ಪಾವತಿಸಲಾಗುವ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ, ಇತ್ಯಾದಿ ಪಾವತಿಗಳನ್ನು ಡಿಡಿ/ ಚೆಕ್‌ಗಳ ಬದಲಿಗೆ ಡಿಜಿಟಲೈಸ್ ಆಗಬೇಕು. ಸಂಯುಕ್ತ ಸಹಕಾರಿಯಿಂದ ವರ್ಷದಲ್ಲಿ ಕನಿಷ್ಠ ಒಂದು ಬಾರಿ ಒಂದು ಸೌಹಾರ್ದ ಸಹಕಾರಿಯ ಭೇಟಿ/ ಪರಿಶೀಲನೆ ಕಾರ್ಯ ಆಗಬೇಕು ಹಾಗೂ ಸೌಹಾರ್ದ ಸಹಕಾರಿಗಳ ವರ್ಗೀಕರಣ ಕಾರ್ಯ ಆಗಬೇಕು ಮತ್ತು ನೌಕರರಿಗೆ ಪ್ರಾವಿಡೆಂಟ್ ಫಂಡ್, ಇಎಸ್‌ಐ, ಗ್ರಾಚ್ಯುಟಿ ಹಾಗೂ ಸೇವಾ ಭದ್ರತೆ ಒದಗಿಸುವ ಬಗ್ಗೆ ಸಂಯುಕ್ತ ಸಹಕಾರಿಯು ಸೂಕ್ತ ಕ್ರಮವಿಡಬೇಕು ಮತ್ತು ಸಾರ್ವಜನಿಕರಿಗೆ ಮೋಸ ಮಾಡುವ ಸೌಹಾರ್ದ ಸಹಕಾರಿಗಳ ಮೋಸ/ ವಂಚನೆಯನ್ನು ತಡೆಗಟ್ಟುವ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕು ಎಂಬ ಮುಂತಾದ ವಿಷಯಗಳ ಕುರಿತು ಮುಕ್ತ ಚರ್ಚೆ ನಡೆಸಿದ್ದಾರೆ ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಇದು ಅಗತ್ಯವಾಗಿ ಆಗಬೇಕಾದುದು, ಆಗಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆಗೂ ಮತ್ತು ಮುಖ್ಯ ಕಾರ್ಯನಿರ್ವಾಹಕರ ಸಭೆಗಳಲ್ಲಿ ಭಾಗವಹಿಸಿದವರ ಸಂಖ್ಯೆಗೂ ತಾಳೆ ಹಾಕಿ ನೋಡಿದಾಗ ಹಾಜರಾತಿ ಕೆಲವು ಭಾಗದಲ್ಲಿ ಶೇ.70ಕ್ಕಿಂತಲೂ ಹೆಚ್ಚು ಇದ್ದು, ಇನ್ನೂ ಕೆಲವು ಭಾಗದಲ್ಲಿ ಶೇ.50ಕ್ಕಿಂತ ಕಡಿಮೆ, ಒಟ್ಟಾರೆ ಹಾಜರಾತಿ ಇನ್ನೂ ಶೇ.60ರ ಗಡಿಯನ್ನು ದಾಟದಿರುವುದು ಸಮಾಧಾನಕರವಾಗಿರುವುದಿಲ್ಲ. ಇದು ಸಲ್ಲದು. ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆ ವರ್ಷಕ್ಕೆ ಒಂದು ಬಾರಿ ನಿಮಗೆ ಸಿಗುವ ಅವಕಾಶ, ಈ ಅವಕಾಶವನ್ನು ಸದುಪಯೋಗ ಮಾಡಿಕೊಂಡು ನಿಮ್ಮ ನಿಮ್ಮ ಸಹಕಾರಿಗಳ ಅಭಿವೃದ್ಧಿಗೆ ಹೊಸ ಹೊಸ ಆಯಾಮಗಳ ಆವಿಷ್ಕಾರಗಳಿಗೆ ಅವಕಾಶವನ್ನು ನೀವುಗಳು ಕಳೆದುಕೊಂಡಂತಾಗುತ್ತದೆ ಎಂಬುದನ್ನು ನೀವು ತಿಳಿಯಬೇಕು. ಈ ಕ್ಷೇತ್ರದ ಬಲ, ಈ ಕ್ಷೇತ್ರದ ಶಕ್ತಿ ಸಾಮರ್ಥ್ಯ, ದೌರ್ಬಲ್ಯಗಳ ಮತ್ತು ಹೊಸ ಹೊಸ ವಿಷಯಗಳ ಜ್ಞಾನಾರ್ಜನೆಗೆ ಅವಕಾಶಗಳನ್ನು ನೀವು ಕಳೆದುಕೊಂಡಂತಾಗುತ್ತದೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಮುಖ್ಯ ಕಾರ್ಯನಿರ್ವಾಹಕರ ಸಭೆಗೆ ಗೈರು ಹಾಜರಾದವರಿಗೆ ಶಿಸ್ತಿನ ಕ್ರಮವಿಡುವ ಬಗ್ಗೆ ಮುಂದಿನ ದಿನಗಳಲ್ಲಿ ಚಿಂತಿಸಬೇಕಾಗುತ್ತದೆ ಎಂಬುದನ್ನು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯವರು ಗಮನಿಸಬೇಕಾಗುತ್ತದೆ. ಸಹಕಾರ ಇಲಾಖೆಯವರು ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿದಂತೆ ಸಂಯುಕ್ತ ಸಹಕಾರಿಯವರು ಕ್ರಮ ಜರುಗಿಸುವ ಸನ್ನಿವೇಶಗಳು ಉದ್ಭವಿಸಬಾರದು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣದ ಆಧಾರದ ಮೇಲೆ ಕೆಲಸ ನಿರ್ವಹಿಸುವ ನಾವುಗಳು ಇನ್ನೊಬ್ಬರ ಸೂಚನೆಯಂತೆ ಕಾರ್ಯನಿರ್ವಹಿಸುವುದಕ್ಕಿಂತ ಸ್ವಯಂ ಪ್ರೇರಣೆಯಿಂದ ನಮ್ಮ ಕಾರ್ಯ ನಾವು ಭಾಗವಹಿಸಲೇಬೇಕು, ನಮ್ಮ ಬದ್ಧತೆಯನ್ನು ನಾವು ಪ್ರದರ್ಶಿಸುತ್ತೇವೆ ಎಂಬ ದೃಢ ಸಂಕಲ್ಪವನ್ನು ಮುಂದಿನ ದಿನಗಳಲ್ಲಿ ನಿರೀಕ್ಷಿಸಬಹುದು ಎಂದು ಸಂಯುಕ್ತ ಸಹಕಾರಿ ಅಪೇಕ್ಷಿಸಬಹುದೇ?

## ಪರಿಶ್ರಮದ ಸಂಪಾದನೆ



## ಜ್ಞಾನ ಜ್ಯೋತಿ

▸▸ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಶ್ರೀ ಕ್ಷೇತ್ರ ಧರ್ಮಸ್ಥಳ

ಈ ಜಗತ್ತಿನಲ್ಲಿ ಅಸಹಾಯಕರನ್ನು ಕಂಡಾಗ ಕೆಲವರ ಹೃದಯ ಸಹಾನುಭೂತಿಯಿಂದ ಕರಗಿ ಬಿಡುತ್ತದೆ. ಬಡವರಿಗೆ, ದೀನ ದಲಿತರಿಗೆ ಸೇವೆ ಸಲ್ಲಿಸುವುದರಿಂದ ಪುಣ್ಯ ದೊರೆಯುತ್ತದೆ. ದೇವರ ಅನುಗ್ರಹಕ್ಕೂ ನಾವು ಪಾತ್ರರಾಗುತ್ತೇವೆ ಎಂಬ ನಂಬಿಕೆಯೂ ಜನಸಾಮಾನ್ಯರಲ್ಲಿ ಇರುತ್ತದೆ. ಆದರೆ, ದಾನ ಸ್ವೀಕಾರ ಮಾಡುವ ವ್ಯಕ್ತಿಯು ಎಷ್ಟರ ಮಟ್ಟಿಗೆ ದಾನಕ್ಕೆ ಅರ್ಹ ಎಂಬುದನ್ನು ಗುರುತಿಸಿಯೇ ನಾವು ದಾನ ಧರ್ಮಾದಿಗಳನ್ನು ಮಾಡಬೇಕು ಎಂಬುದನ್ನು ನಿರೂಪಿಸುವ ಒಂದು ನಿದರ್ಶನ ಇಲ್ಲಿದ್ದು, ಅತ್ಯಂತ ಹೃದಯಸ್ಪರ್ಶಿಯಾಗಿದೆ.

ಹಿಂದೆ ಆಗ್ರಾದಲ್ಲಿ ಅಬ್ದುಲ್ ಅಬ್ಬಾಸ್ ಎಂಬ ಒಬ್ಬರು ಸಂತರಿದ್ದು, ದೇವರ ಬಗ್ಗೆ ಅಪಾರ ಶ್ರದ್ಧೆ ಉಳ್ಳವರಾಗಿದ್ದರು. ಅವರು ಟೊಪ್ಪಿಗಳನ್ನು ಹೊಲಿದು, ಮಾರಾಟದಿಂದ ಬಂದ ಹಣದಿಂದ ಜೀವನ ಮಾಡುತ್ತಿದ್ದರು. ತನ್ನ ಸಂಪಾದನೆಯಲ್ಲಿ ಅರ್ಧಾಂಶವನ್ನು ಬಡಬಗ್ಗರಿಗೆ ದಾನ ಮಾಡುತ್ತಿದ್ದರು.

ಒಮ್ಮೆ ಅವರ ಬಳಿಗೆ ಶ್ರೀಮಂತ ಶಿಷ್ಯನೊಬ್ಬನು ಬಂದು ಕೇಳಿದ – "ಮಹಾತ್ಮರೇ, ನಿಮ್ಮಂತೆಯೇ ನಾನು ಕೂಡ ದಾನ ಮಾಡಿ, ಪುಣ್ಯ ಸಂಪಾದಿಸಬೇಕೆಂದಿದ್ದೇನೆ. ಯಾರಿಗೆ ದಾನ ಮಾಡಲಿ?", ಆಗ ಸಂತರು "ಯಾರನ್ನು ಅರ್ಹನೆಂದು ಭಾವಿಸುತ್ತೀಯೋ ಅವನಿಗೆ ದಾನ ಮಾಡಿಬಿಡು" ಅಂದರು. ಅಂತೆಯೇ ಆ ಶ್ರೀಮಂತರು ಒಬ್ಬ ಕುರುಡ ಭಿಕ್ಷುಕನಿಗೆ ಒಂದು ಬಂಗಾರದ ನಾಣ್ಯವನ್ನು ದಾನ ಮಾಡಿ ಬಿಟ್ಟರು.

ಮರುದಿನ ಆ ಶ್ರೀಮಂತ ಶಿಷ್ಯನು ಅದೇ ರಸ್ತೆಯಲ್ಲಿ ಸಾಗಿ ಬಂದಾಗ, ಅದೇ ಬಡ ಭಿಕ್ಷುಕ ಸಿಕ್ಕಿದ. ಅವನು ಇನ್ನೊಬ್ಬ ಭಿಕ್ಷುಕನೊಡನೆ ಹೇಳುತ್ತಿದ್ದ– "ಲೋ ಗೆಳೆಯಾ, ನಿನ್ನೆ ಭಿಕ್ಷೆಯಲ್ಲಿ ಒಂದು ಬಂಗಾರದ ನಾಣ್ಯ ಸಿಕ್ಕಿತು. ನಾನು ಖುಷಿಯಲ್ಲಿ ಹೊಟ್ಟೆ ತುಂಬಾ ತಿಂದು ಶರಾಬು ಕುಡಿದು ಮಜಾ ಮಾಡಿದೆ. ಹಾಹ್ಹಾಹಾ" ಎಂದು ನಕ್ಕುಬಿಟ್ಟ. ಇದನ್ನು ಕಂಡ ಶ್ರೀಮಂತ ಶಿಷ್ಯನಿಗೆ ಬಹಳ ಬೇಸರವಾಯಿತು. ತಕ್ಷಣ ಆತ ಸಂತ ಅಬ್ಬಾಸರಿಗೆ ಪೂರ್ಣ ವೃತ್ತಾಂತವನ್ನು ಹೇಳಿದನು.

ಆಗ ಸಂತರು ತಮ್ಮ ಸಂಪಾದನೆಯಿಂದ ಒಂದು ನಾಣ್ಯವನ್ನು ಆ ಶ್ರೀಮಂತ ಶಿಷ್ಯನಿಗೆ ಕೊಟ್ಟು ಹೇಳಿದರು – "ಇದನ್ನು ಇನ್ನೊಬ್ಬ ಭಿಕ್ಷುಕನಿಗೆ ಕೊಟ್ಟು ಪರೀಕ್ಷೆ ಮಾಡು" ಎಂದರು. ಆ ಶ್ರೀಮಂತ ಶಿಷ್ಯನು ಒಬ್ಬ ಭಿಕಾರಿಗೆ ಕೊಟ್ಟು, ಪರೀಕ್ಷಿಸಲೆಂದು ಅವನನ್ನು ಹಿಂಬಾಲಿಸಿದನು. ಸ್ವಲ್ಪ ದೂರ ಹೋದ ಬಳಿಕ ಆ ಭಿಕಾರಿಯು ನಿರ್ಜನ ಪ್ರದೇಶಕ್ಕೆ ತಲುಪಿದಾಗ, ತನ್ನ ಬಟ್ಟೆಯೊಳಗೆ ಅಡಗಿಬಿಟ್ಟಿದ್ದ ಒಂದು ಹಕ್ಕಿಯನ್ನು ಆಗಸದೆಡೆಗೆ ಪುರ್ರನೆ ಹಾರಿಸಿಬಿಟ್ಟನು. ಇದನ್ನು ಕಂಡ ಶ್ರೀಮಂತ ಶಿಷ್ಯನು ಭಿಕಾರಿಯೊಡನೆ, "ಹಕ್ಕಿಯನ್ನೇಕೆ ಹಾರಲು ಬಿಟ್ಟೆ?" ಎಂದು ಪ್ರಶ್ನಿಸಿದನು.

ಭಿಕಾರಿ ಹೇಳಿದನು– "ನಾನು ಮೂರು ದಿನದಿಂದ ಹಸಿದಿದ್ದೆ. ಇಂದು ಹಕ್ಕಿಯನ್ನು ತಿನ್ನಬೇಕೆಂದಿದ್ದೆ. ಅಷ್ಟರಲ್ಲಿ ನೀವು ಔದಾರ್ಯದಿಂದ ಒಂದು ನಾಣ್ಯ ನೀಡಿದಿರಿ. ಈ ಬಡ ಹಕ್ಕಿಯ ಮೇಲೆ ದಯೆ ತೋರಿ ಹಾರಲು ಬಿಟ್ಟೆ", ತಕ್ಷಣವೇ ಶ್ರೀಮಂತ ಶಿಷ್ಯನು ಸಂತ ಅಬ್ಬಾಸರ ಬಳಿಗೆ ಹೋಗಿ ನಡೆದ ವೃತ್ತಾಂತವನ್ನು ಹೇಳಿದಾಗ ಅವರಂದರು– "ನಿನ್ನ ಧನವು ತಪ್ಪು ದಾರಿಯ ಗಳಿಕೆಯಾಗಿತ್ತು. ಆದ್ದರಿಂದ, ತಪ್ಪು ಬಳಕೆಯಾಗಿತ್ತು. ಆದರೆ, ನನ್ನ ಹಣವು ಪರಿಶ್ರಮದ ಸಂಪಾದನೆಯಾಗಿತ್ತು. ಆದ್ದರಿಂದ, ನೀನು ತಪ್ಪು ಮಾಡುವುದರಿಂದ ಪಾರು ಮಾಡಿತು". ಶಿಷ್ಯನು ಸಂತರ ಚರಣಗಳಿಗೆ ಅಡ್ಡ ಬಿದ್ದನು.

ಪರಿಶ್ರಮದಿಂದ ದೊರೆಯುವ ಸಂಪಾದನೆಗೆ ಮಹತ್ವವಿದೆ. ಅಂತಹ ಸಂಪಾದನೆ ನಮಗಿರಬೇಕು. ಅದನ್ನು ಸದ್ವಿನಿಯೋಗ ಮಾಡಿದಾಗ ನಮಗೆ ಪುಣ್ಯ ಸಂಪಾದನೆ ಸಾಧ್ಯವಾಗುತ್ತದೆ.

**– ಸಂಗ್ರಹ**

## ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ವೃತ್ತಿಪರ ನಿರ್ದೇಶಕರ ನೇಮಕ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 54 ಮತ್ತು ಸಂಯುಕ್ತ ಸಹಕಾರಿಯ ಉಪವಿಧಿ ಸಂಖ್ಯೆ 20(2)ರನ್ವಯ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ಸಹಮತದಿಂದ ಮಂಡಲಿಗೆ ವೃತ್ತಿಪರ ನಿರ್ದೇಶಕರನ್ನಾಗಿ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಶ್ರೀ ಎಂ.ಜಿ.ಪಾಟೀಲ ಮತ್ತು ಸಿಂಧನೂರಿನ ಸಿಂಧೂ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ವಿಶೇಷವಾಗಿ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಶ್ರೀ ರಾಜಶೇಖರ ಬಿ. ಇವರುಗಳನ್ನು ನೇಮಕ ಮಾಡಲಾಗಿದೆ.



ದಿನಾಂಕ : 30–12–2017ರಂದು ನಡೆದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸ್ವಾಗತಿಸಲಾಯಿತು. ಶ್ರೀಯುತರುಗಳು ಈ ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಸೇವೆಯನ್ನು ಪ್ರಾಮಾಣಿಕವಾಗಿ ಸಲ್ಲಿಸುವುದಾಗಿ ತಿಳಿಸಿದರು.



## ಶ್ರೀ ಹೆಚ್. ಬಾಲಶೇಖರ್‌ರವರ ಭೇಟಿ

ಶ್ರೀ ಹೆಚ್.ಬಾಲಶೇಖರ್, ಸಹಕಾರಿಗಳ ಜಂಟಿ ನಿಬಂಧಕರು, ಕಾನೂನು ಕೋಶ ಇವರು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳೊಂದಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

## ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಸಫಲತೆ : ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರಿಂದ (International Cooperative Alliance - Asia Pacific) ಸಂಶೋಧನೆ ಮತ್ತು ಅಧ್ಯಯನ

### ಕರ್ನಾಟಕದ ಸೌಹಾರ್ದ ಮಾದರಿಯನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿಗೆ ತರುವಲ್ಲಿ ರಾಷ್ಟ್ರೀಯ ಸಹಕಾರ ಯೂನಿಯನ್ ಹಾಗೂ ಕೇಂದ್ರ ಸರಕಾರದೊಡನೆ ವ್ಯವಹರಿಸಲು ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ ಆಸಕ್ತಿ : ಅದಕ್ಕಾಗಿ ಈ ಅಧ್ಯಯನ : ಶ್ರೀ ಮೋಹಿತ್ ದವೆ

### ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸರಕಾರದ ಹಾಗೂ ಸಹಕಾರ ಇಲಾಖೆಯ ಪ್ರೋತ್ಸಾಹ ಅವಶ್ಯಕ : ಮಿಸ್. ಲಾರೆನ್ಸ್ ಹಮ್ಮನ್



ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ



ಮೈಸೂರು ವಿಭಾಗೀಯ ಕಛೇರಿಗೆ ಭೇಟಿ

ಮಿಸ್. ಲಾರೆನ್ಸ್ ಹಮ್ಮನ್, ವಕೀಲರು ಹಾಗೂ ಆಡಳಿತ ತಜ್ಞರು ಇವರು ಬ್ರಿಟೀಷ್ ಕೊಲಂಬಿಯಾ ವಿಶ್ವವಿದ್ಯಾಲಯದ ವತಿಯಿಂದ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆ, ಏಷ್ಯಾ ಫೆಸಿಫಿಕ್‌ರವರ ಮಾರ್ಗದರ್ಶನದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಅಧ್ಯಯನಕ್ಕಾಗಿ ದಿನಾಂಕ : 11-12-2017 ರಿಂದ ದಿನಾಂಕ : 16-12-2017 ರವರೆಗೆ ಬೆಂಗಳೂರಿಗೆ ಆಗಮಿಸಿದ್ದರು. ಪ್ರಾರಂಭದ 3 ದಿನಗಳಲ್ಲಿ ಸಹಕಾರಿ ಮೈತ್ರಿ ಸಂಸ್ಥೆಯ ಅಧಿಕಾರಿಯಾದ ಶ್ರೀ ಮೋಹಿತ್ ದವೆಯವರು ಮಿಸ್. ಲಾರೆನ್ಸ್‌ರವರ ಜೊತೆಗಿದ್ದು, ಹಲವಾರು ಗಣ್ಯರನ್ನು ಹಾಗೂ ಸಂಸ್ಥೆಗಳನ್ನು ಭೇಟಿ ಮಾಡಿ, ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳು ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಅಧ್ಯಯನ ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಕ್ಕೆ ಭೇಟಿ ನೀಡಿದರು. ತರಬೇತಿ ಕಾರ್ಯಕ್ರಮದ ಉಪನ್ಯಾಸಕಾರರಾಗಿ ಆಗಮಿಸಿದ್ದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಡಾ. ಎಸ್.ಎ.ಸಿದ್ಧಾಂತಿಯವರೊಡನೆ ಚರ್ಚಿಸಿದರು. ತರಬೇತಿ ನಡೆಸುವ ವಿಧಾನ, ತರಬೇತಿ ಪೂರ್ವ ಚಟುವಟಿಕೆಗಳು, ವಿಷಯಗಳ ಅಳವಡಿಕೆ, ವಿಷಯ ತಜ್ಞರ ಆಯ್ಕೆ ಇವೆಲ್ಲವುಗಳನ್ನು ಅಧ್ಯಯನ ಮಾಡಿ, ಇದೊಂದು ವಿಶೇಷ ವ್ಯವಸ್ಥೆಗಳನ್ನೊಳಗೊಂಡ ತರಬೇತಿ ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು.

ಈ ಅವಧಿಯ ಪ್ರಾರಂಭದಲ್ಲಿ ಡಾ. ನಂದೀಶ ಹಿರೇಮಠರವರು ಸಂಯುಕ್ತ ಸಹಕಾರಿಯ ಪರವಾಗಿ ಕರ್ನಾಟಕದ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆ, ಸಾಧನೆ, ವಿವಿಧ ರೀತಿಯ ಸಹಕಾರ ಸಂಸ್ಥೆಗಳು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಪಿ.ಪಿ.ಟಿ. ಮೂಲಕ ವಿವರಿಸಿದರು. ನಂತರದಲ್ಲಿ ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಬೆಂಗಳೂರು ವಿಭಾಗೀಯ ನಿರ್ದೇಶಕರುಗಳಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ, ಶ್ರೀ ಬಿ.ಗಂಗಾಧರಯ್ಯ, ಶ್ರೀ ಜಿ.ನಂಜನಗೌಡ, ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಎ.ಆರ್.ಪ್ರಸನ್ನಕುಮಾರ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರ ಜೊತೆಗೆ, ನಂತರ ಸಂಯುಕ್ತ ಸಹಕಾರಿಯ ಅಧಿಕಾರಿಗಳ ಜೊತೆಗೆ ವಿವರವಾಗಿ ಚರ್ಚಿಸಿದರು.



ಡಾ.ಪರಂಜ್ಯೋತಿಯವರೊಡನೆ ಸ್ವಾಯತ್ತ ಸಹಕಾರಿ ಕಾಯ್ದೆಗಳ ಕಾರ್ಯನಿರ್ವಹಣೆಯ ಅಧ್ಯಯನ



ಡಾ. ಬಿ.ಎಸ್.ವಿಶ್ವನಾಥನ್, ಅಧ್ಯಕ್ಷರು, ಆರ್‌ಐಸಿಎಂ ಇವರೊಡನೆ ಚರ್ಚೆ



ಡಾ. ನಂದೀಶ ಹಿರೇಮಠರವರೊಂದಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳ ಅಧ್ಯಯನ



ಶ್ರೀ ಎಸ್.ಎ. ಸಿದ್ಧಾಂತಿಯವರೊಂದಿಗೆ ಚರ್ಚೆ

ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಅಧ್ಯಕ್ಷರಾದ ಡಾ. ಬಿ.ಎಸ್. ವಿಶ್ವನಾಥನ್‌ರವರೊಂದಿಗೆ ಚರ್ಚಿಸಿದರು. ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲರವರನ್ನು ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ರಚನಾಕಾರರಾದ ಶ್ರೀ ಸಿ.ಎನ್.ಪರಶಿವಮೂರ್ತಿಯವರೊಡನೆ ಸೌಹಾರ್ದ ಸಹಕಾರಿ ಕಾಯ್ದೆಯ ಸ್ವರೂಪ ಹಾಗೂ ಕಾಯ್ದೆಯ ಆಶಯ ಮತ್ತು ಪ್ರಸಕ್ತ ಅದರ ಸ್ವರೂಪಗಳ ಕುರಿತು ವಿಚಾರ ವಿನಿಮಯ ಮಾಡಿದರು. ಹಿರಿಯ ಸಹಕಾರಿ ಮತ್ತು ಮಾಜಿ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರನ್ನು ಭೇಟಿ ಮಾಡಿ, ವಿವರಗಳನ್ನು ಸಂಗ್ರಹಿಸಿದರು.

ಬೆಂಗಳೂರಿನಲ್ಲಿ ಉದಯ ಸೌಹಾರ್ದ ಪತ್ತಿನ ಸಹಕಾರಿ ಮತ್ತು ಶ್ರೀ ಚರಣ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್, ತುಮಕೂರಿನಲ್ಲಿ ಶ್ರೀ ಸಿದ್ಧಗಂಗಾ ವಿದ್ಯಾ ಸಂಸ್ಥೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ, ಶ್ರೀ ಗುರುಕುಲ ವಿವಿಧೋದ್ದೇಶ ಸೌಹಾರ್ದ ಸಹಕಾರಿ, ಶಿವಶ್ರೀ ಸೌಹಾರ್ದ ಪತ್ತಿನ ಸಹಕಾರಿ, ವೀರರಾಣಿ ಚನ್ನಮ್ಮ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿಗಳಿಗೆ ಭೇಟಿ ಮಾಡಿ, ಸದರಿ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಮತ್ತು ಸದಸ್ಯರೊಡನೆ ಸಹಕಾರಿಯ ವ್ಯವಹಾರಗಳ ಬಗ್ಗೆ, ಅವರು ನಡೆಸುತ್ತಿರುವ ವ್ಯವಹಾರಗಳ ಕುರಿತು ಮಾಹಿತಿ ಪಡೆದರು.

## ಬೆಂಗಳೂರು ಹಾಗೂ ತುಮಕೂರು ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ













ಮೈಸೂರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಪ್ರೊ. ಯಶವಂತ ಡೋಂಗ್ರೆ ಹಾಗೂ ಅವರ ಪ್ರಾಧ್ಯಾಪಕರುಗಳಿಂದ ರಾಜ್ಯದ ಸೌಹಾರ್ದ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಸರಕಾರವು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಜಾರಿಗೆ ತಂದಿರುವ ಇತ್ತೀಚಿನ ತಿದ್ದುಪಡಿಗಳ ಬಗ್ಗೆ ವಿವರ ನೀಡಿದರು. ಡಾ. ಪರಂಜ್ಯೋತಿ, ನಿವೃತ್ತ ಪ್ರಾಧ್ಯಾಪಕರು, ವೈಕುಂಠ ಮೆಹತಾ ಇನ್ಸ್‌ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್ ಇವರು ದೇಶದ ಸ್ವಾಯತ್ತ ಸಹಕಾರಿ ಕಾಯ್ದೆಗಳ ಕಾರ್ಯಾಚರಣೆ ಅದರಲ್ಲೂ ವಿಶೇಷವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ವಿಶೇಷತೆಗಳು ಮತ್ತು ಸಾಫಲ್ಯಕ್ಕೆ ಕಾರಣಗಳ ಬಗ್ಗೆ ವಿವರಣೆ ನೀಡಿದರು.



ಮೈಸೂರು ವಿಶ್ವವಿದ್ಯಾಲಯಕ್ಕೆ ಭೇಟಿ



ಸಹಕಾರ ಇಲಾಖೆಗೆ ಭೇಟಿ

ಸಹಕಾರಿಗಳ ನಿಬಂಧಕರ ಕಛೇರಿಗೆ ಭೇಟಿದಾಗ ನೀಡಿ, ಸಹಕಾರಿಗಳ ಅಪರ ನಿಬಂಧಕರುಗಳಾದ ಶ್ರೀ ಕೆ.ಎಸ್.ನವೀನ್, ಶ್ರೀ ಎಸ್.ಎನ್.ಅರುಣಕುಮಾರ, ಶ್ರೀ ಗೋಪಾಲಕೃಷ್ಣ, ಸಹಕಾರ ಇಲಾಖೆಯ ಜಂಟಿ ನಿಬಂಧಕರುಗಳಾದ ಶ್ರೀ ಹೆಚ್.ಬಾಲಶೇಖರ, ಶ್ರೀಮತಿ ಲೀಲಾವತಿ, ಶ್ರೀ ಜಫರುಲ್ಲಾಖಾನ್, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದು, ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಹಕಾರ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿದರು.

ಪ್ರಾರಂಭದಲ್ಲಿ ಮಿಸ್. ಲಾರೆನ್ಸ್‌ರವರು ಕರ್ನಾಟಕದಲ್ಲಿ ಈ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದಂದಿನಿಂದ ಸೌಹಾರ್ದ ಸಹಕಾರಿ ಸಂಸ್ಥೆಗಳ

ಬೆಳವಣಿಗೆಗೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳಿಗೆ ಸಹಕಾರ ಇಲಾಖೆಯು ಉತ್ತಮವಾಗಿ ಸ್ಪಂದಿಸುತ್ತಾ ಬಂದಿದೆ. ಅದು ಮುಂದುವರೆಯಬೇಕು. ಇದು ದೇಶದಲ್ಲಿ ಮಾದರಿಯಾಗಿದೆ. ಇದು ಕರ್ನಾಟಕ ಸರಕಾರಕ್ಕೆ ಹಾಗೂ ಸಹಕಾರ ಇಲಾಖೆಗೆ ಹೆಮ್ಮೆಯ ವಿಷಯ. ಇದು ಅನುಕರಣೀಯವಾಗಿದೆ. ದೇಶಕ್ಕೆ ಮಾದರಿಯಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆಗೆ ಅವಶ್ಯಕವಾಗಿರುವ ತಿದ್ದುಪಡಿಗಳನ್ನು ಜಾರಿಗೆ ತಂದು ಸಂಪೂರ್ಣ ಸ್ವಾಯತ್ತತೆಯನ್ನು ಒದಗಿಸುವ ಪ್ರಯತ್ನ ಅಗತ್ಯ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸರಕಾರದ ಹಾಗೂ ಸಹಕಾರ ಇಲಾಖೆಯ ಪ್ರೋತ್ಸಾಹ ಅವಶ್ಯಕ ಎಂದು ತಿಳಿಸಿದರು.

## ಲಾರೆನ್ಸ್ ಹಮ್ಮನ್‌ರವರು ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್. ಪಾಟೀಲ ಹಾಗೂ ಶ್ರೀ ಸಿ.ಎನ್.ಪರಶಿವಮೂರ್ತಿಯವರೊಡನೆ ನಡೆಸಿದ ಚರ್ಚೆಯ ಪ್ರಮುಖ ಅಂಶಗಳು

**ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ - ಐಸಿಎ, ಏಷ್ಯಾ ಫೆಸಿಫಿಕ್ ವಿಭಾಗದಿಂದ ಭಾರತದ ಸ್ವಾಯತ್ತ ಕಾಯ್ದೆಗಳ ಹಾಗೂ ವಿಶೇಷವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳ ಅಧ್ಯಯನಕ್ಕಾಗಿ ಮಿಸ್. ಲಾರೆನ್ಸ್ ಹಮ್ಮನ್‌ರವರು ಬೆಂಗಳೂರಿಗೆ ಆಗಮಿಸಿದಾಗ ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲ ಹಾಗೂ ಶ್ರೀ ಸಿ.ಎನ್.ಪರಶಿವಮೂರ್ತಿಯವರೊಡನೆ ನಡೆಸಿದ ಚರ್ಚೆಯ ಪ್ರಮುಖ ಅಂಶಗಳು.**



**ಸೌಹಾರ್ದ ಸಹಕಾರಿ ಚಳುವಳಿಯನ್ನು ಹೇಗೆ ಜಾರಿಗೆ ತರಲಾಯಿತು?**

ಆರಂಭದಲ್ಲಿ ಸಹಕಾರ ಚಳುವಳಿಯ ಬೆಳವಣಿಗೆಯ ಸಂದರ್ಭದಲ್ಲಿ ಸಹಕಾರಿಗಳಿಗೆ ಸ್ವಾಯತ್ತತೆ ಇತ್ತು, ಸಹಕಾರ ತತ್ವಗಳ ಆಧಾರದಲ್ಲಿ ಚಳುವಳಿ ನಡೆಯುತ್ತಿತ್ತು. ಆದರೆ, ಸಹಕಾರ ಚಳುವಳಿ ಬೆಳವಣಿಗೆ ನಿರೀಕ್ಷಿತ ಪ್ರಮಾಣದಲ್ಲಿಲ್ಲ ಹಾಗೂ ಈ ಸ್ವಾಯತ್ತತೆಯ ದುರ್ಬಳಕೆ ಆಗುತ್ತಿದೆ ಎನ್ನುವ ಕಾರಣದೊಂದಿಗೆ ಸರ್ಕಾರದ ನೆರವಿನ ಬದಲಾವಣೆ ತರಲಾಯಿತು. ಅದು ಮುಂದುವರೆದಂತೆ ಸರ್ಕಾರದ ಹಸ್ತಕ್ಷೇಪಕ್ಕೂ ಕಾರಣವಾಯಿತು. ನಂತರದಲ್ಲಿ ಅನೇಕ ಅಧ್ಯಯನಗಳು ನಡೆದು ಸ್ವಾಯತ್ತ ಕಾಯ್ದೆಯ ಜಾರಿಗೆ ಕೇಂದ್ರ ಸರ್ಕಾರ ಶಿಫಾರಸ್ಸು ಮಾಡಿದ ನಂತರದಲ್ಲಿ, ಕರ್ನಾಟಕದಲ್ಲಿ ನಾನು ಸಹಕಾರ ಸಚಿವನಾಗಿದ್ದಾಗ ಈ ಕಾಯ್ದೆ ಜಾರಿಗೆ ತರುವ ಪ್ರಯತ್ನ ಮಾಡಿದೆ. ಆ ಸಂದರ್ಭದಲ್ಲಿ ಬಹುತೇಕ ಶಾಸಕರು ಸಹಮತ ವ್ಯಕ್ತಪಡಿಸಲಿಲ್ಲವಾದಾಗ್ಯೂ, ಸಹ ಸಹಕಾರ ಕ್ಷೇತ್ರದ ಒಳಿತಿಗಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಈ ಕಾಯ್ದೆಯ ಜಾರಿಗೆ ಅವಕಾಶವಾಗದಿದ್ದಲ್ಲಿ ನನಗೆ ಸಹಕಾರ ಸಚಿವ ಪದವಿಯೇ ಬೇಡ ಎಂದು ನನ್ನ ಅಭಿಪ್ರಾಯ ವ್ಯಕ್ತಪಡಿಸಿದಾಗ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಶಾಸಕರನ್ನು ಮನೊಲಿಸುವುದರಲ್ಲಿ ಯಶಸ್ವಿಯಾದ ನಂತರ ಕಾಯ್ದೆ ಜಾರಿ ಸಾಧ್ಯವಾಯಿತು.

**ಸೌಹಾರ್ದ ಕಾಯ್ದೆಗೆ ಏಕೆ ವಿರೋಧ ವ್ಯಕ್ತವಾಯಿತು?**

ಇದುವರೆಗಿನ ಆಡಳಿತ ಅನುಭವ, ನಿಯಂತ್ರಣದ ಅಧಿಕಾರ ಇದ್ದಾಗ ಕೂಡ ಸಹಕಾರ ಚಳುವಳಿ ಅಭಿವೃದ್ಧಿ ಆಗದಿರುವಾಗ ಸ್ವಾಯತ್ತತೆ ನೀಡಿದರೆ ದುರ್ಬಳಕೆಯ ಸಾಧ್ಯತೆ ಹೆಚ್ಚಾಗಬಹುದು ಎನ್ನುವ ಭಾವನೆ ಹಾಗೂ ಮೊದಲಿನಿಂದಲೂ ಸರ್ಕಾರದ ನಿಯಂತ್ರಣದಲ್ಲಿದ್ದ ಈ ಚಳುವಳಿಯನ್ನು ಸ್ವತಂತ್ರವಾಗಿ ಬಿಡುವ ಮಾನಸಿಕತೆ ಶಾಸಕರುಗಳಿಗೆ ಹಾಗೂ ಸರ್ಕಾರಿ ಅಧಿಕಾರಿಗಳಿಗೆ ಬರುವುದು ಕಷ್ಟವಾಗಿತ್ತು. ಹೀಗಾಗಿ ವಿರೋಧ ವ್ಯಕ್ತವಾಗಲು ಕಾರಣವಾಗಿರಬಹುದು.

**ಆ ಸಂದರ್ಭದಲ್ಲಿ ತಮ್ಮ ಉದ್ದೇಶ ಏನಿತ್ತು? ಅದು ಸಫಲವಾಗಿದೆಯೇ?**

ಯಾವುದೇ ಬದಲಾವಣೆಗೆ ಸಿದ್ಧರಾಗದಿದ್ದಲ್ಲಿ ಸಹಕಾರ ಕ್ಷೇತ್ರ ನಿಂತ ನೀರಿನಂತಾಗುತ್ತದೆ. ಹಾಗಾಗಿ ಬದಲಾವಣೆ ತರಲೇ ಬೇಕು ಎನ್ನುವುದು ನಮ್ಮ ಉದ್ದೇಶವಾಗಿತ್ತು, ಅಲ್ಲದೇ, ಹೊಸ ವ್ಯವಸ್ಥೆಯನ್ನು ಜಾರಿಗೆ ತಂದು ಯಾವುದೇ ಹಸ್ತಕ್ಷೇಪವಿಲ್ಲದೆ ಅದರ ಬೆಳವಣಿಗೆಯನ್ನು ಗಮನಿಸಬೇಕು ಎನ್ನುವುದು ನನ್ನ ಅಪೇಕ್ಷೆಯಾಗಿತ್ತು. ಸಫಲವಾಗಿಲ್ಲ ಎನ್ನಲು ಸಾಧ್ಯವಿಲ್ಲ, ಆದರೂ ಸಫಲವಾಗಿದೆ ಎನ್ನಲು ಕೂಡ ಆಗುತ್ತಿಲ್ಲ, ಏಕೆಂದರೆ ಕಳೆದ 17 ವರ್ಷಗಳಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಈ ಚಳುವಳಿ ಉತ್ತಮವಾಗಿ ಬೆಳೆಯುತ್ತಿರುವಾಗ ನಿರಂತರವಾಗಿ ಕಾಯ್ದೆ ತಿದ್ದುಪಡಿ ಮಾಡುವ ಮೂಲಕ ಕಾಯ್ದೆಯ ಮೂಲ ಆಶಯವನ್ನೇ ಸರ್ಕಾರ ದುರ್ಬಲಗೊಳಿಸುತ್ತಿದೆ ಎಂಬ ಅಂಶವನ್ನು ಸರಕಾರದ ಗಮನ ಸೆಳೆಯಬೇಕಾಗಿದೆ. ಸಫಲತೆಯ ಹಾದಿಯಲ್ಲಿ ಇದ್ದೇವೆ, ಆದರೂ ಸಂಪೂರ್ಣ ಸಫಲತೆಯ ಕಡೆಗೆ ನಮ್ಮ ಹೆಜ್ಜೆ.

**ಬೇರೆ ಕೆಲವು ರಾಜ್ಯಗಳಲ್ಲಿ ಸ್ವಾಯತ್ತ ಕಾಯ್ದೆಗಳಿವೆ, ಆದರೆ ಕರ್ನಾಟಕದಲ್ಲಿ ಇದ್ದಂತೆ ಸಂಯುಕ್ತ ಸಹಕಾರಿಯ ಮಾದರಿ ಅನ್ಯ ರಾಜ್ಯಗಳಲ್ಲಿಲ್ಲ, ಈ ಮಾದರಿ ಅಗತ್ಯವೆಂದು ತಮಗೆ ಕಾಯ್ದೆ ರೂಪಿಸುವಾಗ ಅನಿಸಿತು?**

ಕಾಯ್ದೆ ರೂಪಿಸುವ ಸಂದರ್ಭದಲ್ಲಿ ಪೂರ್ಣವಾಗಿ ಸ್ವಾತಂತ್ರ್ಯ ನೀಡಿದಾಗ ದುರ್ಬಳಕೆಯಾದಲ್ಲಿ ಯಾರು ನಿಯಂತ್ರಿಸಬೇಕು ಎನ್ನುವ ಬಗ್ಗೆ ಚರ್ಚೆಯಾಯಿತು, ಇಲಾಖಾ ಅಧಿಕಾರಿಗಳಿಗೆ ನೀಡಿದಲ್ಲಿ ಮತ್ತೆ ಸಾಂಪ್ರದಾಯಿಕ ಕಾಯ್ದೆಯಂತೆ ಪರಿಣಾಮ ಆಗುತ್ತದೆ ಎನಿಸಿದಾಗ, ಸಹಕಾರಿಗಳೇ ಆಯ್ಕೆ ಮಾಡುವ, ಅವರಿಂದಲೇ ನಿಯಂತ್ರಿಸಲ್ಪಡುವ ಸಂಸ್ಥೆಯೊಂದನ್ನು ರೂಪಿಸಬೇಕು ಎನ್ನುವ ಅಭಿಪ್ರಾಯದ ಆಧಾರದಲ್ಲಿ ಸಂಯುಕ್ತ ಸಹಕಾರಿಯ ರಚನೆಯಾಯಿತು. ಇದನ್ನು ಜಾರಿಗೆ ತಂದಿರುವುದರಿಂದ ಸ್ವಾಯತ್ತತೆ ಸ್ವೇಚ್ಛಾಚಾರವಾಗದಂತೆ ಸಂಯುಕ್ತ ಸಹಕಾರಿ ಶಿಕ್ಷಣ ನೀಡುವ ಮೂಲಕ ಮೇಲುಸ್ತುವಾರಿ ಮಾಡುವ ಮೂಲಕ ಸೌಹಾರ್ದ ಚಳುವಳಿಯನ್ನು ಬೆಳೆಸುತ್ತಿದೆ. ಆದರೆ, ಬೇರೆ ರಾಜ್ಯಗಳಲ್ಲಿ ಈ ಸ್ವರೂಪದ ಸಂಸ್ಥೆ ಇಲ್ಲದಿರುವುದರಿಂದ ಸ್ವಾಯತ್ತ ಕಾಯ್ದೆಯ ಬೆಳವಣಿಗೆ ಸಾಧ್ಯವಾಗಿಲ್ಲ ಹಾಗೂ ಪರೋಕ್ಷವಾಗಿ ಸರ್ಕಾರವೇ ನಿಯಂತ್ರಣ ಮಾಡುತ್ತಿದೆ. ಕರ್ನಾಟಕದಲ್ಲೂ ಕೂಡ ಸಂಯುಕ್ತ ಸಹಕಾರಿಯ ಹಲವು ಅಧಿಕಾರಗಳನ್ನು ಮೊಟಕುಗೊಳಿಸುವ ಕಾರ್ಯ ತಿದ್ದುಪಡಿಗಳ ಮೂಲಕ ಆಗಿದೆ. ಇದು ಖೇದದ ಸಂಗತಿ. ಸೌಹಾರ್ದ ಸಹಕಾರಿ ಕಾಯ್ದೆಯ ಮೂಲ ಆಶಯಕ್ಕೆ ಸರಕಾರ ಹಾಗೂ ಸಹಕಾರ ಇಲಾಖೆ ಪ್ರೋತ್ಸಾಹಿಸುವುದು ಅವಶ್ಯಕ.

**ಹೆಚ್ಚಿನ ಸಹಕಾರ ಸಂಘಗಳು ಈ ಕಾಯ್ದೆಗೆ ಪರಿವರ್ತನೆಯಾಗಲಿಲ್ಲ, ಇದಕ್ಕೆ ಕಾರಣವೇನಿರಬಹುದು?**

ಈ ಕಾಯ್ದೆಯನ್ನು ಜಾರಿಗೆ ತರುವಾಗ ಅನೇಕ ಸಹಕಾರಿಗಳು 1959ರ ಕಾಯ್ದೆಯಿಂದ ಪರಿವರ್ತನೆಯಾಗಿ ಈ ಕಾಯ್ದೆಗೆ ಬರುತ್ತವೆ ಎಂದು

ಭಾವಿಸಲಾಗಿತ್ತು. ಆದರೆ, ನಮ್ಮ ನಿರೀಕ್ಷೆಯಷ್ಟು ಪರಿವರ್ತನೆ ಆಗಲಿಲ್ಲ. ಏಕೆಂದರೆ ಹಿಂದಿನ ಕಾಯ್ದೆಯಲ್ಲಿ ಬಹುತೇಕ ಸಹಕಾರ ಸಂಘಗಳು ಒಂದಲ್ಲ ಒಂದು ಸ್ವರೂಪದಲ್ಲಿ ಸರ್ಕಾರದ ಅನುದಾನ, ಸಬ್ಸಿಡಿಗಳನ್ನು ಪಡೆಯುವಂತವೇ ಆಗಿದ್ದವು, ಆದ್ದರಿಂದ, ಸರ್ಕಾರದ ಅನುದಾನಗಳನ್ನು ಪಡೆಯುವ ಅಪೇಕ್ಷೆಯುಳ್ಳ ಸಹಕಾರಿಗಳು ಪರಿವರ್ತನೆಗೆ ಸಿದ್ಧರಾಗಲಿಲ್ಲ. ಅಲ್ಲದೇ, ಆರಂಭದಲ್ಲಿ ಸೌಹಾರ್ದ ಸಹಕಾರಿಗಳೆಂದರೆ ಸ್ವೇಚ್ಛಾಚಾರಿ ಸಂಸ್ಥೆಗಳು ಯಾರ ನಿಯಂತ್ರಣವೂ ಇಲ್ಲ ಎನ್ನುವಂತಹ ಮಾನಸಿಕತೆ ಜನರಲ್ಲಿ ತುಂಬಿತ್ತು ಮತ್ತು ಪರಿವರ್ತನೆಯಾದ ತಕ್ಷಣ ಪುನಃ ಚುನಾವಣೆ ನಡೆಯಬೇಕಿತ್ತು. ಇದು ಕೂಡ ಹಿನ್ನೆಡೆಗೆ ಕಾರಣವಾಯಿತು ಅನ್ನಿಸುತ್ತದೆ.

**ಸೌಹಾರ್ದ ಸಹಕಾರಿ ಕ್ಷೇತ್ರದ ಸ್ವರೂಪದ ಕಾಯ್ದೆಯನ್ನು ಎಲ್ಲಾ ರಾಜ್ಯಗಳಿಗೆ ವಿಸ್ತರಿಸಲು ಇರುವ ತೊಡಕುಗಳೇನು?**

ಮೊದಲನೆಯದಾಗಿ ರಾಜಕೀಯ ಇಚ್ಛಾಶಕ್ತಿಯ ಕೊರತೆ, ಅಧಿಕಾರದಲ್ಲಿರುವವರು ತಮ್ಮ ಹಿಡಿತ ತಪ್ಪುವುದನ್ನು ಬಯಸುವುದಿಲ್ಲ, ಇದರಿಂದಾಗಿ ಸರ್ಕಾರದ ನಿಯಂತ್ರಣವಿಲ್ಲದ ವ್ಯವಸ್ಥೆಗೆ ಸರ್ಕಾರದಿಂದಲೇ ವಿರೋಧ ವ್ಯಕ್ತವಾಗಬಹುದು, ಸೌಹಾರ್ದ ಸಹಕಾರಿ ಕ್ಷೇತ್ರದ ಅನುಭವದ ಆಧಾರದಲ್ಲಿ ರಾಷ್ಟ್ರಮಟ್ಟದ ಸಂಸ್ಥೆಗಳು, ಎನ್‌ಸಿಯುಐ ಇಂತಹ ಮಾದರಿಯ ಅಗತ್ಯತೆಯನ್ನು ರಾಷ್ಟ್ರಮಟ್ಟದಲ್ಲಿ ಪ್ರಸ್ತಾಪಿಸುವ ಕೆಲಸ ಮಾಡಿದರೆ ವಿಸ್ತರಿಸಲು ಸಾಧ್ಯವಾಗಬಹುದು.

**ಸಂಯುಕ್ತ ಸಹಕಾರಿ ಮಾದರಿ ಎಲ್ಲಾ ರಾಜ್ಯಗಳಲ್ಲಿ ಬರುವ ಅಗತ್ಯವಿದೆಯೇ? ಏಕೆ?**

ಸಹಕಾರ ಚಳುವಳಿ ಮೂಲ ತತ್ವಗಳ ಆಧಾರದಲ್ಲಿ ನಡೆಯಬೇಕೆಂದರೆ, ಇದು ಜನರ ಚಳುವಳಿಯಾಗಬೇಕೆಂದರೆ ಸೌಹಾರ್ದ ಸಹಕಾರಿ ಚಳುವಳಿ ಎಲ್ಲಾ ರಾಜ್ಯಗಳಿಗೂ ವಿಸ್ತರಿಸಲ್ಪಡಬೇಕು ಹಾಗೂ ಇಂತಹ ಚಳುವಳಿಯ ನೇತೃತ್ವವನ್ನು ಸಹಕಾರಿಗಳಿಂದಲೇ ಆಯ್ಕೆಯಾದ ಸಂಸ್ಥೆ ನಡೆಸಬೇಕು, ಅಂದರೆ ಸಹಕಾರ ಚಳುವಳಿಯ ಬೆಳವಣಿಗೆಯೂ ಆದಂತಾಗುತ್ತದೆ, ಸ್ವಾಯತ್ತತೆಗೂ ಧಕ್ಕೆಯಾಗದಂತೆ ಅವಕಾಶಗಳು ದುರ್ಬಳಕೆ ಆಗದಂತೆ ಸಹಕಾರ ಚಳುವಳಿ ನಡೆಯಲು ಸಾಧ್ಯವಾಗುತ್ತದೆ.

**ರಾಷ್ಟ್ರಮಟ್ಟದಲ್ಲಿ ಈ ಬಗ್ಗೆ ಅರಿವು ಮೂಡಿಸಲು ಸಂಯುಕ್ತ ಸಹಕಾರಿ ಏನು ಪ್ರಯತ್ನ ಮಾಡಬೇಕೆಂದು ತಮ್ಮ ಅಭಿಪ್ರಾಯ?**

ಈಗಾಗಲೇ ಎನ್‌ಸಿಯುಐ ಹಾಗೂ ಐಸಿಎಯ ನೇತೃತ್ವದಲ್ಲಿ ಸ್ವಾಯತ್ತ ಕಾಯ್ದೆಗಳ ಸೆಮಿನಾರ್ ಆಯೋಜಿಸುವ ಯೋಜನೆ ರೂಪಿಸಿರುವುದು, ಸಂಯುಕ್ತ ಸಹಕಾರಿಯ ಮಾದರಿಯನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸುತ್ತಿರುವುದು ನಡೆಯುತ್ತಿದೆ. ಅಲ್ಲದೇ, ರಾಷ್ಟ್ರಮಟ್ಟದ ಸಂಘಟನೆಯಾದ ಸಹಕಾರ ಭಾರತಿಯ ಮೂಲಕವೂ ಅನೇಕ ಪ್ರಯತ್ನ ಜಾರಿಯಲ್ಲಿದೆ. ಎಲ್ಲಾ ರಾಜ್ಯ ಸರ್ಕಾರಗಳಿಗೆ ಹಾಗೂ ಕೇಂದ್ರ ಸರ್ಕಾರಕ್ಕೆ ಸೌಹಾರ್ದ ಸಹಕಾರಿ ಕಾಯ್ದೆಯ ಮಾದರಿಯನ್ನು, ಸಂಯುಕ್ತ ಸಹಕಾರಿಯ ಸ್ವರೂಪವನ್ನು ಪರಿಚಯಿಸುವ ಕಾರ್ಯ ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಯಬೇಕಿದೆ.

**ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಸಹಕಾರ ಇಲಾಖೆಯ ಪ್ರಯತ್ನವೇನು?**

ಸಹಕಾರ ಇಲಾಖೆ ಇದಕ್ಕೆ ಪ್ರೋತ್ಸಾಹಿಸಬೇಕು. ಅಧಿಕಾರಿಗಳು ಸಹಕಾರ ತತ್ವ ಪ್ರಜಾಪ್ರಭುತ್ವದ ತಳಹದಿ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳಬೇಕು. ಕೇವಲ ಅಂಕುಶದ ಆಧಾರದ ಮೇಲೆ ಸಹಕಾರ ಕ್ಷೇತ್ರವನ್ನು ಬೆಳೆಸಲು ಸಾಧ್ಯವಿಲ್ಲ. ಸಹಕಾರ ಇಲಾಖೆಗಾಗಿ ಸಹಕಾರ ಚಳುವಳಿಯಲ್ಲ. ಸಹಕಾರ ಚಳುವಳಿ ಅಭಿವೃದ್ಧಿಗಾಗಿ ಸಹಕಾರ ಇಲಾಖೆ ಕಾರ್ಯನಿರ್ವಹಿಸಬೇಕು.

**ಪ್ರಸಕ್ತ ಸರ್ಕಾರದ ಅಭಿಪ್ರಾಯವೇನು?**

ಪ್ರಸ್ತುತ ಸರಕಾರ ಈಗ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಬೆಂಬಲಿಸುತ್ತಿದೆ. ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಉತ್ತಮ ಅಭಿಪ್ರಾಯವನ್ನು ಹೊಂದಿದೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳೂ ಸಹ ಸಮಾಧಾನಕರವಾಗಿವೆ. ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂಬುದು ಸರಕಾರದ ಅಭಿಪ್ರಾಯ. ಪ್ರೋತ್ಸಾಹ ನಿರಂತರವಾಗಿರಬೇಕು ಎನ್ನುವುದು ಸೌಹಾರ್ದ ಸಹಕಾರಿಗಳ ಅಪೇಕ್ಷೆ.

**ಸಂವಿಧಾನ ತಿದ್ದುಪಡಿಯ ನಂತರ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಾಂಪ್ರದಾಯಿಕ ಕಾಯ್ದೆಯ ಸ್ವರೂಪವೇನು?**

97ನೇ ಸಂವಿಧಾನ ತಿದ್ದುಪಡಿ ಎಲ್ಲಾ ಸಹಕಾರ ಕಾಯ್ದೆಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಿದೆ. ಆದರೆ, ಸಂವಿಧಾನ ತಿದ್ದುಪಡಿಯ ಆಶಯವನ್ನು ಸಂಪೂರ್ಣವಾಗಿ ಅಳವಡಿಸಲು ರಾಜ್ಯ ಸಹಕಾರ ಕಾಯ್ದೆಗಳಿಗೆ ಸಾಧ್ಯವಾಗಿಲ್ಲ. ಸಾಂಪ್ರದಾಯಿಕ ಕಾಯ್ದೆಯಲ್ಲಿ ಸರಕಾರದ ಹಾಗೂ ಸಹಕಾರ ಇಲಾಖೆಯ ನಿಯಂತ್ರಣ ಕಡಿಮೆಯಾಗಿಲ್ಲ. ಇದರ ಮರುಪರಿಶೀಲನೆ ಅಗತ್ಯ. ಸೌಹಾರ್ದ ಸಹಕಾರ ಕಾಯ್ದೆಯಲ್ಲಿ ಹೆಚ್ಚಿನ ಸ್ವಾಯತ್ತತೆ ಹಾಗೂ ವ್ಯವಹಾರಿಕ ಸ್ವಾತಂತ್ರ್ಯ ಇದೆ. ಆದಾಗ್ಯೂ ಕೂಡ ಸಹಕಾರಿಗಳ ನಿಬಂಧಕರ ಹಸ್ತಕ್ಷೇಪಕ್ಕೆ ಅವಕಾಶ ಕಲ್ಪಿಸಿರುವುದು ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸಂವಿಧಾನ ತಿದ್ದುಪಡಿ ಆಶಯಕ್ಕೆ ಪೂರಕವಾಗಿಲ್ಲ. ಈ ಬಗ್ಗೆ ಸಹಕಾರಿಗಳು ಸರಕಾರದ ಗಮನ ಸೆಳೆಯುವ ಪ್ರಯತ್ನ ಮಾಡುವುದು ಅಗತ್ಯ.

ಸಂವಾದದ ಕೊನೆಯಲ್ಲಿ ಮಿಸ್. ಲಾರೆನ್ಸ್ ಹಮ್ಮನ್‌ರವರು ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳು ಅಧ್ಯಯನ ಯೋಗ್ಯ ಹಾಗೂ ಅನುಕರಣೀಯವಾಗಿವೆ. ಈ ವ್ಯವಸ್ಥೆ ದೇಶದ ಎಲ್ಲಾ ರಾಜ್ಯಗಳಲ್ಲಿ ಬರುವ ಹಾಗೇ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ರಾಷ್ಟ್ರೀಯ ಸಹಕಾರಿ ಯೂನಿಯನ್ ಹಾಗೂ ಕೇಂದ್ರ ಸರಕಾರದ ಗಮನ ಸೆಳೆಯಲಿದೆ ಎಂದು ತಿಳಿಸಿದರು.



## ಸಂಯುಕ್ತ ಸಹಕಾರಿಯ 2018ನೇ ಸಾಲಿನ ಕ್ಯಾಲೆಂಡರ್ ಮತ್ತು ಟೇಬಲ್ ಕ್ಯಾಲೆಂಡರ್‌ಗಳ ಬಿಡುಗಡೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ 2018ನೇ ಸಾಲಿನ ಕ್ಯಾಲೆಂಡರ್ ಮತ್ತು ಟೇಬಲ್ ಕ್ಯಾಲೆಂಡರ್‌ಗಳನ್ನು ಮಾನ್ಯ ಸಹಕಾರಿಗಳ ನಿಬಂಧಕರಾದ ಶ್ರೀ ಎಂ.ಕೆ. ಅಯ್ಯಪ್ಪರವರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರುಗಳಾದ ಶ್ರೀ ಬಿ.ಎಸ್.ಗುಂಡುರಾವ್, ಶ್ರೀ ಆರ್.ಎನ್.ದೇಶಪಾಂಡೆ ಮತ್ತು ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್ ಹಾಗೂ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ.ರವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರುಗಳಿಗಾಗಿ ನಡೆದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದ ವರದಿ





### ತರಬೇತಿಯಿಂದ ವೃತ್ತಿ ಕೌಶಲ್ಯ ಬೆಳೆಯಲು ಸಾಧ್ಯ : ಶ್ರೀ ಎಸ್.ಎನ್.ಅರುಣ ಕುಮಾರ

**ಬೆಂಗಳೂರು :** ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರುಗಳಿಗಾಗಿ ಇಲ್ಲಿನ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ 18ನೇ ತಂಡದ ತರಬೇತಿಯ ಉದ್ಘಾಟನೆಯನ್ನು ದಿನಾಂಕ : 07-12-2017ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಎನ್. ಅರುಣ ಕುಮಾರರವರು ಉದ್ಘಾಟಿಸಿ, ರಾಜ್ಯದ ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ನಿರಂತರ ತರಬೇತಿ ಅಗತ್ಯವಾಗಿದೆ. ತರಬೇತಿಯಿಂದಲೇ ಪ್ರಾವಿಣ್ಯತೆ ಹಾಗೂ ವೃತ್ತಿ ಕೌಶಲ್ಯ ಬೆಳೆಯಲು ಸಾಧ್ಯವಾಗುತ್ತದೆ. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಈ ಎರಡು ಸಂಸ್ಥೆಗಳು ಸಹ ರಾಜ್ಯದಲ್ಲಿ ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಂಸ್ಥೆಗಳಾಗಿವೆ. ಇದರಿಂದಾಗಿ ಸಹಕಾರ ಕ್ಷೇತ್ರ ಆರೋಗ್ಯಕರವಾಗಿ ಬೆಳೆಯಲು ಸಾಧ್ಯ ಎಂದು ತಿಳಿಸಿದರು.

### ಶಿಬಿರಾರ್ಥಿಗಳ ಅಧ್ಯಯನದ ಜೊತೆಗೆ ಸರ್ವಾಂಗೀಣ ಅಭಿವೃದ್ಧಿಯ ಕಾಳಜಿ ಶಿಬಿರಗಳ ಯಶಸ್ಸಿನ ಗುಟ್ಟು – ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ, ವೇಗಕ್ಕೆ ತಕ್ಕಂತೆ ಸಂಯುಕ್ತ ಸಹಕಾರಿಯ ಕಾರ್ಯನಿರ್ವಹಣೆ, ಅದಕ್ಕಾಗಿ ಪರಿಣಾಮಕಾರಿ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ವಿಶೇಷವಾಗಿ ಇದು ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರ ವ್ಯಕ್ತಿತ್ವ ವಿಕಸನಕ್ಕಾಗಿ, ಅವರ ವೃತ್ತಿ ಕೌಶಲ್ಯವನ್ನು ಹೆಚ್ಚಿಸುವುದಕ್ಕಾಗಿ ಮತ್ತು ಅವರನ್ನು ಸೌಹಾರ್ದ ಸಹಕಾರಿ ಕ್ಷೇತ್ರದ ರಾಯಭಾರಿಗಳನ್ನಾಗಿ ಪರಿವರ್ತಿಸುವ ತರಬೇತಿ ಎಂದರು ತಿಳಿಸಿದರು. ಇದರಲ್ಲಿ ಶಿಬಿರಾರ್ಥಿಗಳ ಅಧ್ಯಯನದ ಜೊತೆಗೆ ಆರೋಗ್ಯ ಮತ್ತು ತರಬೇತಿ ಅವಧಿಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳಲ್ಲಿ ಭಾಗವಹಿಸುವ ಬಗ್ಗೆ ಆಸಕ್ತಿಯನ್ನು ತುಂಬುವ ಕಾರ್ಯ ಮಾಡಲಾಗುತ್ತದೆ. ಶಿಬಿರಾರ್ಥಿಗಳ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಲಾಗುತ್ತದೆ. ಇದುವರೆಗೆ ಸಂಯುಕ್ತ ಸಹಕಾರಿಯು ನಡೆಸಿಕೊಂಡು ಬಂದ ತರಬೇತಿ ಕಾರ್ಯಕ್ರಮಗಳ ಯಶಸ್ಸಿನ ಗುಟ್ಟು ಶಿಬಿರಾರ್ಥಿಗಳ ಅಧ್ಯಯನದ ಜೊತೆಗೆ ಸರ್ವಾಂಗೀಣ ಅಭಿವೃದ್ಧಿಯ ಕಾಳಜಿಯೇ ಪ್ರಮುಖ ಕಾರಣ ಎಂದು ತಿಳಿಸಿದರು.

### ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಶಿಸ್ತು ಹಾಗೂ ಸಮಯ ನಿರ್ವಹಣೆ ಸ್ವಾಗತಾರ್ಹ – ಶ್ರೀ ವಸಂತ ನಾಯಕ

ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ಸಂಯುಕ್ತ ಸಹಕಾರಿಯ ವತಿಯಿಂದ ಹಮ್ಮಿಕೊಳ್ಳುತ್ತಿರುವ ಅನೇಕ ತರಬೇತಿ ಕಾರ್ಯಕ್ರಮಗಳನ್ನು ನಮ್ಮ ಸಂಸ್ಥೆಯ ಜೊತೆಗೂಡಿ ಹಮ್ಮಿಕೊಳ್ಳಲಾಗುತ್ತಿದೆ. ಅತ್ಯಂತ ಶಿಸ್ತಿನಿಂದ ಹಾಗೂ ಸಮಯಕ್ಕೆ ಸರಿಯಾಗಿ, ಉತ್ತಮ ಸಂಪನ್ಮೂಲ ವ್ಯಕ್ತಿಗಳು, ಉತ್ತಮ ವಿಷಯಗಳನ್ನು ಅಳವಡಿಸಿ, ವ್ಯವಸ್ಥೆ ಮಾಡಲಾಗುತ್ತಿದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಇತರರಿಗೆ ಮಾದರಿಯಾಗಿವೆ ಎಂದು ತಿಳಿಸಿದರು.

### ತರಬೇತಿಯ ಪ್ರಯೋಜನ ಪಡೆಯಿರಿ – ಶ್ರೀ ಬಿ.ಎಸ್.ಗುಂಡುರಾವ್

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್.ಗುಂಡುರಾವ್‌ರವರು ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ ವ್ಯವಸ್ಥೆಯನ್ನು ಉತ್ತಮಗೊಳಿಸಬೇಕಾದರೆ ತರಬೇತಿ ಅಗತ್ಯ. ತರಬೇತಿಗಳ ಪ್ರಭಾವದಿಂದಲೇ ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

### ಶ್ರೀಮತಿ ಫಾತೀಮ ಲಾರೆನ್ಸ್‌ರವರಿಗೆ ಅಭಿನಂದನೆ



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಬೆಂಗಳೂರು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರಾದ ಶ್ರೀಮತಿ ಫಾತೀಮ ಲಾರೆನ್ಸ್‌ರವರು ಸೌಹಾರ್ದ ಸಹಕಾರಿ ಚಳುವಳಿಯಾಗಲಿ, ಸಹಕಾರ ಚಳುವಳಿಯಾಗಲಿ ಹುಟ್ಟಿಕೊಂಡಿರುವುದು ಸಮಾಜದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ. ಆದ್ದರಿಂದ, ಈ ಕ್ಷೇತ್ರ ಸದೃಢವಾಗಿ ಬೆಳೆಯಬೇಕು. ಉತ್ತಮವಾಗಿ ಕಾರ್ಯನಿರ್ವಹಿಸಬೇಕು.

ಅದಕ್ಕಾಗಿ ತರಬೇತಿ ಕಾರ್ಯಕ್ರಮಗಳು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಫಾತೀಮ ಲಾರೆನ್ಸ್‌ರವರಿಗೆ 2017ನೇ ಸಾಲಿನ 'ಸಹಕಾರ ರತ್ನ' ಪ್ರಶಸ್ತಿ ಬಂದಿರುವುದಕ್ಕಾಗಿ ಅವರನ್ನು ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದಿಸಲಾಯಿತು.

## ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ನಿರ್ವಹಣೆಗೆ ಆದ್ಯತೆ - ಶ್ರೀ ಶರಣಗೌಡ ಜಿ. ಪಾಟೀಲ

ಪ್ರಾರಂಭದಲ್ಲಿ ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಜ್ಯದ ಸೌಹಾರ್ದ ಸಹಕಾರಿಯ ಆರೋಗ್ಯಕರ ಬೆಳವಣಿಗೆಗಾಗಿ ರಾಜ್ಯದಾದ್ಯಂತ ಅತ್ಯಂತ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಈ ಸೌಹಾರ್ದ ಸಹಕಾರಿ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡಿರುವ ಅಧ್ಯಕ್ಷರಿಂದ ಸದಸ್ಯರವರೆಗೆ, ವ್ಯವಸ್ಥಾಪಕ ನಿರ್ದೇಶಕರಿಂದ ಉಪಸಿಬ್ಬಂದಿಯಾದಿಯಾಗಿ ಎಲ್ಲರಿಗೂ ತರಬೇತಿ ಅಗತ್ಯ ಎಂಬುದನ್ನು ಮನಗಂಡು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ಉತ್ತಮ ತರಬೇತಿಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದಾರೆ. ವಿಶೇಷವಾಗಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವರ್ಷದಲ್ಲಿ ಎರಡು ಬಾರಿ 10 ದಿನಗಳ ತರಬೇತಿಯನ್ನು, ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ ವರ್ಷದಲ್ಲಿ ಒಂದು ಬಾರಿ 7 ದಿನಗಳ ತರಬೇತಿಗಳನ್ನು ತಪ್ಪದೇ ನಡೆಸಿಕೊಂಡು ಬರುವುದರ ಜೊತೆಗೆ ತರಬೇತಿ ಕಾರ್ಯಕ್ರಮಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದರಲ್ಲಿ ಯಶಸ್ವಿಯಾಗಿದೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರರವರು ವಂದನೆ ಸಲ್ಲಿಸಿದರು.



ಸಾಂಸ್ಕೃತಿಕ ಕಾರ್ಯಕ್ರಮ

**ಪ್ರತಿ ದಿನದ ಕಾರ್ಯಕ್ರಮಗಳು :** ಪ್ರತಿ ದಿನ ಬೆಳಿಗ್ಗೆ 6-00 ಗಂಟೆಗೆ ಯೋಗ ಶಿಕ್ಷಣದಿಂದ ಪ್ರಾರಂಭವಾಗುತ್ತಿದ್ದ ಈ ತರಬೇತಿಯ 10 ದಿನಗಳ ತರಬೇತಿಯ ಅವಧಿಯಲ್ಲಿ ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶವಾಗುವಂತೆ ವಿವಿಧ ತಂಡಗಳ ರಚನೆ, ತಂಡಗಳಿಂದ ಪ್ರಾರ್ಥನೆ, ಸ್ವಾಗತ, ಮುಖ್ಯ ಅತಿಥಿಗಳ ಪರಿಚಯ, ವಂದನಾರ್ಪಣೆ ಮತ್ತು ಪ್ರತಿ ದಿನದ ವರದಿಗಳ ಸಿದ್ಧಪಡಿಸುವಿಕೆಗಳನ್ನು ವಹಿಸಿಕೊಡಲಾಗಿತ್ತು. ಉತ್ತಮ ಅಧ್ಯಯನ ಸಾಹಿತ್ಯವನ್ನು ಒದಗಿಸಲಾಗಿತ್ತು.

ತರಬೇತಿಯ ಅವಧಿಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ 25 ವಿಷಯಗಳು, 25 ಸಂಪನ್ಮೂಲ ವ್ಯಕ್ತಿಗಳು, 2 ಸಾಂಸ್ಕೃತಿಕ ಕಾರ್ಯಕ್ರಮಗಳು, 4 ಪ್ರಾಯೋಗಿಕಗಳು, 5 ಯಶಸ್ವಿ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರೊಂದಿಗೆ ಸಂವಾದ, ಸಿಂಗನಾಯಕನಹಳ್ಳಿ ರೈತ ಸೇವಾ ಸಹಕಾರ ಸಂಘ, ಮಹಾಯೋಗಿ ವೇಮನ ಸೌಹಾರ್ದ ಸಹಕಾರಿ ಹಾಗೂ ಅಭಯಶ್ರೀ ಸೌಹಾರ್ದ ಸಹಕಾರಿ, ಯಲಹಂಕ ಮದರ್ ಡೈರಿಗಳ ಅಧ್ಯಯನ ಹಾಗೂ ನಂದಿ ಬೆಟ್ಟದ ವೀಕ್ಷಣೆಯ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮಗಳ ನಿರ್ವಹಣೆಯ ಜವಾಬ್ದಾರಿಯನ್ನು ಶಿಬಿರಾರ್ಥಿಗಳಿಗೆ ವಹಿಸಲಾಗಿತ್ತು.



ಪ್ರಾಯೋಗಿಕಗಳು



ಯಶಸ್ವಿ ಸೌಹಾರ್ದ ಸಹಕಾರಿಗಳೊಂದಿಗೆ ಸಂವಾದ



ಮೌನ ಭೋಜನ







ಅಧ್ಯಯನ ಪ್ರವಾಸ

### ಸಮಾರೋಪ ಕಾರ್ಯಕ್ರಮ :

## ತರಬೇತಿಯ ಯಶಸ್ಸಿಗೆ ಶಿಬಿರಾರ್ಥಿಗಳ ಸಕ್ರಿಯ ಭಾಗವಹಿಸುವಿಕೆ ಕಾರಣ - ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ವ್ಯಕ್ತಿತ್ವ ವಿಕಸನದ ಸಮಾರೋಪ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಶಿಬಿರಾರ್ಥಿಗಳ ಅನಿಸಿಕೆ ಪತ್ರಗಳು ಹಾಗೂ ಶಿಬಿರಾರ್ಥಿಗಳ ಅಭಿಪ್ರಾಯಗಳಿಂದ ತರಬೇತಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆದಿದೆ ಎಂದು ತಿಳಿಯುತ್ತದೆ. ಈ ಯಶಸ್ಸಿಗೆ ಸಂಯುಕ್ತ ಸಹಕಾರಿಯ ಪ್ರಯತ್ನವೊಂದೇ ಕಾರಣವಲ್ಲ. ಶಿಬಿರಾರ್ಥಿಗಳ ಸಂಪೂರ್ಣ ಸಕ್ರಿಯ ಭಾಗವಹಿಸುವಿಕೆ ಕಾರಣ ಎಂದು ತಿಳಿಸಿದರು.

## ಸಹಕಾರಿ ಕಾರ್ಯಕರ್ತರ ಬೆಳವಣಿಗೆಗೆ ತರಬೇತಿಯೇ ಅಡಿಪಾಯ - ಶ್ರೀ ಡಿ.ಹನುಮಂತಯ್ಯ

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಡಿ.ಹನುಮಂತಯ್ಯನವರು ಮಾತನಾಡಿದ ತರಬೇತಿಯಿಂದ ಪ್ರಯೋಜನ ಪಡೆದು ನಾನು ವೈಯಕ್ತಿಕವಾಗಿ ಬೆಳೆದು, ಪ್ರಸಕ್ತ ಅಪೆಕ್ಸ್ ಬ್ಯಾಂಕ್ ಹಾಗೂ ರಾಜ್ಯ ಸಹಕಾರ ಮಾರಾಟ ಮಹಾಮಂಡಳಗಳ ನಿರ್ದೇಶಕನಾಗಿದ್ದೇನೆ. ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಹೀಗಾಗಿ ತರಬೇತಿ ಪ್ರತಿಯೊಬ್ಬರ ಸಹಕಾರಿ ಕಾರ್ಯಕರ್ತನ ಬೆಳವಣಿಗೆಗೆ ಅಡಿಪಾಯ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು ಮಾತನಾಡಿದರು. ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಪ್ರಾಂಶುಪಾಲರಾದ ಶ್ರೀ ಎನ್.ಎಂ.ಶಿವಕುಮಾರರವರು ಭಾಗವಹಿಸಿದ್ದರು. ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರಗಳನ್ನು ಗಣ್ಯರು ವಿತರಿಸಿದರು.

ಸಮಾರೋಪ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಶಿಬಿರಾರ್ಥಿಗಳೇ ನಿರ್ವಹಿಸಿದರು. 18ನೇ ತಂಡದ ಶಿಬಿರಾರ್ಥಿಗಳ ಪರವಾಗಿ ಅಧ್ಯಕ್ಷರನ್ನು ಹಾಗೂ ಗಣ್ಯರನ್ನು ಸನ್ಮಾನಿಸಲಾಯಿತು.



ಪ್ರಮಾಣ ಪತ್ರ ವಿತರಣೆ



ಪ್ರಶಸ್ತಿ ವಿತರಣೆ



ಸನ್ಮಾನ



ಸನ್ಮಾನ



ಗಣ್ಯರೊಂದಿಗೆ 18ನೇ ತಂಡದ ಶಿಬಿರಾರ್ಥಿಗಳು

ತರಬೇತಿಯ ಸಂಯೋಜಕರಾಗಿ ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ.ಕಾರಕೂನ, ಸಂಚಾಲಕರಾಗಿ ಶ್ರೀ ವೀರಶೆಟ್ಟಿಯವರು ಕಾರ್ಯನಿರ್ವಹಿಸಿದರು. ತರಬೇತಿಯಲ್ಲಿ 18 ಜಿಲ್ಲೆಗಳ 44 ಸೌಹಾರ್ದ ಸಹಕಾರಿಗಳ 61 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಪ್ರತಿ ದಿನ ಯೋಗ ಶಿಕ್ಷಣವನ್ನು ಡಾ. ಹರೀಶರವರು ನಡೆಸಿಕೊಟ್ಟರು.

## ಇ-ಸ್ಟ್ಯಾಂಪಿಂಗ್ ನಿರ್ವಹಣಾ ಸಹಕಾರ ಮಹಾಮಂಡಳಗಳ ಪ್ರತಿನಿಧಿಗಳ ಸಭೆ - ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರಿಗೆ ಜಂಟಿ ಮನವಿ ಸಲ್ಲಿಸಲು ನಿರ್ಧಾರ



ರಾಜ್ಯದಲ್ಲಿ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕರ್ನಾಟಕ ರಾಜ್ಯ ಕ್ರೆಡಿಟ್ ಸಹಕಾರ ಸಂಘಗಳ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕ್ ಹಾಗೂ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಗಳ ಮೂಲಕ ನಡೆಸುತ್ತಿರುವ 2500ಕ್ಕೂ ಹೆಚ್ಚು ಎಸಿಸಿ ಕೇಂದ್ರಗಳ ನಿರ್ವಹಣೆಯಲ್ಲಿ ಆಗುತ್ತಿರುವ ಕೆಲವು ತೊಂದರೆಗಳ ನಿವಾರಣೆಗಾಗಿ ಅಂದರೆ ಸೇವಾ ಶುಲ್ಕ ಮತ್ತು ಕಮೀಷನ್ ಪರಿಷ್ಕರಣೆ, ಜಿಎಸ್‌ಟಿ ಅನ್ವಯಿಸುವ ಕುರಿತು, ಎಸಿಸಿಗಳ ಮೊತ್ತ ನಿಗದಿಪಡಿಸುವ ಕುರಿತು, ತಡವಾಗಿ ವಿತರಿಸುತ್ತಿರುವ ಇ-ಸ್ಟ್ಯಾಂಪಿಂಗ್ ಐಡಿಗಳು, ಸ್ಟಾಕ್ ಹೋಲ್ಡಿಂಗ್‌ನಿಂದಾಗುತ್ತಿರುವ ತಾಂತ್ರಿಕ ಸಮಸ್ಯೆ ಮುಂತಾದವುಗಳನ್ನು ಕುರಿತಂತೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ಸಭೆಯಲ್ಲಿ ಬೆಂಗಳೂರಿನಲ್ಲಿರುವ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರಿಗೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮತ್ತು ಮುಂಬಯಿನಲ್ಲಿರುವ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದವರಿಗೆ ಜಂಟಿಯಾಗಿ ಮನವಿ ಸಲ್ಲಿಸಿ, ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಈ ಸಭೆಯಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲಿಕ್ ಕೆರೂರು ಸೇರಿದಂತೆ ಎಲ್ಲಾ ಸಹಕಾರಿ ಮಹಾಮಂಡಳಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

## ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ದಾಖಲಾಗುವ ದಾವಾ ಅರ್ಜಿಗಳಿಗೆ ಸಂಬಂಧಿಸಿದಂತೆ ದಾವಾ ಶುಲ್ಕ ಹಾಗೂ ಜಾರಿಗೊಳಿಸಲು ಅಮಲ್ಜಾರಿ ಶುಲ್ಕ ನಿಗದಿಪಡಿಸುವ ಕುರಿತು ಮಾನ್ಯ ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ ಇವರು ಹೊರಡಿಸಿರುವ ಆದೇಶದ ಕುರಿತು.

**ಕರ್ನಾಟಕ ಸರ್ಕಾರ**

**ಸಹಕಾರ ಇಲಾಖೆ**

ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಅಸ್ಕರ್ ರಸ್ತೆ, ಬೆಂಗಳೂರು–56.

ಸಂಖ್ಯೆ.ಆರ್‌ಸಿಎಸ್/ಆರ್‌ಎಸ್‌ಆರ್/ಎಕ್ಸ್‌ಎಂಸಿ/ದಾವಾಶುಲ್ಕ/20/2017–18 ದಿನಾಂಕ : 11–12–2017

**ವಿಷಯ : ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ದಾಖಲಾಗುವ ದಾವಾ ಅರ್ಜಿಗಳಿಗೆ ಸಂಬಂಧಿಸಿದಂತೆ ದಾವಾ ಶುಲ್ಕ ಹಾಗೂ ಜಾರಿಗೊಳಿಸಲು ಅಮಲ್ಜಾರಿ ಶುಲ್ಕ ನಿಗದಿಪಡಿಸುವ ಬಗ್ಗೆ.**

**ಉಲ್ಲೇಖ : ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಡಿಎಂಸಿಡಿ–8/04/2003–04, ದಿ:03–05–2017.**

******

### ಆದೇಶ

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಡಿಯಲ್ಲಿ ದಾವೆಗಳನ್ನು ದಾಖಲಿಸಲು ಅವಕಾಶವಿದೆ. ಈ ರೀತಿ ದಾಖಲಿಸಲಾದ ದಾವೆಗಳಲ್ಲಿ ಪಡೆದ ಐತೀರ್ಪನ್ನು ಅನುಷ್ಠಾನಗೊಳಿಸಲು ಅಮಲ್ಜಾರಿ ಕ್ರಮಕೈಗೊಳ್ಳಲು ಸಹ ಅವಕಾಶವಿದೆ.

ಈ ರೀತಿ ದಾವಾ ಅರ್ಜಿ ಸಲ್ಲಿಸಿದಾಗ ಪಾವತಿಸಬೇಕಾದ ಶುಲ್ಕ ಐತೀರ್ಪ ಅನುಷ್ಠಾನಕ್ಕೆ ಕೋರಿ ಸಲ್ಲಿಸುವ ಅಮಲ್ಜಾರಿ ಅರ್ಜಿಗಳ ಪ್ರಸಂಗದಲ್ಲಿ ಪಾವತಿಸಬೇಕಾದ ಶುಲ್ಕದ ಬಗ್ಗೆ ಉಲ್ಲೇಖದ ಅಧಿಸೂಚನೆಯಲ್ಲಿ ನಿಗದಿಪಡಿಸಲಾಗಿದೆ.

ಈ ಶುಲ್ಕ ನಿಗದಿಪಡಿಸಿ ಈಗಾಗಲೇ 14 ವರ್ಷಗಳಿಗಿಂತಲೂ ಹೆಚ್ಚು ಅವಧಿ ಹಿಂದಿನದಾಗಿದೆ.

ಹಣದ ಮೌಲ್ಯ ಬೆಲೆಗಳ ಹೆಚ್ಚಳ ಹಾಗೂ ಸಮಕಾಲೀನ ಹಣದ ಮೌಲ್ಯವನ್ನು ಗಣನೆಗೆ ತೆಗೆದುಕೊಂಡು ಶುಲ್ಕವನ್ನು ಪರಿಷ್ಕರಿಸುವುದು ಅವಶ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಪ್ರಕರಣ 69, 70, 103, 106ರ ಅಡಿಯಲ್ಲಿ ಸಲ್ಲಿಸುವ ಅಧಿಬಾರ ಅರ್ಜಿ, ದಾವಾ ಅರ್ಜಿ, ಮೇಲ್ಮನವಿಗಳಲ್ಲಿ ಪಾವತಿಸಬೇಕಾದ ಶುಲ್ಕವನ್ನು ಈ ಮುಂದಿನಂತೆ ನಿಗದಿಪಡಿಸಲಾಗಿದೆ.

**ಅಧಿಬಾರ ಪ್ರಕರಣ/ ದಾವಾ ಪ್ರಕರಣ ಶುಲ್ಕ – (ಹಣಕಾಸಿನ ವ್ಯಾಜ್ಯಗಳು)**

| ಕ್ರ. ಸಂ. | ದಾವಾ ಮೊತ್ತ ಐತೀರ್ಪು ಕೋರಿರುವ ಮೊತ್ತ | ಪಾವತಿಸಬೇಕಾದ ಶುಲ್ಕ ಶೇ. (ಐತೀರ್ಪಿನ ಮೊತ್ತದ ಮೇಲೆ) |
|---|---|---|
| 1. | ರೂ.10,000–00ರವರೆಗೂ | 9% |
| 2. | ರೂ.10,000–00 ರಿಂದ 25,000–00 | 5% |
| 3. | ರೂ.25,001–00 ರಿಂದ 50,000–00 | 3% |
| 4. | ರೂ.50,001–00 ರಿಂದ 1.00 ಲಕ್ಷದವರೆಗೂ | 2% |
| 5. | ರೂ.1.00 ಲಕ್ಷದಿಂದ 2.00 ಲಕ್ಷದವರೆಗೂ | 1.5% |
| 6. | ರೂ.2.00 ಲಕ್ಷದಿಂದ 5.00 ಲಕ್ಷದವರೆಗೂ | 1% |
| 7. | ರೂ.5.00 ಲಕ್ಷದಿಂದ ಅದಕ್ಕಿಂತ ಮೇಲ್ಪಟ್ಟು | 0.75% |

**ಹಣಕಾಸೇತರ ದಾವಾ – (ನಾನ್ ಮಾನಿಟರಿ ಡಿಸ್‌ಪ್ಯೂಟ್ಸ್) [ಪ್ರಕರಣ 69, 70, 103 ಮತ್ತು 106]**

| ಕ್ರ.ಸಂ. | ಸಂಘದ ಕಾರ್ಯವ್ಯಾಪ್ತಿ | ಪಾವತಿಸಬೇಕಾದ ಶುಲ್ಕ ಪ್ರಕರಣ ರೂ. |
|---|---|---|
| 1. | ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಮತ್ತು ತಾಲ್ಲೂಕು | 800–00 |
| 2. | ತಾಲ್ಲೂಕು ಮಟ್ಟಕ್ಕಿಂತ ಹೆಚ್ಚು ಜಿಲ್ಲಾ ಮಟ್ಟ ಸೇರಿ | 1000–00 |
| 3. | ಜಿಲ್ಲಾ ಮಟ್ಟಕ್ಕಿಂತ ಹೆಚ್ಚು ಪ್ರಾಂತ್ಯ ಮಟ್ಟದವರೆಗೆ | 1500–00 |
| 4. | ಪ್ರಾಂತ್ಯ ಮಟ್ಟಕ್ಕಿಂತ ಹೆಚ್ಚು ರಾಜ್ಯ ಮಟ್ಟದವರೆಗೆ | 2000–00 |

| ಕ್ರ.ಸಂ. | ಐತೀರ್ಪು ಮೊತ್ತ | ಪಾವತಿಸಬೇಕಾದ ಶುಲ್ಕ % [ಐತೀರ್ಪಿನ ಮೊತ್ತದ ಮೇಲೆ] |
|---|---|---|
| 1. | ರೂ.25,000ದವರೆಗೆ | 6% |
| 2. | ರೂ.25,000–ರೂ.50,000 | 5% |
| 3. | ರೂ.50,000–ರೂ.1.00 ಲಕ್ಷ | 4% |
| 4. | ರೂ.1.00ಲಕ್ಷ – ರೂ.2.00 ಲಕ್ಷ | 3% |
| 5. | ರೂ.2.00 ಲಕ್ಷ ಮತ್ತು ಮೇಲ್ಪಟ್ಟು | 2% |

**1) ಸಾದಿಲ್ವಾರು ವೆಚ್ಚ** : ಪ್ರತಿ ದಾವಾ ಪ್ರಕರಣದಲ್ಲಿ ರೂಪಾಯಿ 150 ಸಾದಿಲ್ವಾರು ವೆಚ್ಚವೆಂದು, ಒಬ್ಬರಿಗಿಂತ ಹೆಚ್ಚಿನ ವಾದಿ/ ಪ್ರತಿವಾದಿಗಳಿಗೆ ರೂ.50ರಂತೆ ಪಾವತಿಸತಕ್ಕದ್ದು. ಗೌರವ ಮಧ್ಯಸ್ಥದಾರರು ಇತ್ಯರ್ಥಪಡಿಸುವ ಪ್ರತಿ ಪ್ರಕರಣದಲ್ಲಿಯೂ ನಿಗದಿಪಡಿಸಿದ ಪಂಚಾಯ್ತಿ ದಾವಾ ಶುಲ್ಕದ ಶೇ. 75ರ ಭಾಗವನ್ನು (3/4) ಪಾವತಿಸತಕ್ಕದ್ದು. ಉಳಿದ ಭಾಗವನ್ನು ಲೆಕ್ಕಶೀರ್ಷಿಕೆ : 0425-Co-Operation (ಸಹಕಾರ) ಖಾತೆಗೆ ಜಮಾ ಮಾಡತಕ್ಕದ್ದು. ಪ್ರತಿ ಪ್ರಕರಣ ಒಂದಕ್ಕೆ ಅರ್ಜಿದಾರರು ಪಾವತಿಸುವ ಸಾದಿಲ್ವಾರು ವೆಚ್ಚ ರೂಪಾಯಿ 150 ಮತ್ತು ಒಬ್ಬರಿಗಿಂತಲೂ ಹೆಚ್ಚು ಅರ್ಜಿದಾರರಿದ್ದಲ್ಲಿ ಪ್ರತಿ ಅರ್ಜಿದಾರರಿಗೆ ತಲಾ ರೂ.30/– ಅನ್ನು ಸಾದಿಲ್ವಾರು ವೆಚ್ಚವಾಗಿ ಗೌರವ ಮಧ್ಯಸ್ಥದಾರರಿಗೆ ಪಾವತಿಸತಕ್ಕದ್ದು.

ರೂ.3 ಲಕ್ಷಕ್ಕಿಂತ (ಮೂರು ಲಕ್ಷಕ್ಕಿಂತ) ಹೆಚ್ಚಿನ ಮೊತ್ತದ ದಾವೆಗಳನ್ನು ಇಲಾಖಾಧಿಕಾರಿಗಳೇ ಇತ್ಯರ್ಥಪಡಿಸುವುದು. ರೂ.3 ಲಕ್ಷಕ್ಕಿಂತ (ಮೂರು ಲಕ್ಷಕ್ಕಿಂತ) ಹೆಚ್ಚಿನ ಮೊತ್ತದ ದಾವಾ ಪ್ರಕರಣಗಳನ್ನು ಗೌರವ ಮಧ್ಯಸ್ಥದಾರರಿಗೆ ವಹಿಸತಕ್ಕದಲ್ಲ. ಸರ್ಕಾರಿ ಅಧಿಕಾರಿಗಳು ತೀರ್ಮಾನಿಸಿದ ಪ್ರಕರಣಗಳಲ್ಲಿ ಶುಲ್ಕ ಸೇರಿದಂತೆ ಸಾದಿಲ್ವಾರು ವೆಚ್ಚದ ಪೂರ್ಣ ಹಣವನ್ನು ಸರ್ಕಾರಕ್ಕೆ (ಮೇಲಿನ ಖಾತೆಗೆ) ಪಾವತಿಸತಕ್ಕದ್ದು.

**ಸಹಿ/–**
**ಸಹಕಾರ ಸಂಘಗಳ ನಿಬಂಧಕರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2143 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1405 ಪ್ರಕರಣಗಳು ಸೇರಿದಂತೆ ಒಟ್ಟು 3548 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2267 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 545 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 15 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 879 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 10 ಪ್ರಕರಣಗಳು ಇತ್ಯರ್ಥಗೊಂಡಿವೆ.

## ಶ್ರೀ ಮೊಹಮದ್ ಜಫರುಲ್ಲಾಖಾನ್ ಹಾಗೂ ಶ್ರೀಮತಿ ಕೆ.ಎಂ. ಆಶಾ ರವರಿಗೆ ಅಭಿನಂದನೆ

**ಬೆಂಗಳೂರು :** ನಿಯಮ 441, ಕರ್ನಾಟಕ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ, ಬೆಂಗಳೂರು ಇದರ ಪೀಠಾಧಿಕಾರಿಯಾಗಿ (ಪ್ರಭಾರ) ನೇಮಕವಾಗಿರುವ ಶ್ರೀ ಮೊಹಮದ್ ಜಫರುಲ್ಲಾಖಾನ್, ಸಹಕಾರಿಗಳ ಜಂಟಿ ನಿಬಂಧಕರು, (ಪಟ್ಟಣ ಬ್ಯಾಂಕುಗಳ ವಿಭಾಗ), ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರು ಶುಭಕೋರಿದರು.



ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿಯಾಗಿದ್ದ ಶ್ರೀಮತಿ ಕೆ.ಎಂ. ಆಶಾರವರು ಸಹಕಾರಿಗಳ ಅಪರ ನಿಬಂಧಕರು, ನಿಯಮ–32 (ಪತ್ತು), ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿಗೆ ನೇಮಕವಾದ ಹಿನ್ನೆಲೆಯಲ್ಲಿ ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಶುಭಕೋರಿದರು.



## ಕೊಪ್ಪಳ ಜಿಲ್ಲಾ ಸಂಯುಕ್ತ ಸಹಕಾರಿಯ ಸಂಪರ್ಕ ಕಛೇರಿಯ ಉದ್ಘಾಟನೆ

**ಕೊಪ್ಪಳ :** ಕೊಪ್ಪಳ ಜಿಲ್ಲಾ ಸಂಪರ್ಕ ಕಛೇರಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್, ಡಿ.ಸಿ.ಸಿ. ಬ್ಯಾಂಕ್‌ನ ನಿರ್ದೇಶಕರಾದ ಶ್ರೀ ವಿರುಪಾಕ್ಷಪ್ಪ ಮುಷ್ಟಿ, ಶ್ರೀ ಚೊಕ್ಕಬಸವನಗೌಡ, ಶ್ರೀ ಕೆ.ಕಾಳಪ್ಪ ಹಾಗೂ ಶ್ರೀ ನಾಗಲಿಂಗಪ್ಪ ಪತ್ತಾರ್ ಮುಂತಾದವರು ಉಪಸ್ಥಿತರಿದ್ದರು.



ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ, ಸಂಯುಕ್ತ ಸಹಕಾರಿಯ ಕ್ರಿಯಾ ಯೋಜನೆಗಳ ಅನುಷ್ಠಾನದ ಅಂಗವಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಛೇರಿಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ, ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ ವ್ಯವಸ್ಥೆಗಳು ಭರದಿಂದ ಸಾಗಿವೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್‌ರವರು ಮಾತನಾಡಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು ಈ ಸಂಪರ್ಕ ಕಛೇರಿಯ ಪ್ರಯೋಜನವನ್ನು ಪಡೆಯಬೇಕೆಂದು ಕೋರಿದರು.

ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಅನುಕೂಲಕ್ಕಾಗಿ ಜಿಲ್ಲಾ ಸಂಪರ್ಕ ಕಛೇರಿಯನ್ನು ಗಂಗಾವತಿ ನಗರದ ಹೋಟೆಲ್ ಸನ್ಮಾನ್ ಟೂರಿಸ್ಟ್ ಹೋಮ್, ರೂಂ ನಂ. 101, ಕನಕಗಿರಿ ರಸ್ತೆ ಇಲ್ಲಿ ಪ್ರಾರಂಭಿಸಲಾಗಿರುತ್ತದೆ. ಸಹಕಾರಿಗಳು ಪ್ರತಿ ಸೋಮವಾರ ತಮ್ಮ ಜಿಲ್ಲಾ ನಿರ್ದೇಶಕರನ್ನು ಹಾಗೂ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳನ್ನು ಇಲ್ಲಿ ಭೇಟಿಯಾಗಬಹುದಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : ಶ್ರೀ ವಿಜಯ್.ಬಿ.ಎಸ್. – 8884460275

## ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

ಶ್ರೀ ಆಶ್ರಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಳಗಾವಿ ಇದರ ಸಹಕಾರಿಯ ಎಲ್ಲಾ ನಿರ್ದೇಶಕರು ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 25(2)(ಎ–1), (ಬಿ) ಮತ್ತು (ಸಿ)ರಡಿ ಅನರ್ಹತೆಗೆ ಗುರಿಯಾಗಿರುವುದರಿಂದ ಸಂಯುಕ್ತ ಸಹಕಾರಿಯು ಸಹಕಾರಿಯ ಎಲ್ಲಾ ನಿರ್ದೇಶಕರನ್ನು ಅನರ್ಹಗೊಳಿಸಿರುವ ಹಿನ್ನೆಲೆಯಲ್ಲಿ ಸಹಕಾರಿಯಲ್ಲಿ ಆಡಳಿತ ಮಂಡಲಿಯು ಅಸ್ತಿತ್ವದಲ್ಲಿಲ್ಲದೇ ಇರುವುದರಿಂದ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣ ಶ್ರೀ ಬಸವರಾಜ ಹೊಂಗಲ, ಕಿರಿಯ ಅಧಿಕಾರಿ, ಬೆಳಗಾವಿ ವಿಭಾಗೀಯ ಕಛೇರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರನ್ನು ಸಹಕಾರಿಗೆ ವಿಶೇಷಾಧಿಕಾರಿಯನ್ನಾಗಿ ದಿನಾಂಕ : 28 ಡಿಸೆಂಬರ್ 2017ರ ಮೂಲಕ ಆದೇಶಿಸಲಾಗಿದೆ.

## ಡಿಸೆಂಬರ್-2017ರ ಮಾಹೆಯಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳ "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಗಳ ವಿವರಗಳು

| ವಿಭಾಗ | ಸಭೆಯ ಸಂಖ್ಯೆ | ದಿನಾಂಕ | ಭಾಗವಹಿಸಿದ ಜಿಲ್ಲೆಗಳು | ಸ್ಥಳ | ಭಾಗವಹಿಸಿದ | |
|---|---|---|---|---|---|---|
| | | | | | ಸೌಹಾರ್ದ ಸಹಕಾರಿಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| ಮೈಸೂರು ವಿಭಾಗ | 1 | 20 ಡಿಸೆಂಬರ್ 2017 | ಹಾಸನ ಮತ್ತು ಚಿಕ್ಕಮಗಳೂರು | ಚಿಕ್ಕಮಗಳೂರು | 42 | 44 |
| | 2 | 22 ಡಿಸೆಂಬರ್ 2017 | ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು | ಮೈಸೂರು | 37 | 44 |
| | 3 | 28 ಡಿಸೆಂಬರ್ 2017 | ದಕ್ಷಿಣ ಕನ್ನಡ | ಮಂಗಳೂರು | 52 | 55 |
| | 4 | 29 ಡಿಸೆಂಬರ್ 2017 | ಉಡುಪಿ | ಉಡುಪಿ | 72 | 79 |
| | | | | **ಒಟ್ಟು** | **203** | **222** |

| ವಿಭಾಗ | ಸಭೆಯ ಸಂಖ್ಯೆ | ದಿನಾಂಕ | ಭಾಗವಹಿಸಿದ ಜಿಲ್ಲೆಗಳು | ಸ್ಥಳ | ಭಾಗವಹಿಸಿದ | |
|---|---|---|---|---|---|---|
| | | | | | ಸೌಹಾರ್ದ ಸಹಕಾರಿಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| ಬೆಂಗಳೂರು ವಿಭಾಗ | 5 | 21 ಡಿಸೆಂಬರ್ 2017 | ದಾವಣಗೆರೆ | ದಾವಣಗೆರೆ | 39 | 51 |
| | 6 | 22 ಡಿಸೆಂಬರ್ 2017 | ತುಮಕೂರು | ತುಮಕೂರು | 81 | 98 |
| | 7 | 23 ಡಿಸೆಂಬರ್ 2017 | ಚಿತ್ರದುರ್ಗ | ಚಿತ್ರದುರ್ಗ | 16 | 18 |
| | 8 | 27 ಡಿಸೆಂಬರ್ 2017 | ಬೆಂಗಳೂರು | ಬೆಂಗಳೂರು | 79 | 82 |
| | 9 | 28 ಡಿಸೆಂಬರ್ 2017 | ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ | ಬೆಂಗಳೂರು | 21 | 36 |
| | | | | **ಒಟ್ಟು** | **236** | **285** |

| ವಿಭಾಗ | ಸಭೆಯ ಸಂಖ್ಯೆ | ದಿನಾಂಕ | ಭಾಗವಹಿಸಿದ ಜಿಲ್ಲೆಗಳು | ಸ್ಥಳ | ಭಾಗವಹಿಸಿದ | |
|---|---|---|---|---|---|---|
| | | | | | ಸೌಹಾರ್ದ ಸಹಕಾರಿಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| ಬೆಳಗಾವಿ ವಿಭಾಗ | 10 | 21 ಡಿಸೆಂಬರ್ 2017 | ಹಾವೇರಿ | ಹಾವೇರಿ | 60 | 80 |
| | 11 | 21 ಡಿಸೆಂಬರ್ 2017 | ಧಾರವಾಡ ಮತ್ತು ಗದಗ | ಹುಬ್ಬಳ್ಳಿ | 50 | 75 |
| | 12 | 22 ಡಿಸೆಂಬರ್ 2017 | ಉತ್ತರ ಕನ್ನಡ | ಶಿರಸಿ | 64 | 84 |
| | 13 | 27 ಡಿಸೆಂಬರ್ 2017 | ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕು | ವಿಜಯಪುರ | 95 | 118 |
| | 14 | 28 ಡಿಸೆಂಬರ್ 2017 | ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ ಹಾಗೂ ಇಂಡಿ ತಾಲ್ಲೂಕುಗಳು | ವಿಜಯಪುರ | 94 | 101 |
| | 15 | 29 ಡಿಸೆಂಬರ್ 2017 | ಬಾಗಲಕೋಟ | ಬಾಗಲಕೋಟ | 144 | 155 |
| | | | | **ಒಟ್ಟು** | **507** | **613** |

| ವಿಭಾಗ | ಸಭೆಯ ಸಂಖ್ಯೆ | ದಿನಾಂಕ | ಭಾಗವಹಿಸಿದ ಜಿಲ್ಲೆಗಳು | ಸ್ಥಳ | ಭಾಗವಹಿಸಿದ | |
|---|---|---|---|---|---|---|
| | | | | | ಸೌಹಾರ್ದ ಸಹಕಾರಿಗಳ ಸಂಖ್ಯೆ | ಪ್ರತಿನಿಧಿಗಳ ಸಂಖ್ಯೆ |
| ಕಲಬುರಗಿ ವಿಭಾಗ | 16 | 20 ಡಿಸೆಂಬರ್ 2017 | ಕಲಬುರಗಿ | ಕಲಬುರಗಿ | 59 | 68 |
| | 17 | 21 ಡಿಸೆಂಬರ್ 2017 | ಬೀದರ | ಬೀದರ | 39 | 46 |
| | 18 | 21 ಡಿಸೆಂಬರ್ 2017 | ಬಳ್ಳಾರಿ | ಹೊಸಪೇಟೆ | 76 | 90 |
| | 19 | 23 ಡಿಸೆಂಬರ್ 2017 | ಯಾದಗಿರಿ | ಶಹಾಪೂರ | 20 | 23 |
| | 20 | 26 ಡಿಸೆಂಬರ್ 2017 | ಕೊಪ್ಪಳ | ಗಂಗಾವತಿ | 108 | 117 |
| | 21 | 27 ಡಿಸೆಂಬರ್ 2017 | ರಾಯಚೂರು | ಸಿಂಧನೂರು | 119 | 127 |
| | | | | **ಒಟ್ಟು** | **421** | **471** |
| | | | | **ಒಟ್ಟು ಭಾಗವಹಿಸಿದವರ ವಿವರಗಳು** | **1367** | **1591** |

# ಮುಖ್ಯಕಾರ್ಯನಿರ್ವಾಹಕರ "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಗಳ ಛಾಯಾಚಿತ್ರಗಳು

## ಮೈಸೂರು ವಿಭಾಗ


ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳು


ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳು


ದಕ್ಷಿಣ ಕನ್ನಡ ಜಿಲ್ಲೆ


ಉಡುಪಿ ಜಿಲ್ಲೆ

## ಬೆಂಗಳೂರು ವಿಭಾಗ


ದಾವಣಗೆರೆ ಜಿಲ್ಲೆ


ತುಮಕೂರು ಜಿಲ್ಲೆ



ಚಿತ್ರದುರ್ಗ ಜಿಲ್ಲೆ


ಬೆಂಗಳೂರು ಜಿಲ್ಲೆ


ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು

## ಬೆಳಗಾವಿ ವಿಭಾಗ



ಹಾವೇರಿ ಜಿಲ್ಲೆ ಹಾಗೂ ಸಂಪರ್ಕ ಸಭೆ



ಧಾರವಾಡ ಮತ್ತು ಗದಗ ಜಿಲ್ಲೆಗಳು ಹಾಗೂ ಸಂಪರ್ಕ ಸಭೆ



ಉತ್ತರ ಕನ್ನಡ ಜಿಲ್ಲೆ ಹಾಗೂ ಸಂಪರ್ಕ ಸಭೆ




ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕು



ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ ಹಾಗೂ ಇಂಡಿ ತಾಲ್ಲೂಕುಗಳು



ಬಾಗಲಕೋಟ ಜಿಲ್ಲೆ

## ಕಲಬುರಗಿ ವಿಭಾಗ



ಕಲಬುರಗಿ ಜಿಲ್ಲೆ ಹಾಗೂ "ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ" ತರಬೇತಿ



ಬೀದರ ಜಿಲ್ಲೆ




ಬಳ್ಳಾರಿ ಜಿಲ್ಲೆ




ಯಾದಗಿರಿ ಜಿಲ್ಲೆ ಹಾಗೂ "ಸರಕು ಮತ್ತು ಸೇವಾ ತೆರಿಗೆ" ಕುರಿತು ಉಪನ್ಯಾಸ ಕಾರ್ಯಕ್ರಮ



ಕೊಪ್ಪಳ ಜಿಲ್ಲೆ ಹಾಗೂ "ಸರಕು ಮತ್ತು ಸೇವಾ ತೆರಿಗೆ" ಕುರಿತು ಉಪನ್ಯಾಸ ಕಾರ್ಯಕ್ರಮ



ರಾಯಚೂರು ಜಿಲ್ಲೆ ಹಾಗೂ "ಸರಕು ಮತ್ತು ಸೇವಾ ತೆರಿಗೆ" ಕುರಿತು ಉಪನ್ಯಾಸ ಕಾರ್ಯಕ್ರಮ

### ಪತ್ರಿಕಾಗೋಷ್ಠಿಗಳು



ಶಿರಸಿಯಲ್ಲಿ ನಡೆದ ಪತ್ರಿಕಾಗೋಷ್ಠಿ



ಹಾವೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿ

## ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕರ ಭೇಟಿ



ಟಿಎಸ್‌ಎಸ್ ಸಹಕಾರ ಸಂಘ ನಿ., ಶಿರಸಿ ಸಹಕಾರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಉತ್ತರಾಖಂಡದ ಮಾನ್ಯ ಸಹಕಾರ ಸಚಿವರನ್ನು ಭೇಟಿ ಮಾಡಲಾಯಿತು.



ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ



ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಶಿರಸಿ



ದಿನಾಂಕ : 26.12.2017ರಂದು ಶ್ರೀ ನೀಲಕಂಠೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಹಕಾರಿಗೆ ಕೊಪ್ಪಳ ಜಿಲ್ಲೆಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿ, ಸಹಕಾರಿಯ ಆಡಳಿತ ಮಂಡಲಿಯವರೊಂದಿಗೆ ಚರ್ಚಿಸಿದರು.



ದಿನಾಂಕ 26.12.2017ರಂದು ದಿ ಗಂಗಾವತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಹಕಾರಿಗೆ ಕೊಪ್ಪಳ ಜಿಲ್ಲೆಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿ, ಸಹಕಾರಿಯ ಆಡಳಿತ ಮಂಡಲಿಯವರೊಂದಿಗೆ ಚರ್ಚಿಸಿದರು.



ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ



ದಿನಾಂಕ : 26.12.2017ರಂದು ಗಂಗೋತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಗಂಗಾವತಿ ಸಹಕಾರಿಗೆ ಕೊಪ್ಪಳ ಜಿಲ್ಲೆಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭೇಟಿ ನೀಡಿ, ಸಹಕಾರಿಯ ಆಡಳಿತ ಮಂಡಲಿಯವರೊಂದಿಗೆ ಚರ್ಚಿಸಿದರು.

## ಶ್ರೀ ಎಂ.ಜಿ.ಪಾಟೀಲ, ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರು



ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ವೃತ್ತಿಪರ ನಿರ್ದೇಶಕರಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರು ನೇಮಕ ಮಾಡಿರುವ ಶ್ರೀ ಎಂ.ಜಿ.ಪಾಟೀಲರವರು ಮೂಲತಃ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಗೋಲಗೇರಿ ಗ್ರಾಮದವರು. ತಂದೆ ಶ್ರೀ ಗೊಲ್ಲಾಳಪ್ಪಗೌಡ ಪಾಟೀಲ್ ಹಾಗೂ ತಾಯಿ ಶ್ರೀಮತಿ ಕಾಶಿಬಾಯಿಯವರ 6 ಮಕ್ಕಳಲ್ಲಿ 5ನೇಯವರಾಗಿ ದಿನಾಂಕ 22-03-1953ರಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದರು.

ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ವಿಜಯಪುರದಲ್ಲಿ ಪೂರೈಸಿದ ನಂತರ ಬಿ.ಎಸ್‌ಸಿ ಪದವಿಯನ್ನು ವಿಜಯಪುರದಲ್ಲಿ ಪಡೆದು ಧಾರವಾಡ ಯೂನಿವರ್ಸಿಟಿ ಲಾ ಕಾಲೇಜಿನಲ್ಲಿ ಎಲ್.ಎಲ್.ಬಿ ಮುಗಿಸಿದ ನಂತರ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು.

1976ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಗೆಜೆಟೆಡ್ ಪ್ರೋಬೇಷನರಿ ಅಧಿಕಾರಿಗಳ ಪರೀಕ್ಷೆ ಬರೆದು 1978ರಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಕರ್ನಾಟಕ ಸರಕಾರದ ಸಹಕಾರ ಇಲಾಖೆಯಲ್ಲಿ ಸೇವೆ ಪ್ರಾರಂಭಿಸಿದರು. ಕಲಬುರಗಿ, ರಾಯಚೂರು, ವಿಜಯಪುರ, ಬಾಗಲಕೋಟೆ, ಧಾರವಾಡ ಮುಂತಾದ ಜಿಲ್ಲೆಗಳಲ್ಲಿ ಸಹಕಾರ ಇಲಾಖೆಯಲ್ಲಿ ಹಾಗೂ ಜಿಲ್ಲಾ ಮಟ್ಟದ ಸಹಕಾರ ಸಂಸ್ಥೆಗಳಲ್ಲಿ ಪ್ರಾಮಾಣಿಕವಾಗಿ, ದಕ್ಷತೆಯಿಂದ ಕಾರ್ಯನಿರ್ವಹಿಸಿ, ಉತ್ತಮ ಅಧಿಕಾರಿಯೆಂದು ಹೆಸರು ಪಡೆದು, ಕೊನೆಯ 5 ವರ್ಷಗಳಲ್ಲಿ ನಿಬಂಧಕರ ಕಛೇರಿಯಲ್ಲಿ ಅಪರ ನಿಬಂಧಕರಾಗಿ ಆಡಳಿತ ಮತ್ತು ಅಭಿವೃದ್ಧಿ ಮತ್ತು ಕೃಷಿ ಪತ್ತು ವಿಭಾಗವನ್ನು ದಕ್ಷತೆಯಿಂದ ಕಾರ್ಯನಿರ್ವಹಿಸಿ, 2013ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ.

ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಬಾಗಲಕೋಟೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸಲಹೆಗಾರರಾಗಿ, ಸಿದ್ಧೇಶ್ವರ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ, ಸಿದ್ಧೇಶ್ವರ ಸಂಸ್ಥೆಯ ನಿರ್ದೇಶಕರಾಗಿ, ಸಹಕಾರ ಭಾರತಿಯ ರಾಜ್ಯಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರುವ ಶ್ರೀಯುತರು ಇತ್ತೀಚಿಗೆ ವಿಜಯಪುರದಲ್ಲಿ ಪ್ರೊಫೆಷನಲ್ ಸೌಹಾರ್ದ ಸಹಕಾರಿಯನ್ನು ಸ್ಥಾಪಿಸಿ, ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ತಮ್ಮ ತಂದೆಯವರಿಂದ ಬಂದಿರುವ ಕೃಷಿ ಉದ್ಯೋಗವನ್ನು ಶ್ರದ್ಧೆಯಿಂದ ನಿರ್ವಹಿಸಲು ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಸಹಕಾರ ಕ್ಷೇತ್ರ ಅತ್ಯಂತ ಪವಿತ್ರ ದೃಷ್ಟಿಯಿಂದ ಕಾಣಬೇಕು. ಒಂದು ಉತ್ತಮ ವ್ಯವಸ್ಥೆಯನ್ನಾಗಿ ಈ ಕ್ಷೇತ್ರವನ್ನು ಬೆಳೆಸಲು ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅದರಲ್ಲೂ ಸೌಹಾರ್ದ ಸಹಕಾರಿ ಕ್ಷೇತ್ರ ರಾಜ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕ್ಷೇತ್ರದ ನೇತಾರನಾಗಿ ಸಂಯುಕ್ತ ಸಹಕಾರಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇಂತಹ ಪ್ರತಿಷ್ಠಿತ ಸಂಸ್ಥೆಯ ವೃತ್ತಿಪರ ನಿರ್ದೇಶಕರಾಗಿ ಶ್ರೀಯುತರನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿ, ತಮ್ಮಿಂದ ಈ ಕ್ಷೇತ್ರದ ಅಭಿವೃದ್ಧಿಗೆ ಸಾಧ್ಯವಾದಷ್ಟು ಉತ್ತಮ ಕೆಲಸ ನಿರ್ವಹಿಸುವುದಾಗಿ ತಿಳಿಸಿದ್ದಾರೆ.

## ಶ್ರೀ ಬಿ.ರಾಜಶೇಖರ



ಶ್ರೀ ಬಿ.ರಾಜಶೇಖರವರು ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿ ಕಳೆದ ಆರು ವರ್ಷಗಳಿಂದ ಸಹಕಾರಿಯ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕಳೆದ ಇಪ್ಪತ್ತು ವರ್ಷಗಳಿಂದ ಸಹಕಾರ ಭಾರತೀಯ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸಿ, ಪ್ರಸಕ್ತ ಸಹಕಾರ ಭಾರತೀಯ ರಾಜ್ಯ ಕೋಶಾಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುತ್ತಾ ಸಹಕಾರ ಕ್ಷೇತ್ರದಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮೂಲತಃ ದಾವಣಗೆರೆ ಜಿಲ್ಲೆಯ ಹರಿಹರದವರಾದ ಶ್ರೀ ಬಿ.ರಾಜಶೇಖರರವರು ಕಳೆದ ಇಪ್ಪತ್ತು ವರ್ಷಗಳಿಂದ ರಾಯಚೂರು ಜಿಲ್ಲೆಯ ಸಿಂಧನೂರಿನ ನಿವಾಸಿಯಾಗಿರುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ ಎ, ಡಿ ಜೆ, ಪಿ ಟಿ. ಪದವೀಧರರಾಗಿದ್ದು, ವೃತ್ತಿಯಿಂದ ಸಹಕಾರಿ ಸಂಸ್ಥೆಗಳಿಗೆ ಆಪ್ತ ಸಲಹೆಗಾರರಾಗಿದ್ದು ಹಾಗೂ ಪ್ರವೃತ್ತಿಯಿಂದ ಸಹಕಾರಿಯ ಕಾರ್ಯಕರ್ತರಾಗಿರುವ ಇವರು ಕಲಬುರಗಿ ವಿಭಾಗದಲ್ಲಿ ಸಹಕಾರಿಗಳ ಅಚ್ಚುಮೆಚ್ಚಿನ ಗೆಳೆಯರಾಗಿದ್ದಾರೆ.

**ಶೈಕ್ಷಣಿಕ ಕ್ಷೇತ್ರ :** ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಹರಿಹರ ನಗರ ಘಟಕದ ಕಾರ್ಯದರ್ಶಿಯಾಗಿ, ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ ಕುವೆಂಪು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಸೇವೆ.

**ಮಾಧ್ಯಮ ಕ್ಷೇತ್ರ :** ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ ಎ, ಡಿಪ್ಲೋಮಾ – ಇನ್ – ಜರ್ನಲಿಸಂ ಹಾಗೂ ಮುದ್ರಣ ತಂತ್ರಜ್ಞಾನದ ಪದವಿ ನಂತರ ಮೈಸೂರಿನ "ಆರತಿ" ದಿನ ಪತ್ರಿಕೆಯಿಂದ ಆರಂಭಗೊಂಡ ಪತ್ರಿಕಾ ಕ್ಷೇತ್ರದ ಕಾರ್ಯವು ಕನ್ನಡಪ್ರಭ, ಸಂಜೆವಾಣಿ ಪತ್ರಿಕೆಯ ವರದಿಗಾರರಾಗಿ ಸೇವೆ, ಒಂದು ಅವಧಿಗೆ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿಯ ನಿರ್ದೇಶಕರಾಗಿ ಸೇವೆ.

**ಸಾಮಾಜಿಕ ಕ್ಷೇತ್ರ :** ವಿಶ್ವ ಹಿಂದು ಪರಿಷತ್ ಸಕ್ರಿಯ ಕಾರ್ಯಕರ್ತನಾಗಿ, ಅಯೋಧ್ಯ ರಾಮ ಜನ್ಮಭೂಮಿ ಹೋರಾಟದ ಜಿಲ್ಲಾ ತಂಡದ ನೇತೃತ್ವ, ಹರಿಹರದ ರಾಷ್ಟ್ರೋತ್ಥಾನ ಬಳಗದ ತಾಲೂಕ ಸಂಚಾಲಕರಾಗಿ, ಚಿತ್ರದುರ್ಗ ಜಿಲ್ಲಾ ಸಂಚಾಲಕರಾಗಿ ಕಾರ್ಯನಿರ್ವಹಣೆ.

**ರಾಜಕೀಯ ಕ್ಷೇತ್ರ :** ವಿದ್ಯಾರ್ಥಿ ಜೀವನದಲ್ಲಿ ಜನತಾ ಪಕ್ಷದ ಕಾರ್ಯಕರ್ತನಾಗಿ, ನಂತರದಲ್ಲಿ ಭಾರತೀಯ ಜನತಾ ಪಕ್ಷದ ಚಿತ್ರದುರ್ಗದ ಜಿಲ್ಲಾ ಕಾರ್ಯದರ್ಶಿಯಾಗಿ, ಕೋಶಾಧ್ಯಕ್ಷರಾಗಿ ಹಾಗೂ ದಾವಣಗೆರೆ ಜಿಲ್ಲಾ ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಣೆ.

**ಸಹಕಾರ ಕ್ಷೇತ್ರ :** 1998 ರಿಂದ 2012ರವರೆಗೆ ಸಿಂಧನೂರಿನ ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಆರಂಭದಿಂದಲೂ ಮುಖ್ಯ ಕಾರ್ಯನಿರ್ವಾಹಕರಾಗಿ 14 ವರ್ಷ ಸೇವೆ ಸಲ್ಲಿಸಿದ ನಂತರ 2012ರಲ್ಲಿ ಸಿಂಧನೂರು ಪತ್ತಿನ ಸೌಹಾರ್ದ ಸಹಕಾರಿಯನ್ನು ಪ್ರಸಕ್ತ ಹೆಸರು (ಸಿಂಧು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಿಂಧನೂರು) ಆರಂಭಿಸುವ ಮೂಲಕ ಅದರ ಆರಂಭದಿಂದಲೂ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅನೇಕ ಸಹಕಾರಿ ಸಂಸ್ಥೆಗಳಿಗೆ ಆಪ್ತ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿರುವ ಜೊತೆಗೆ ಅನೇಕ ಸಹಕಾರಿ ವಿಷಯದ ತರಬೇತಿಗಳಲ್ಲಿ ವಿಷಯ ತಜ್ಞರಾಗಿಯು ಪಾಲ್ಗೊಂಡಿರುತ್ತಾರೆ.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

**ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ :**

- ದಿನಾಂಕ 07 ಜನವರಿ 2018ರಂದು ಶಿವಮೊಗ್ಗ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ"ಯನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಭವನ, ಆರ್.ಟಿ.ಓ. ರಸ್ತೆ, ಶಿವಮೊಗ್ಗ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ.
- ದಿನಾಂಕ : 11.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ ತಾಲ್ಲೂಕುಗಳು – ಸ್ಥಳ : ಹೋಟೆಲ್ ಮಧುಬನ, ಗೋವಾವೇಸ್, ಖಾನಾಪುರ ರಸ್ತೆ, ಬೆಳಗಾವಿ.
- ದಿನಾಂಕ : 11.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಗೋಕಾಕ, ರಾಮದುರ್ಗ ಹಾಗೂ ಸವದತ್ತಿ ತಾಲ್ಲೂಕುಗಳು – ಸ್ಥಳ : ಹೋಟೆಲ್ ರತ್ನ ಸಂಗಮ ರೆಸಿಡೆನ್ಸಿ, ಯರಗಟ್ಟಿ, ಬೆಳಗಾವಿ.
- ದಿನಾಂಕ : 12.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ಹಾಗೂ ರಾಯಭಾಗ ತಾಲ್ಲೂಕುಗಳು – ಸ್ಥಳ : ಹೋಟೆಲ್ ಹುಲಿಗೆಮ್ಮ ರೆಸಿಡೆನ್ಸಿ, ಚಿಕ್ಕೋಡಿ, ಬೆಳಗಾವಿ.
- ದಿನಾಂಕ : 12.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕು – ಸ್ಥಳ : ಖತಗಲ್ಲಿ ಕಲ್ಯಾಣ ಮಂಟಪ, ಹುಕ್ಕೇರಿ, ಬೆಳಗಾವಿ.

**ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ :** ಜನವರಿ ಮಾಹೆಯಲ್ಲಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ, ಹಿರಿಯ ಅಧಿಕಾರಿಗಳಿಗಾಗಿ ಹಾಗೂ ಕ್ರೆಡಿಟ್ ಅಧಿಕಾರಿಗಳಿಗಾಗಿ 2 ದಿನಗಳ ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿಯನ್ನು ಬೆಂಗಳೂರಿನಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

**ಆಡಳಿತ ಪರಿಣಿತಿ ತರಬೇತಿ :** ಜನವರಿ ಮಾಹೆಯಲ್ಲಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಪದಾಧಿಕಾರಿಗಳಿಗಾಗಿ 2 ದಿನಗಳ ಆಡಳಿತ ಪರಿಣಿತಿ ತರಬೇತಿಯನ್ನು ಬೆಂಗಳೂರಿನಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

**ಜನವರಿ ಮಾಹೆಯಲ್ಲಿ ಆಯೋಜಿಸಲಾಗಿರುವ ಇ-ಸ್ಟ್ಯಾಂಪಿಂಗ್ ಕೇಂದ್ರಗಳ ತರಬೇತಿಗಳ ವಿವರಗಳು :**

- ದಿನಾಂಕ : 05.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಂಗಳೂರು ಜಿಲ್ಲೆ – ಸ್ಥಳ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು.
- ದಿನಾಂಕ : 06.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗಳು – ಸ್ಥಳ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು.
- ದಿನಾಂಕ : 08.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆ (ಹುಕ್ಕೇರಿ & ಖಾನಾಪುರ ತಾಲ್ಲೂಕುಗಳು) – ಸ್ಥಳ : ಹೋಟೆಲ್ ಮಧುಬನ್, ಖಾನಾಪುರ ರೋಡ್, ಬೆಳಗಾವಿ.
- ದಿನಾಂಕ : 09.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆ (ಚಿಕ್ಕೋಡಿ, ಅಥಣಿ, ನಿಪ್ಪಾಣಿ & ರಾಯಬಾಗ ತಾಲ್ಲೂಕುಗಳು) – ಸ್ಥಳ : ಹುಲಿಗೆಮ್ಮ ರೆಸಿಡೆನ್ಸಿ, ಬಾಗಲಕೋಟ ರಸ್ತೆ ಹತ್ತಿರ, ಬಸವ ಸರ್ಕಲ್, ಚಿಕ್ಕೋಡಿ.
- ದಿನಾಂಕ : 10.01.2018 – ಭಾಗವಹಿಸಬೇಕಾದ ಜಿಲ್ಲೆ : ಬೆಳಗಾವಿ ಜಿಲ್ಲೆ (ಗೋಕಾಕ, ಬೈಲಹೊಂಗಲ, ರಾಮದುರ್ಗ & ಸವದತ್ತಿ ತಾಲ್ಲೂಕುಗಳು) – ಸ್ಥಳ : ಹೋಟೆಲ್ ಗೋಕಾಕ್ ರೆಸಾರ್ಟ್, ಎಲ್.ಐ.ಸಿ. ಆಫೀಸ್, ಗೋಕಾಕ್ ಫಾಲ್ಸ್ ರೋಡ್, ಗೋಕಾಕ್.
- ದಿನಾಂಕ : 11.01.2018 – ಭಾಗವಹಿಸಬೇಕಾದ ಜಿಲ್ಲೆ : ಬಾಗಲಕೋಟೆ ಜಿಲ್ಲೆ – ಸ್ಥಳ : ಬಿಡಿಸಿಸಿ ಬ್ಯಾಂಕ್ ಮುಖ್ಯ ಕಛೇರಿ, ನವನಗರ, ಬಾಗಲಕೋಟೆ.
- ದಿನಾಂಕ : 12.01.2018 – ಭಾಗವಹಿಸಬೇಕಾದ ಜಿಲ್ಲೆ : ವಿಜಯಪುರ ಜಿಲ್ಲೆ – ಸ್ಥಳ : ಹೋಟೆಲ್ ಶುಭಶ್ರೀ ಸಾಗರ, ಬಿ.ಎಲ್.ಡಿ ಮೆಡಿಕಲ್ ಕಾಲೇಜ್ ಕಟ್ಟಡ ಹತ್ತಿರ, ಸೋಲಾಪುರ್ ರಸ್ತೆ, ವಿಜಯಪುರ.
- ದಿನಾಂಕ : 16.01.2018 – ಭಾಗವಹಿಸಬೇಕಾದ ಜಿಲ್ಲೆ : ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು – ಸ್ಥಳ : ಕ್ಯಾಂಪ್ಕೋ ಲಿಮಿಟೆಡ್ ಸಭಾಭವನ, ವಾರಣಾಸಿ ಟಾವರ್ಸ್, ಮಿಷನ್ ಸ್ಟ್ರೀಟ್, ಮಂಗಳೂರು.
- ದಿನಾಂಕ : 17.01.2018 – ಭಾಗವಹಿಸಬೇಕಾದ ಜಿಲ್ಲೆ : ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳು – ಸ್ಥಳ : ಹೋಟೆಲ್ ದಿ ಗ್ರ್ಯಾಂಡ್ ಕೃಷ್ಣ, ನರಸಿಂಹ ರಾವ್ ರಸ್ತೆ, ಬಸವನಹಳ್ಳಿ, ಚಿಕ್ಕಮಗಳೂರು.
- ದಿನಾಂಕ : 18.01.2018 – ಭಾಗವಹಿಸಬೇಕಾದ ಜಿಲ್ಲೆ : ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳು – ಸ್ಥಳ : ಚೈತನ್ಯ ತರಬೇತಿ ಕೇಂದ್ರ, ಚೈತನ್ಯ ಕಾಂಪ್ಲೆಕ್ಸ್, ಆಲ್ಕೋಳ ವೃತ್ತ, ಸಾಗರ ರಸ್ತೆ, ಮಾನಸಧಾರ ಟ್ರಸ್ಟ್, ಶಿವಮೊಗ್ಗ.
- ದಿನಾಂಕ : 19.01.2018 – ಭಾಗವಹಿಸಬೇಕಾದ ಜಿಲ್ಲೆ : ಉತ್ತರ ಕನ್ನಡ ಜಿಲ್ಲೆ (ಶಿರಸಿ, ಯಲ್ಲಾಪುರ, ಸಿದ್ದಾಪುರ, ಅಂಕೋಲ, ಕುಮಟಾ, ಕಾರವಾರ, ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕುಗಳು) – ಸ್ಥಳ : ಕುಮಟಾ.
- ದಿನಾಂಕ : 20.01.2018 – ಭಾಗವಹಿಸಬೇಕಾದ ಜಿಲ್ಲೆ : ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳು ಹಾಗೂ ಉತ್ತರ ಕನ್ನಡ ಜಿಲ್ಲೆ (ಹಳಿಯಾಳ & ಮುಂಡಗೋಡ ತಾಲ್ಲೂಕುಗಳು) – ಸ್ಥಳ : ಹೋಟೆಲ್ ರೇವಣಕರ್ ಕಂಫರ್ಟ್ಸ್, ಕೋರ್ಟ್ ಸರ್ಕಲ್ ಹತ್ತಿರ, ದೇಶಪಾಂಡೆನಗರ, ಹುಬ್ಬಳ್ಳಿ.
- ದಿನಾಂಕ : 23.01.2018 – ಭಾಗವಹಿಸಬೇಕಾದ ಜಿಲ್ಲೆ : ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳು – ಸ್ಥಳ : ಗಂಗಾವತಿ.
- ದಿನಾಂಕ : 24.01.2018 – ಭಾಗವಹಿಸಬೇಕಾದ ಜಿಲ್ಲೆ : ರಾಯಚೂರು ಜಿಲ್ಲೆ – ಸ್ಥಳ : ಸಿಂಧನೂರು.
- ದಿನಾಂಕ : 25.01.2018 – ಭಾಗವಹಿಸಬೇಕಾದ ಜಿಲ್ಲೆ : ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳು – ಸ್ಥಳ : ಕಲಬುರಗಿ.
- ದಿನಾಂಕ : 27.01.2018 – ಭಾಗವಹಿಸಬೇಕಾದ ಜಿಲ್ಲೆ : ತುಮಕೂರು ಜಿಲ್ಲೆ – ಸ್ಥಳ : ತುಮಕೂರು.
- ದಿನಾಂಕ : 29.01.2018 – ಭಾಗವಹಿಸಬೇಕಾದ ಜಿಲ್ಲೆ : ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಕೊಡಗು ಜಿಲ್ಲೆಗಳು – ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಎಸ್.ಪಿ. ಭಟ್ ಹಾಲ್, ಜೆ.ಎಲ್.ಬಿ. ರಸ್ತೆ, ಮುಡಾ ಕಛೇರಿ ಪಕ್ಕ, ಮೈಸೂರು.

# ಸೌಹಾರ್ದ ಸಹಕಾರಿ ದಿನಾಚರಣೆಯ ವರದಿಗಳು

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರಿಂದ ಧ್ವಜಾರೋಹಣ

## ಜನವರಿ ಅಂತ್ಯದೊಳಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಛೇರಿಗಳ ಕಾರ್ಯ ಪ್ರಾರಂಭ

**ಬೆಂಗಳೂರು :** ದಿನಾಂಕ 01 ಜನವರಿ 2018ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಸಪ್ತವರ್ಣದ ಸಹಕಾರಿ ಧ್ವಜಾರೋಹಣ ನೆರವೇರಿಸಿ, ಸಿಬ್ಬಂದಿಯವರನ್ನು ಉದ್ದೇಶಿಸಿ ಮಾತನಾಡುತ್ತಾ ರಾಜ್ಯದಾದ್ಯಂತ ಆಚರಣೆಯಾಗುತ್ತಿರುವ ಸೌಹಾರ್ದ ಸಹಕಾರಿ ದಿನದಂದು ಸಂಯುಕ್ತ ಸಹಕಾರಿಯಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ವಿಶೇಷ ಹಾಗೂ ಮಹತ್ವದ ಸಂದೇಶ ತಲುಪಿಸುವ ವ್ಯವಸ್ಥೆಯಾಗಬೇಕು. ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ ಇರುವ ಸವಾಲುಗಳನ್ನು ಎದುರಿಸುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ಪರಿಣಾಮಕಾರಿ ಕ್ರಮವಿಡುತ್ತಿದೆ. ಅದಕ್ಕೆ ಎಲ್ಲಾ ಸಿಬ್ಬಂದಿಗಳು ಸಹಕರಿಸಬೇಕು. ಸಕಾರಾತ್ಮಕವಾಗಿ ಸ್ಪಂದಿಸಬೇಕು. ಜನವರಿ ಅಂತ್ಯದೊಳಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸಂಪರ್ಕ ಕಛೇರಿಗಳು ಕಾರ್ಯನಿರ್ವಹಿಸುವಂತೆ ಕ್ರಮವಿಡಲಾಗುವುದು. ತರಬೇತಿಯನ್ನು ವಿಭಾಗ ಮಟ್ಟದಲ್ಲೂ ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಕ್ರಮವಿಡಲು ಚಿಂತನೆ ನಡೆದಿದೆ. ಕಾನೂನು ಹಾಗೂ ಲೆಕ್ಕಪರಿಶೋಧಕರ ಪ್ಯಾನೆಲ್ ಸಿದ್ಧಪಡಿಸಲಾಗುವುದು. ಸೌಹಾರ್ದ ಸಹಕಾರಿಗಳಿಗೆ ತತ್‌ಕ್ಷಣ ಪರಿಹಾರ ಒದಗಿಸಲು ಕ್ರಮವಿಡಲಾಗುವುದು ಎಂದು ತಿಳಿಸಿ, ಎಲ್ಲಾ ವಿಭಾಗೀಯ ಕಛೇರಿಗಳು ಹಾಗೂ ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಸಕಾರಾತ್ಮವಾಗಿ ಸ್ಪಂದಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಕರೆ ನೀಡಿದರು.

ಸಭೆಯಲ್ಲಿ ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಪ್ರತಿಯೊಂದು ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಸಿಬ್ಬಂದಿಯವರು ಹೊಸತನವನ್ನು ಅಳವಡಿಸುವ ಬಗ್ಗೆ ಚಿಂತನೆ ಮಾಡುವುದು ಅಗತ್ಯ. ಸಹಕಾರ ಕ್ಷೇತ್ರದ ಗುಣಾತ್ಮಕ ಬೆಳವಣಿಗೆಗೆ ಒತ್ತು ನೀಡುವ ಕ್ರಮಗಳಿಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರರವರು



ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರೊಂದಿಗೆ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಮತ್ತು ಸೌಹಾರ್ದ ಸಹಕಾರಿ ನ್ಯಾಯಾಲಯದ ಸಿಬ್ಬಂದಿಗಳು

ಎಲ್ಲರನ್ನು ಸ್ವಾಗತಿಸಿ, ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ 2001 ಜನವರಿ 01 ರಂದು ಜಾರಿಯಾಗಿದ್ದು, ಅದರ ನೆನಪಿಗಾಗಿ ಪ್ರತಿ ವರ್ಷ ಈ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಗುತ್ತಿದೆ. ರಾಜ್ಯದಲ್ಲಿ 4200ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು, 1000ಕ್ಕೂ ಹೆಚ್ಚು ಇ-ಸ್ಟ್ಯಾಂಪಿಂಗ್ ಕೇಂದ್ರಗಳು ಅವುಗಳ ಗುಣಾತ್ಮಕ ಕಾರ್ಯನಿರ್ವಹಣೆಯ ಹಿಂದೆ ಈ ರಾಜ್ಯದ ಹಿರಿಯ ಸಹಕಾರಿಗಳ ಹಾಗೂ ಸೌಹಾರ್ದ ಸಹಕಾರಿಗಳ ಶ್ರಮವಿದೆ. ಈ ಕ್ಷೇತ್ರದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ಸಲುವಾಗಿ ಪ್ರಸಕ್ತ ಆಡಳಿತ ಮಂಡಲಿಯವರು ಅನೇಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿದ್ದಾರೆ. ಕಳೆದ 4 ತಿಂಗಳಿಂದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ನೇತೃತ್ವದಲ್ಲಿ ನೂತನ ಆಡಳಿತ ಮಂಡಲಿಯವರು ಉತ್ತಮವಾಗಿ, ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವುದು ಸಂತೋಷದ ವಿಷಯ ಎಂದು ತಿಳಿಸಿದರು.

## ಬೆಳಗಾವಿ ವಿಭಾಗೀಯ ಕಛೇರಿ



**ಬೆಳಗಾವಿ :** ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ದಿನಾಂಕ : 01.01.2018ರಂದು ಆಚರಿಸಲಾಯಿತು. ಪ್ರಾರಂಭದಲ್ಲಿ ಸಹಕಾರಿ ಧ್ವಜಾರೋಹಣವನ್ನು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಜಿಲ್ಲೆಯ ಹಿರಿಯ ಸಹಕಾರಿಗಳು ಆದ ಶ್ರೀ ಗಂಗಪ್ಪ ಮುದ್ದಪ್ಪ ಮಾಳಗಿರವರು ನೆರವೇರಿಸಿ, ಸಂಯುಕ್ತ ಸಹಕಾರಿಯ 2018ರ ದಿನದರ್ಶಿಕೆಯನ್ನು ಬಿಡುಗಡೆಗೊಳಿಸಿ, ಮಾತನಾಡಿದರು.

## ಕಲಬುರಗಿ ವಿಭಾಗೀಯ ಕಛೇರಿ



**ಕಲಬುರಗಿ :** ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವೈ.ಟಿ.ಪಾಟೀಲರವರು ಸಹಕಾರಿಯ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿದರು. ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಸ್.ಎಸ್. ಪಾಟೀಲರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದರು. ನಗರದ 30ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ಮೈಸೂರು ವಿಭಾಗ



ಸಂಯುಕ್ತ ಸಹಕಾರಿಯ ಮೈಸೂರು ವಿಭಾಗೀಯ ಕಛೇರಿಯಲ್ಲಿ ಶ್ರೀ ವಾಗ್ದೇವಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಎನ್.ನವೀನ್‌ರವರಿಂದ ಧ್ವಜಾರೋಹಣ



ಚಿತ್ರದುರ್ಗ : ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಬ್ಯಾಂಕಿನ ಜೆ.ಸಿ.ಆರ್. ಬಡಾವಣೆ ಶಾಖೆಯಲ್ಲಿ ಬ್ಯಾಂಕಿನ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು ಮತ್ತು ಸಿಬ್ಬಂದಿಯವರು ಹಾಜರಿದ್ದರು. ನಂತರ ಜೆ.ಸಿ.ಆರ್. ಬಡಾವಣೆಯ ಸರ್ಕಾರಿ ಪ್ರಾಥಮಿಕ ಪಾಠಶಾಲೆಯ ಮಕ್ಕಳಿಗೆ ಸಿಹಿಯನ್ನು ವಿತರಿಸಲಾಯಿತು.



ಆದಿಶಕ್ತಿ ಸೌಹಾರ್ದ ಸಹಕಾರಿ ನಿಯಮಿತ, ಹಾನಗಲ್ಲ ಸಹಕಾರಿಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲರವರಿಂದ ಸಹಕಾರಿ ಧ್ವಜಾರೋಹಣ.



ಸಿರಿಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರಿವಾರ ಸಹಕಾರಿಯ ಅಧ್ಯಕ್ಷರಾದ ಶ್ರೀ ಚುಕ್ಕಿ ಸೂಗಪ್ಪ ಸಾಹುಕಾರರವರಿಂದ ಧ್ವಜಾರೋಹಣ.



ಸಪ್ತಗಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎನ್. ಪ್ರಶಾಂತ ಶೆಟ್ಟಿರವರಿಂದ ಧ್ವಜಾರೋಹಣ.



ಕೊಡಗು ವಿದ್ಯಾ ಇಲಾಖೆ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಡಿಕೇರಿ.



ಶ್ರೀ ವಾಸವಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಪಾವಗಡ.

**ಬೀದರ** : ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಾರ್ಯಾಲಯದಲ್ಲಿ ದಿನಾಂಕ 01.01.2018ರಂದು ಸೌಹಾರ್ದ ಸಹಕಾರಿಗಳ ದಿನಾಚರಣೆಯನ್ನು ಬೆಳಿಗ್ಗೆ 11:30 ಗಂಟೆಗೆ ಶ್ರೀ ಗುರುನಾಥ ಜ್ಯಾಂತಿಕರರವರ ಅಧ್ಯಕ್ಷತೆಯಲ್ಲಿ ನಡೆಯಿತು. ಉದ್ಘಾಟನೆಯನ್ನು ದುರ್ಗಾಮಾತಾ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗನ್ನಾಥ ಕರಂಜೆರವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಬಸವಕಲ್ಯಾಣದ ಸ್ನೇಹ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಬಸಪ್ಪ ಚನ್ನಮಲ್ಲೆರವರು ಭಾಗವಹಿಸಿದ್ದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಅಧ್ಯಕ್ಷರಾದ ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರರವರು ಸೌಹಾರ್ದ ಸಹಕಾರಿ ಕ್ಷೇತ್ರವು ನಡೆದು ಬಂದ ದಾರಿಯನ್ನು ತಿಳಿಸಿ, ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಬಂದು ಜನರಿಗೆ ಸೇವೆ ಒದಗಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮವನ್ನು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲರವರು ನಿರ್ವಹಿಸಿದರು. ಒಕ್ಕೂಟದ ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ ಹಾಗೂ ಶ್ರೀ ನಂದಾವಿವೇಕಾನಂದ, ಶ್ರೀ ಕ್ರಾಂತಿಕುಮಾರ ಕುಲಾಲ, ಶ್ರೀ ಮಹೇಶ್ವರ ಸ್ವಾಮಿ, ಶ್ರೀ ಶ್ರೀಕಾಂತ ಸ್ವಾಮಿ ಇತರರು ಭಾಗವಹಿಸಿದ್ದರು.



ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಾಯಪ್ಪಾ ಹೊ. ಹೊಳೆಪ್ಪಗೋಳರವರಿಂದ ಧ್ವಜಾರೋಹಣ.



ದೇವನಾಂಪ್ರಿಯ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಣಸಮಾರನಹಳ್ಳಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಪುಟ್ಟಶಾಮಪ್ಪರವರು ಅಮೃತಹಳ್ಳಿ ಶಾಖೆಯಲ್ಲಿ ಧ್ವಜಾರೋಹಣ ನೆರವೇರಿಸಿ, ಮಾತನಾಡಿದರು. ಇದೇ ಸಂದರ್ಭದಲ್ಲಿ ಜಕ್ಕೂರು ಟೆಲಿಕಾಂ ಲೇಔಟ್‌ನಲ್ಲಿರುವ ಆಚಾರ್ಯ ಶ್ರೀ ರಾಕುಮ್ ಅಂಧರ ಶಾಲಾ ಮಕ್ಕಳಿಗೆ ಬೆಳಗಿನ ಉಪಾಹಾರ ನೀಡಲಾಯಿತು.

## ಶ್ರೀ ಎಂ.ಎನ್.ರಾಜೇಂದ್ರ ಕುಮಾರ್‌ರವರಿಗೆ ಸನ್ಮಾನ



ಕರ್ನಾಟಕ ರಾಜ್ಯ ಮಾರಾಟ ಸಹಕಾರ ಮಹಾಮಂಡಳದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಎಂ.ಎನ್.ರಾಜೇಂದ್ರ ಕುಮಾರ್ ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್, ಮಾಜಿ ಸಹಕಾರ ಸಚಿವರಾದ ಶ್ರೀ ಎಸ್.ಎಸ್.ಪಾಟೀಲರ ಉಪಸ್ಥಿತಿಯಲ್ಲಿ ಸನ್ಮಾನಿಸಿದರು.



ಬೆಂಗಳೂರು ಸೌಹಾರ್ದ ಸಹಕಾರಿ ನಿ., ಚಂದಾಪುರ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ॥ ಚಿನ್ನಪ್ಪ ವೈ ಚಿಕ್ಕಹಾಗಡೆ, ಹಿರಿಯ ಪತ್ರಕರ್ತರಾದ ಶ್ರೀ ಸಿ.ಆರ್.ವಿಜಯ್ ಕುಮಾರ್, ಉಪಾಧ್ಯಕ್ಷರಾದ ಶ್ರೀ ಎನ್.ಮುನಿಕೃಷ್ಣ, ನಿರ್ದೇಶಕರು ಮತ್ತಿತ್ತರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸದಸ್ಯರಿಗೆ ಶೇರು ಪ್ರಮಾಣ ಪತ್ರ ಹಾಗೂ ಮಹಿಳೆಯರಿಗೆ ಸಾಲ ವಿತರಿಸಲಾಯಿತು.



ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಾರಟಗಿ ಸಹಕಾರಿಯಲ್ಲಿ ಸಹಕಾರಿಯ ಪಿತಾಮಹಾರಾದ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ, ಸಹಕಾರಿ ಧ್ವಜಾರೋಹಣ ಮಾಡುವುದರ ಮೂಲಕ ಸೌಹಾರ್ದ ಸಹಕಾರಿ ದಿನವನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಸಹಕಾರಿಯ ನೂತನ ಕ್ಯಾಲೆಂಡರ್‌ಗಳನ್ನು ಪುರಸಭೆಯ ಅಧ್ಯಕ್ಷರಾದ ಶ್ರೀಮತಿ ಭುವನೇಶ್ವರಿ ಶಿವರೆಡ್ಡಿ ನಾಯಕ್‌ರವರು ಬಿಡುಗಡೆಗೊಳಿಸಿದರು. ಇವರಿಗೆ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ.ಸಣ್ಣಸೂಗಪ್ಪ, ಅಧ್ಯಕ್ಷರಾದ ಶ್ರೀ ಹನುಮಂತಪ್ಪ ಸಾಲೋಣಿ, ಉಪಾಧ್ಯಕ್ಷರಾದ ಶ್ರೀ ಸಿ.ಹೆಚ್. ಶರಣಪ್ಪ, ನಿರ್ದೇಶಕರುಗಳು ಹಾಗೂ ಗಣ್ಯರುಗಳು ಉಪಸ್ಥಿತರಿದ್ದರು.



ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಳ್ನಾವರ

## ಮಹಿಳಾ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿ ಅಧ್ಯಕ್ಷರು ಹಾಗೂ ನಿರ್ದೇಶಕಿಯರಿಗಾಗಿ ದೆಹಲಿಯ ಎನ್‌ಸಿಸಿಇ ನಲ್ಲಿ ನಾಯಕತ್ವ ಅಭಿವೃದ್ಧಿ ಕಾರ್ಯಾಗಾರ

**ನವದೆಹಲಿ :** ಎನ್‌ಸಿಯುಐ ವತಿಯಿಂದ ದೆಹಲಿಯ ಎನ್‌ಸಿಸಿಇ ನಲ್ಲಿ 2017 ಡಿಸೆಂಬರ್ 18–20ರವರೆಗೆ ಆಯೋಜಿಸಿದ್ದ ಮಹಿಳಾ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯ ಅಧ್ಯಕ್ಷರು ಹಾಗೂ ನಿರ್ದೇಶಕಿಯರಿಗಾಗಿ ನಾಯಕತ್ವ ಅಭಿವೃದ್ಧಿ ಕಾರ್ಯಾಗಾರದಲ್ಲಿ ಗುಲಬರ್ಗಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿಯಿಂದ ಅಧ್ಯಕ್ಷರು ಹಾಗೂ 9 ಜನ ನಿರ್ದೇಶಕಿಯರು ಭಾಗವಹಿಸಿದ್ದರು ಹಾಗೂ ನಮ್ಮೊಂದಿಗೆ ಕಲಬುರಗಿಯಿಂದ ಸ್ಪಂದನಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರು ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಅತ್ಯುತ್ತಮ ವಿಷಯಗಳನ್ನು ಅಳವಡಿಸಿದ್ದು, ಉತ್ತಮ ಹಾಗೂ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳ ವ್ಯವಸ್ಥೆ ಪರಿಣಾಮಕಾರಿಯಾಗಿತ್ತು. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಟ್ಟ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯವರಿಗೆ ಮತ್ತು ಎನ್‌ಸಿಸಿಇನ ನಿರ್ದೇಶಕರಾದ ಶ್ರೀ ವಿ.ಕೆ.ದುಬೆ ಇವರಿಗೆ ಎಲ್ಲಾ ಶಿಬಿರಾರ್ಥಿಗಳ ಪರವಾಗಿ ಕೃತಜ್ಞತೆಗಳು. ಒಟ್ಟಾರೆಯಾಗಿ ಕರ್ನಾಟಕದಿಂದ ಈ ಕಾರ್ಯಕ್ರಮದಲ್ಲಿ 30 ಜನ ಮಹಿಳಾ ನಿರ್ದೇಶಕಿಯರು ಭಾಗವಹಿಸಿ, ಪ್ರಯೋಜನ ಪಡೆದರು. – **ಶೈಲಜಾ ವಿ. ತಪಲಿ**

## ಕ್ಯಾಲೆಂಡರ್ ಬಿಡುಗಡೆ




ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯ 2018ನೇ ಸಾಲಿನ ಕ್ಯಾಲೆಂಡರ್‌ಗಳ ಬಿಡುಗಡೆ.




ಸಿರಿವಾರ : ಸಿರಿಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ ಸಹಕಾರಿಯ 2018ನೇ ಸಾಲಿನ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಚುಕ್ಕಿ ಸೂಗಪ್ಪ ಸಾಹುಕಾರ ಹಾಗೂ ಆಡಳಿತ ಮಂಡಲಿಯ ಸದಸ್ಯರು ಮತ್ತು ಪತ್ರಿಕಾ ಮಾಧ್ಯಮದವರು ಹಾಗೂ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಸಹಕಾರಿಯ ಆವರಣದಲ್ಲಿ ನೆರವೇರಿಸಲಾಯಿತು.



ತುಮಕೂರು : ಸನ್‌ರೈಸ್ ಸೌಹಾರ್ದ ಪತ್ತಿನ ಸಹಕಾರಿ ನಿ., ಕ್ಯಾತ್ಸಂದ್ರ ಸಹಕಾರಿಯ 2018ನೇ ಸಾಲಿನ ಸನ್‌ರೈಸ್ ಕ್ಯಾಲೆಂಡರ್‌ನ್ನು ಸಿದ್ಧಗಂಗಾ ಮಠದ ಪರಮಪೂಜ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮೀಜಿಯವರ ಅಮೃತ ಹಸ್ತದಿಂದ ಅನಾವರಣಗೊಳಿಸಲಾಯಿತು. ಸಿದ್ಧಗಂಗಾ ಮಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಉಪಸ್ಥಿತರಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಪಿ.ವಿಜಯ, ನಿರ್ದೇಶಕರು ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು, ಸ್ನೇಹಿತ ವರ್ಗದವರು ಉಪಸ್ಥಿತರಿದ್ದರು.

## ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕೋತ್ಸವ

**ಗಿಣಿಗೇರಿ :** ದಿನಾಂಕ 23.11.2017ರಂದು ಕೊಪ್ಪಳ ತಾಲ್ಲೂಕು ಗಿಣಿಗೇರಿ ಗ್ರಾಮದ ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕೋತ್ಸವ ಸಮಾರಂಭವು ಸಹಕಾರಿಯ ಸಭಾಂಗಣದಲ್ಲಿ ಜರುಗಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶಿವಪುತ್ರಯ್ಯ ಹಳ್ಳಿಕೇರಿಮಠ ಹಾಗೂ ಡಾ॥ ಪಿ.ಎಂ.ಬಸವರಾಜರವರು ನೆರವೇರಿಸಿದ ನಂತರ ಸಹಕಾರಿಯ ಧ್ಯೇಯೋದ್ದೇಶಗಳ ಬಗ್ಗೆ ಮಾತನಾಡಿದರು. ನಿರ್ದೇಶಕರಾದ ಶ್ರೀ ಪುಟ್ಟಪ್ಪ ವಾರದಡಿರವರು ಸಹಕಾರಿಯ ಸ್ಥಾಪನೆ, ನಡೆದು ಬಂದ ದಾರಿಯನ್ನು ವಿವರಿಸಿದರು. ಯಶಸ್ವಿ 2 ವರ್ಷದ ಅವಧಿಗೆ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರು, ಸಿಬ್ಬಂದಿ ವರ್ಗದವರ ಶ್ರಮವೇ ಕಾರಣವೆಂದು ತಿಳಿಸಿದರು ಮತ್ತು ಉಪಾಧ್ಯಕ್ಷರಾದ ಶ್ರೀ ವೀರಣ್ಣ ಕಾಸನಕಂಡಿ, ಮತ್ತೋರ್ವ ನಿರ್ದೇಶಕರಾದ ಶ್ರೀ ಬಸವರಾಜ ಕೆ. ಗದ್ದಿರವರು ಮಾತನಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿರವರು ಅಧ್ಯಕ್ಷತೆಯನ್ನು ವಹಿಸಿ, ಅಧ್ಯಕ್ಷೀಯ ಭಾಷಣ ಮಾಡಿದರು. ನಿರ್ದೇಶಕರಾದ ಶ್ರೀ ಯಮನೂರಪ್ಪ ಗಂಟಿ, ಶ್ರೀಮತಿ ದ್ರಾಕ್ಷಾಯಣಿ ಹ್ಯಾಟಿ, ಲಕ್ಷ್ಮೀ ವಾರದ, ಶ್ರೀಮತಿ ಮಲ್ಲಮ್ಮ ಕಾಸಕನಕಂಡಿ, ಶ್ರೀಮತಿ ಬಸಲಿಂಗಮ್ಮ ಗಂಟಿಯವರು ಉಪಸ್ಥಿತರಿದ್ದರು. ಮುಖ್ಯಕಾರ್ಯದರ್ಶಿ ಶ್ರೀ ಕರಬಸಪ್ಪ ಕವಲೂರ ಸ್ವಾಗತಿಸಿದರು. ಕ್ಷೇತ್ರಾಧಿಕಾರಿ ಶ್ರೀ ವೆಂಕಟೇಶ ಪೂಜಾರ ವಂದಿಸಿದರು.



# ಸುಕೋ ಸೌಹಾರ್ದ ಸಹಕಾರಿ ಬ್ಯಾಂಕಿನ 5 ನೂತನ ಶಾಖೆಗಳ ಪ್ರಾರಂಭ

ರಾಜ್ಯದ ಅಗ್ರಣಿ ಬ್ಯಾಂಕ್ ಆಗಿರುವ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್ ತನ್ನ ನೂತನ 5 ಶಾಖೆಗಳನ್ನು ಮಸ್ಕಿ, ದಾವಣಗೆರೆ, ಮುಂಡರಗಿ, ಚನ್ನಗಿರಿ ಹಾಗೂ ಕೂಡ್ಲಿಗಿಯಲ್ಲಿ ಆರಂಭಿಸಿದೆ. ರಿಸರ್ವ್ ಬ್ಯಾಂಕಿನಿಂದ 10 ಶಾಖೆಗಳನ್ನು ತೆರೆಯಲು ಲೈಸೆನ್ಸ್ ದೊರೆತಿದ್ದು, ಈಗ 5 ಶಾಖೆಗಳನ್ನು ಆರಂಭಿಸಲಾಗಿದೆ.




ದಿನಾಂಕ : 06.12.2017ರಂದು ಬ್ಯಾಂಕಿನ 19ನೇ ಶಾಖೆಯನ್ನು ಮಸ್ಕಿಯಲ್ಲಿ ಆರಂಭಿಸಲಾಯಿತು. ಮಸ್ಕಿಯ ಮಾನ್ಯ ಶಾಸಕರಾದ ಶ್ರೀ ಪ್ರತಾಪ್ ಗೌಡ ಪಾಟೀಲ್‌ರವರು ಶಾಖೆಯನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.




ದಿನಾಂಕ : 07.12.2017ರಂದು ಬ್ಯಾಂಕಿನ 20ನೇ ಶಾಖೆಯನ್ನು ಕರ್ನಾಟಕದ ಮ್ಯಾಂಚೆಸ್ಟರ್ ಎಂದು ಹೆಸರುವಾಸಿಯಾದ ದಾವಣಗೆರೆಯಲ್ಲಿ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಡಿ.ಎಸ್. ರಮೇಶ್ ಅವರು ಶಾಖೆಯನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಜೊತೆಗೆ ಹೊಸ ಸಾಲ ಯೋಜನೆ 'ಸುಕೋ ಹೋಮ್ ಲೋನ್'ನ್ನು ಸಹ ಈ ಸಂದರ್ಭದಲ್ಲಿ ಉದ್ಘಾಟಿಸಲಾಯಿತು.




ದಿನಾಂಕ 13.12.2017ರಂದು ಬ್ಯಾಂಕಿನ 21ನೇ ಶಾಖೆಯನ್ನು ಮುಂಡರಗಿಯಲ್ಲಿ ಮಾನ್ಯ ಸಹಕಾರ ಮತ್ತು ಅರಣ್ಯ ಖಾತೆಯ ಮಾಜಿ ಸಚಿವರಾದ ಸಹಕಾರ ಭೀಷ್ಮ ಶ್ರೀ ಎಸ್.ಎಸ್.ಪಾಟೀಲರವರು ಅಡಕಲ ಗಡಿಗೆಗೆ ಧಾನ್ಯ ಸುರಿಯುವ ಮೂಲಕ ಶಾಖೆಯನ್ನು ಉದ್ಘಾಟಿಸಿದರು. ಸುಕೋ ಬ್ಯಾಂಕಿನ ಸನ್ 2018ರ ಕ್ಯಾಲೆಂಡರನ್ನು ಮುಂಡರಗಿಯ ಪ್ರಗತಿಪರ ರೈತರಾದ ಶ್ರೀ ಈಶಪ್ಪ ಹಂಚಿನಾಳ್ ಅವರು ಬಿಡುಗಡೆಗೊಳಿಸಿದರು.

ಶ್ರೀ ಎಸ್.ಎಸ್.ಪಾಟೀಲರವರು ಬ್ಯಾಂಕಿಗೆ ಶುಭ ಹಾರೈಸಿ ಮಾತನಾಡಿ, 24 ವರ್ಷಗಳ ಹಿಂದೆ ಸುಕೋ ಬ್ಯಾಂಕನ್ನು ಸಿಂಧನೂರಿನಲ್ಲಿ ಉದ್ಘಾಟಿಸಿದ ನೆನಪು ಹಸಿರಾಗಿರುವಾಗಲೇ ಬ್ಯಾಂಕು 20 ಶಾಖೆಗಳನ್ನು ಹೊಂದಿ 21ನೇ ಶಾಖೆಯನ್ನು ನಮ್ಮೂರಾದ ಮುಂಡರಗಿಯಲ್ಲಿ ಆರಂಭಿಸಿರುವುದು ಸಂತೋಷ ತಂದಿದೆ. ಗ್ರಾಹಕ ಸ್ನೇಹಿ ಯೋಜನೆಗಳು ಹಾಗೂ ಉತ್ತಮ ಸೇವೆಗಳ ಮೂಲಕ ಉತ್ತರ ಕರ್ನಾಟಕದ ಹೆಮ್ಮೆಯ ನಂ.1 ಬ್ಯಾಂಕ್ ಆಗಿದೆ ಎಂದು ಶ್ಲಾಘಿಸುತ್ತಾ ಸುಕೋ ಬ್ಯಾಂಕ್ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಶೆಡ್ಯೂಲ್ಡ್ ಬ್ಯಾಂಕ್ ಸ್ಥಾನ ಹೊಂದಲಿ ಎಂದು ಹಾರೈಸಿದರು.




ದಿನಾಂಕ 14.12.2017ರಂದು ಬ್ಯಾಂಕಿನ 22ನೇ ಶಾಖೆಯನ್ನು ಚನ್ನಗಿರಿಯಲ್ಲಿ ಆರಂಭಿಸಲಾಯಿತು. ಚನ್ನಗಿರಿಯ ಮಾನ್ಯ ತಹಸೀಲ್ದಾರರಾದ ಶ್ರೀಮತಿ ಎಸ್.ಪದ್ಮಕುಮಾರಿ ಅವರು ಶಾಖೆಯನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.



ದಿನಾಂಕ 15.12.2017ರಂದು ಬ್ಯಾಂಕಿನ 23ನೇ ಶಾಖೆಯನ್ನು ಕೂಡ್ಲಿಗಿಯಲ್ಲಿ ಆರಂಭಿಸಲಾಯಿತು. ಕೂಡ್ಲಿಗಿಯ ಮಾನ್ಯ ತಹಸೀಲ್ದಾರರಾದ ಶ್ರೀ ಎಲ್.ಕೃಷ್ಣಮೂರ್ತಿ ಅವರು ಶಾಖೆಯನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ರಿಸರ್ವ್ ಬ್ಯಾಂಕ್ ಲೈಸೆನ್ಸ್ ನೀಡಿರುವ ಇತರ 5 ಶಾಖೆಗಳಾದ ಹಾವೇರಿ, ರಾಣೆಬೆನ್ನೂರು, ಕಲಬುರಗಿ, ಬೆಳಗಾವಿ ಹಾಗೂ ಬಳ್ಳಾರಿ (3ನೇ ಶಾಖೆ) ಶಾಖೆಗಳನ್ನು ಫೆಬ್ರವರಿ ಅಂತ್ಯದೊಳಗೆ ಆರಂಭಿಸುವುದಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹಿತ್ ಮಸ್ಕಿಯವರು ಈ ಸಂದರ್ಭದಲ್ಲಿ ತಿಳಿಸಿದರು.

## ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿಯ ಶಾಖೆಯ ಉದ್ಘಾಟನೆ

# ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿಯ ಕಾರ್ಯ ಸಮಾಜಮುಖಿಯಾಗಿದೆ – ಶ್ರೀ ಅನಿಲ ಬಾ. ಕಟ್ಟಿ

**ನವನಗರ :** ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಾದಾಮಿ, ಬಾಗಲಕೋಟ ಸಹಕಾರಿಯ ನವನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ನೂತನ ಶಾಖೆಯನ್ನು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಅನಿಲ ಬಾ. ಕಟ್ಟಿರವರು ಉದ್ಘಾಟಿಸಿ, ಮಾತನಾಡಿದರು. ನಂತರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಬಾಪೂಜಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಎನ್.ಪಾಟೀಲರವರು ಸರ್ವಸ್ಪರ್ಶಿ ಸಮಾಜ ಕಾರ್ಯ ಮಾಡುತ್ತಿರುವ ನ್ಯಾಯಮಿತ್ರ ಸೌಹಾರ್ದ ಪತ್ತಿನ ಸಹಕಾರಿಯ ಕಾರ್ಯ ಶ್ಲಾಘನೀಯ ಎಂದರು. ನಂತರ ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಸಿ.ಬಿ.ಪಾಟೀಲರವರು ಮತ್ತು ಹಿರಿಯ ನ್ಯಾಯವಾದಿಗಳಾದ ಶ್ರೀ ಎಸ್.ಕೆ.ಯಡಹಳ್ಳಿರವರು ಮಾತನಾಡಿದರು.



ಈ ಸಂದರ್ಭದಲ್ಲಿ ವಕೀಲರ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಜಿ.ಗದ್ದಿ, ಕಾರ್ಯದರ್ಶಿಗಳಾದ ಶ್ರೀ ಎಸ್.ಎ.ಹಾವರಗಿ, ಕೆ.ಎಸ್.ಬಿ.ಸಿ. ಮಾಜಿ ಉಪಾಧ್ಯಕ್ಷರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎಸ್.ಮಿಟ್ಟಲಕೋಡ, ಉಪಾಧ್ಯಕ್ಷರಾದ ಶ್ರೀ ಎಸ್.ಎನ್.ಚಿಕ್ಕರಡ್ಡಿ, ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೆ.ಜೆ.ಬಡಿಗೇರ, ವ್ಯವಸ್ಥಾಪಕರಾದ ಕು. ಮಹೇಶ್ವರಿ ಭದ್ರಶೆಟ್ಟಿ, ಕು. ಶ್ರೀದೇವಿ ಸೂಡಿಶೆಟ್ಟರ, ಶ್ರೀಮತಿ ಸರ್ವಮಂಗಳಾ ಗವಿಶೆಟ್ಟರ, ಶ್ರೀ ಎನ್.ಪಿ.ಜೋಗನ್ನವರ ಹಾಗೂ ಮುಂತಾದವರು ಉಪಸ್ಥಿತರಿದ್ದರು.

# ನಿತ್ಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನ ಹೊಳಲು ಶಾಖೆಯ ಉದ್ಘಾಟನೆ



**ಹೊಳಲು :** ನಿತ್ಯಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೂವಿನಹಡಗಲಿ ಸಹಕಾರಿಯ ಹೊಳಲು ಶಾಖೆಯನ್ನು ತಾಲ್ಲೂಕು ತಹಶೀಲ್ದಾರರಾದ ಶ್ರೀ ಕೆ.ರಾಘವೇಂದ್ರರಾವ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂತೋಷ ಕೆ. ಹಾಗೂ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕರಾದ ಶ್ರೀ ನರೇಂದ್ರ ಮುದಿಗೇರಿ, ಗೌರವ ಅಧ್ಯಕ್ಷರಾದ ಡಾ. ಬಿ.ಟಿ.ಫಣಿರಾಜರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವೀರ ಮರಣ ಹೊಂದಿದ ಯೋಧ ದಿ. ಶ್ರೀ ಹಾಲಪ್ಪ ಹಾವನೂರು ಅವರ ಕುಟುಂಬದವರಿಗೆ ಹಾಗೂ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಶ್ರೀ ಹೆಚ್.ಡಿ.ಜಗ್ಗೀನ್‌ರವರಿಗೆ ಸನ್ಮಾನಿಸಲಾಯಿತು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಪರ್ಕಳ, ಉಡುಪಿ ಜಿಲ್ಲೆ



ಶ್ರೀ ಸುಕೇಶ್ ಶೆಟ್ಟಿಗಾರ್
ಮಾನ್ಯ ಅಧ್ಯಕ್ಷರು



ಶ್ರೀ ಜಯರಾಮ್ ಶೆಟ್ಟಿಗಾರ್ ಮಣಿಪಾಲ್
ಮಾನ್ಯ ಉಪಾಧ್ಯಕ್ಷರು

ನಿರ್ದೇಶಕರುಗಳಾಗಿ ಶ್ರೀ ಬಿ.ಹೆಚ್.ಶೆಟ್ಟಿಗಾರ್, ಶ್ರೀ ಕಾಂತಪ್ಪ ಶೆಟ್ಟಿಗಾರ್, ಶ್ರೀ ಜಯಕರ ಶೆಟ್ಟಿಗಾರ್, ಶ್ರೀ ಗಂಗಾಧರ ಶೆಟ್ಟಿಗಾರ್, ಶ್ರೀ ಪುರಂದರ ಶೆಟ್ಟಿಗಾರ್, ಶ್ರೀ ಅಶೋಕ್ ಶೆಟ್ಟಿಗಾರ್, ಶ್ರೀ ಮಹೇಶ್ ಶೆಟ್ಟಿಗಾರ್, ಶ್ರೀಮತಿ ಜಯಲಕ್ಷ್ಮಿ ಶೆಟ್ಟಿಗಾರ್ ಹಾಗೂ ಶ್ರೀಮತಿ ಹೇಮಲತ ಕೆ. ಶೆಟ್ಟಿಗಾರ್‌ರವರುಗಳು ಚುನಾಯಿತರಾಗಿದ್ದಾರೆ.

## ಸಂಯುಕ್ತ ಸಹಕಾರಿಯ 2018ನೇ ಸಾಲಿನ ಟೇಬಲ್ ಕ್ಯಾಲೆಂಡರ್‌ನಲ್ಲಿ ತಿದ್ದುಪಡಿ

ಸಂಯುಕ್ತ ಸಹಕಾರಿಯ 2018ನೇ ಸಾಲಿನ ಟೇಬಲ್ ಕ್ಯಾಲೆಂಡರಿನ ನವೆಂಬರ್ ಮಾಹೆಯ ಹಿಂಭಾಗದಲ್ಲಿ ಮುದ್ರಿತವಾಗಿರುವ ಸೌಹಾರ್ದ ಸಹಕಾರಿಗಳಿಗೆ ಉಪಯುಕ್ತ ಮಾಹಿತಿಗಳಲ್ಲಿ ಎಡಗಡೆಯಿಂದ ಎರಡನೆಯ ವಿಷಯವು "ಆಡಳಿತ ಮಂಡಲಿಗೆ ಬ್ಯಾಂಕಿಂಗ್, ವ್ಯವಸ್ಥಾಪನೆ ಅಥವಾ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಇಬ್ಬರು ತಜ್ಞರನ್ನು ಸದಸ್ಯರನ್ನಾಗಿ ಸಹ ಆಯ್ಕೆಯ ಮೂಲಕ ಸೇರಿಸಿಕೊಳ್ಳಬೇಕು. ಆದರೆ, ಅಂತಹ ಸದಸ್ಯರಿಗೆ ಚುನಾವಣೆಯಲ್ಲಿ ಮತದಾನದ ಅಥವಾ ಪದಾಧಿಕಾರಿಯಾಗುವ ಹಕ್ಕು ಇರುವುದು" ಎಂದಾಗಿದ್ದು, ಅದನ್ನು **"ಆಡಳಿತ ಮಂಡಲಿಗೆ ಬ್ಯಾಂಕಿಂಗ್, ವ್ಯವಸ್ಥಾಪನೆ ಅಥವಾ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಇಬ್ಬರು ತಜ್ಞರನ್ನು ಸದಸ್ಯರನ್ನಾಗಿ ಸಹ ಆಯ್ಕೆಯ ಮೂಲಕ ಸೇರಿಸಿಕೊಳ್ಳಬೇಕು. ಆದರೆ, ಅಂತಹ ಸದಸ್ಯರಿಗೆ ಚುನಾವಣೆಯಲ್ಲಿ ಮತದಾನದ ಅಥವಾ ಪದಾಧಿಕಾರಿಯಾಗುವ ಹಕ್ಕು ಇರುವುದಿಲ್ಲ"** ಎಂದು ಓದಿಕೊಳ್ಳಬೇಕು ಎಂದು ಈ ಮೂಲಕ ಕೋರಿದೆ.

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ

– ಸಂಪಾದಕರು

## ನಿಮ್ಮ ಪ್ರಶ್ನೆ




## ನಮ್ಮ ಉತ್ತರ

– ಶೋಭಾ ಆರ್.
ಸಹ ಪ್ರಧಾನ ವ್ಯವಸ್ಥಾಪಕರು,
ಹಣಕಾಸು ಮತ್ತು ಸೇವಾ ವಿಭಾಗ

### ಇ–ಸ್ಟ್ಯಾಂಪಿಂಗ್ ವಿಭಾಗದ ಪ್ರಶ್ನೋತ್ತರಗಳು

ಪ್ರಶ್ನೆ 01 : ಇ–ಸ್ಟ್ಯಾಂಪಿಂಗ್ ಕಾರ್ಯನಿರ್ವಹಿಸುವ ಪ್ರತಿ ಎಸಿಸಿ ಕೇಂದ್ರದಲ್ಲಿ ಎಷ್ಟು ಜನ ಯೂಸರ್ ಹಾಗೂ ಸೂಪರ್‌ವೈಸರ್ ಇರಬೇಕು?

ಉತ್ತರ : ಪ್ರತಿ ಎಸಿಸಿ ಕೇಂದ್ರದಲ್ಲಿ 2 ಜನ ಯೂಸರ್ ಹಾಗೂ 2 ಸೂಪರ್‌ವೈಸರ್ ಇರಬೇಕು.

ಪ್ರಶ್ನೆ 02 : ಪಾಸ್‌ವರ್ಡ್ ರೀಸೆಟ್ ಹಾಗೂ ಎರರ್ ರಿಪೋರ್ಟ್ ಫಾರಂ ಅನ್ನು ಯಾವ ಇ–ಮೇಲ್ ಐಡಿಗೆ ಮೇಲ್ ಕಳುಹಿಸಬೇಕು?

ಉತ್ತರ : ಪಾಸ್‌ವರ್ಡ್ ರೀಸೆಟ್ ಹಾಗೂ ಎರರ್ ರಿಪೋರ್ಟ್ ಫಾರಂ ಅನ್ನು estamppassword.error@souharda.coop ಇ–ಮೇಲ್ ಐಡಿಗೆ ಮೇಲ್ ಕಳುಹಿಸಬೇಕು.

ಪ್ರಶ್ನೆ 03 : ಇ–ಸ್ಟಾಂಪ್ ಸರ್ಟಿಫಿಕೇಟ್ ತಪ್ಪಾಗಿ ಪ್ರಿಂಟ್ ಆದಲ್ಲಿ ಯಾವ ಫಾರಂ ಅನ್ನು ಕಳುಹಿಸಬೇಕು?

ಉತ್ತರ : ಇ–ಸ್ಟಾಂಪ್ ಸರ್ಟಿಫಿಕೇಟ್ ತಪ್ಪಾಗಿ ಪ್ರಿಂಟ್ ಆದಲಿ Error report ಫಾರಂ ಅನ್ನು ಕಳುಹಿಸಬೇಕು.

ಪ್ರಶ್ನೆ 04 : ರೂ.10/– ರಿಂದ ರೂ.100/–ರವರೆಗಿನ ಇ–ಸ್ಟ್ಯಾಂಪಿಂಗ್ ಸರ್ಟಿಫಿಕೇಟ್‌ಗೆ ACC ಕೇಂದ್ರಗಳು ತೆಗೆದುಕೊಳ್ಳಬೇಕಾದ ಸೇವಾ ಶುಲ್ಕ ಎಷ್ಟು?

ಉತ್ತರ : ರೂ.10/– ರಿಂದ ರೂ.100/–ರವರೆಗಿನ ಇ–ಸ್ಟ್ಯಾಂಪಿಂಗ್ ಸರ್ಟಿಫಿಕೇಟ್‌ಗೆ ACC ಕೇಂದ್ರಗಳು ರೂ.10 ಸೇವಾ ಶುಲ್ಕ ತೆಗೆದುಕೊಳ್ಳಬೇಕು.

ಪ್ರಶ್ನೆ 05 : ರೂ.5000/– ನಂತರದ ಇ–ಸ್ಟ್ಯಾಂಪಿಂಗ್ ಸರ್ಟಿಫಿಕೇಟ್‌ಗೆ ACC ಕೇಂದ್ರಗಳು ತೆಗೆದುಕೊಳ್ಳಬೇಕಾದ ಸೇವಾ ಶುಲ್ಕ ಎಷ್ಟು?

ಉತ್ತರ : ರೂ.5000/– ನಂತರದ ಇ–ಸ್ಟ್ಯಾಂಪಿಂಗ್ ಸರ್ಟಿಫಿಕೇಟ್‌ಗೆ ACC ಕೇಂದ್ರಗಳು ಯಾವುದೇ ಸೇವಾ ಶುಲ್ಕ ತೆಗೆದುಕೊಳ್ಳಬಾರದು.

ಪ್ರಶ್ನೆ 06 : ಇ–ಸ್ಟ್ಯಾಂಪಿಂಗ್ ವಿಭಾಗದಲ್ಲಿ ಎಷ್ಟು ಕಂಪ್ಯೂಟರ್‌ಗಳನ್ನು ಕಡ್ಡಾಯವಾಗಿ ಬಳಸಬೇಕು?

ಉತ್ತರ : ಇ–ಸ್ಟ್ಯಾಂಪಿಂಗ್ ವಿಭಾಗದಲ್ಲಿ 2 ಕಂಪ್ಯೂಟರ್‌ಗಳನ್ನು ಕಡ್ಡಾಯವಾಗಿ ಬಳಸಬೇಕು.

ಪ್ರಶ್ನೆ 07 : ಇ–ಸ್ಟ್ಯಾಂಪಿಂಗ್ ವಿಭಾಗದಲ್ಲಿ ಬಳಸುವ ಪ್ರಿಂಟರ್ ಮಾಡಲ್ ಯಾವುದು?

ಉತ್ತರ : ಇ–ಸ್ಟ್ಯಾಂಪಿಂಗ್ ವಿಭಾಗದಲ್ಲಿ Samsung M3320ND ಪ್ರಿಂಟರ್ ಬಳಸಬೇಕು.

ಪ್ರಶ್ನೆ 08 : ಇ–ಸ್ಟ್ಯಾಂಪಿಂಗ್‌ನಲ್ಲಿ ಬಳಸುವ ಎಕ್ಸಿಕ್ಯೂಟಿವ್ ಬಾಂಡ್ ಪೇಪರ್ ಎಷ್ಟು ಜಿ.ಎಸ್.ಎಮ್ ಇರಬೇಕು?

ಉತ್ತರ : 80 ರಿಂದ 100 ಜಿ.ಎಸ್.ಎಮ್ ಎಕ್ಸಿಕ್ಯೂಟಿವ್ ಬಾಂಡ್ ಪೇಪರ್ ಬಳಸಬೇಕು.

ಪ್ರಶ್ನೆ 09 : ಇ–ಸ್ಟ್ಯಾಂಪಿಂಗ್ ಐಡಿಯನ್ನು ಲಾಗಿನ್ ಮಾಡಲು ಇರುವ ವೆಬ್‌ಸೈಟ್ ಯಾವುದು?

ಉತ್ತರ : ಇ–ಸ್ಟ್ಯಾಂಪಿಂಗ್ ಐಡಿಯನ್ನು ಲಾಗಿನ್ ಮಾಡಲು ಇರುವ ವೆಬ್‌ಸೈಟ್ www.shcilestamp.com

ಪ್ರಶ್ನೆ 10 : ಎಸಿಸಿ ಎಂದರೆ

ಉತ್ತರ : ಎಸಿಸಿ ಎಂದರೆ ಅಧಿಕೃತ ಸಂಗ್ರಹಣ ಕೇಂದ್ರ

### ಕೋ–ಆಪರೇಟಿವ್ ಬ್ಯಾಂಕ್‌ಗಳಿಗೆ ತೆರಿಗೆ ವಿನಾಯ್ತಿ ಇಲ್ಲ : ಜೇಟ್ಲಿ

**ಹೊಸದಿಲ್ಲಿ :** ಲಾಭದಲ್ಲಿರುವ ಸಹಕಾರ ಬ್ಯಾಂಕ್‌ಗಳಿಗೆ (ಕೋ–ಆಪರೇಟಿವ್ ಬ್ಯಾಂಕ್) ಆದಾಯ ತೆರಿಗೆ ವಿನಾಯಿತಿ ನೀಡುವ ಪ್ರಶ್ನೆಯೇ ಇಲ್ಲ. ಅವುಗಳನ್ನು ವಾಣಿಜ್ಯ ಬ್ಯಾಂಕ್‌ಗಳಂತೆಯೇ ಪರಿಗಣಿಸಲಾಗುತ್ತದೆ ಎಂದು ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿರವರು ಲೋಕಸಭೆಯಲ್ಲಿ ಹೇಳಿದ್ದಾರೆ. "ವಾಣಿಜ್ಯ ಬ್ಯಾಂಕ್‌ನಂತೆಯೇ ಕಾರ್ಯನಿರ್ವಹಿಸುವ ಕೋ–ಆಪರೇಟಿವ್ ಬ್ಯಾಂಕ್‌ಗಳು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಪಿ ಅನ್ವಯ ತೆರಿಗೆ ರಿಯಾಯಿತಿಗೆ ಅರ್ಜಿ ಸಲ್ಲಿಸಬಾರದು. ಲಾಭಕ್ಕೆ ಆದಾಯ ತೆರಿಗೆ ವಿಧಿಸಲಾಗುತ್ತದೆ" ಎಂದು ಹೇಳಿದ್ದಾರೆ.

## ಸಂಯುಕ್ತ ಸಹಕಾರಿಯ ಸಿಬ್ಬಂದಿ ನೇಮಕಾತಿಗಾಗಿ ಸಮಿತಿ

ಸಂಯುಕ್ತ ಸಹಕಾರಿಗೆ ಅವಶ್ಯಕವಿರುವ ಸಿಬ್ಬಂದಿಗಳ ನೇಮಕಾತಿಗಾಗಿ ಸಮಿತಿಯೊಂದನ್ನು ರಚಿಸಲಾಗಿದೆ. ಸಮಿತಿಯ ಅಧ್ಯಕ್ಷರಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಇರುತ್ತಾರೆ. ಸದಸ್ಯರುಗಳಾಗಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಎಂ.ಬಿ. ಕಲಾಲ, ಶ್ರೀ ಮಂಜುನಾಥರವರುಗಳು ಮತ್ತು ಬಾಹ್ಯತಜ್ಞರಾಗಿ ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರುಗಳಾದ ಶ್ರೀ ಸಿ.ಎನ್.ಪರಶಿವಮೂರ್ತಿ ಹಾಗೂ ಶ್ರೀ ಆರ್.ಎಸ್.ಹುಚ್ಚಾಚಾರಿಯವರುಗಳು ಮತ್ತು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಕಾರ್ಯನಿರ್ವಹಿಸುತ್ತಾರೆ.

ಸಿಬ್ಬಂದಿ ನೇಮಕಾತಿ ಸಮಿತಿಯು ಇದೇ ಜನವರಿ 2ನೇ ವಾರದಲ್ಲಿ ಸಭೆ ಸೇರಿ ನೇಮಕಾತಿ ಪ್ರಕಟಣೆಯನ್ನು ಅಂತಿಮಗೊಳಿಸಲು ತೀರ್ಮಾನಿಸಿದೆ. ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coopನಲ್ಲಿ ಪ್ರಕಟಿಸಲಾಗುವುದು.

## "ದೈವಾತ್ಮಭಾವದಲಿ ಧನ್ಯಳಾದಳು ಶಬರಿ"



ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಜಗತ್ತಿನ ಎಲ್ಲಾ ಧರ್ಮಗ್ರಂಥಗಳೂ ಸಹ ವ್ಯಕ್ತಿ ಜೀವನದ ಉತ್ಕೃಷ್ಟತೆಗೆ ತ್ಯಾಗ ಹಾಗೂ ದಾನ ಪ್ರಕ್ರಿಯೆಗಳನ್ನು ನಿರ್ದೇಶಿಸುವುದನ್ನು ಕಾಣುತ್ತೇವೆ. ಎಷ್ಟೆಲ್ಲ ಧರ್ಮಗ್ರಂಥಗಳ ನಿರ್ದೇಶನಗಳು, ಧರ್ಮಗುರುಗಳ ಪ್ರವಚನಗಳು ಎಡಬಿಡದೇ ಪುಸ್ತಕ ರೂಪದಲ್ಲಿ ಅಥವಾ ಪ್ರಭಾವಿ ಮಾಧ್ಯಮಗಳ ಮೂಲಕ ಬಿತ್ತರವಾಗುತ್ತಿದ್ದರೂ, ಅನುಪಯುಕ್ತವಾಗಿ ಕಾಲ ಸಾಗುತ್ತಿದೆಯೇ ಹೊರತು ಬಹುಪಾಲು ಮನುಜರ ಬದುಕು ಅಸಹನೀಯವಾಗಿದೆ. ವಿಶ್ವಪಿತನ ಮಕ್ಕಳುಗಳಾದ ನಾವೆಲ್ಲಾ ಸುಖ ಶಾಂತಿಗಳಿಂದಿರಬೇಕೆಂಬ ನಿಜ ಹಂಬಲವನ್ನು ತೊರೆದು ಈಗಿನ ಜನ್ಮಮಾತ್ರಕ್ಕಲ್ಲದೇ ಮುಂದಿನ ತಲೆಮಾರಿನವರಿಗೂ ಕೂಡಿಡಬೇಕೆಂಬ ಕೆಟ್ಟ ಹಂಬಲ ಮನದಾಳದಿಂದ ಮೂಡಿ ಸಮಾಜದ ಬದುಕು ಕ್ರೂರವಾಗುತ್ತಿದೆ.

ವಿಜ್ಞಾನದ ಮುನ್ನಡೆ ಹಾಗೂ ತಂತ್ರಜ್ಞಾನದ ಅಭ್ಯುದಯಗಳಿಂದ ಮಾನವ ಇತರೇ ಗ್ರಹಗಳಿಗೆ ಹೋಗುವುದನ್ನು ಕಲಿತ, ಆದರೆ ತನ್ನ ಸಹವರ್ತಿಗಳಾದ ಮನುಜರೊಡನೆ ಸಹೋದರ ಭಾವವನ್ನು ಮಾತ್ರ ಮರೆತು "ಬೆದಕಾಟ ಬದುಕೆಲ್ಲ ಚಣಚಣವು ಹೊಸಹಸಿವು ಅದಕಾಗಿ ಇದಕಾಗಿ ಮತ್ತೊಂದಕ್ಕಾಗಿ" ಹಾತೊರೆಯುವ ಸ್ವಭಾವ ಬೆಳೆಸಿಕೊಂಡಿರುವುದನ್ನು ಕಂಡ ಡಿ.ವಿ.ಜಿ.ಯವರು ರಾಮಾಯಣಜನಿತ "ಶಬರಿ"ಯ ಮನೋವಿಸ್ತಾರ, ದೈವಾತ್ಮಭಾವ, ಸ್ವಾರ್ಥರಹಿತ ಬದುಕಿನ ಜೊತೆಗೆ ಇತರರ ಸಂತುಷ್ಟಿಯನ್ನು ವೀಕ್ಷಿಸುವ ಉದಾಹರಣೆ ಮೂಲಕ ನಮ್ಮ ಕಣ್ಣುಗಳನ್ನು ತೆರೆಸುವ ಪದ್ಯದ ಮಧುರತೆಯನ್ನು ಗಮನಿಸಿ.

**"ತನ್ನ ರುಚಿ ರಾಮರುಚಿ ತನ್ನ ಸಂತುಷ್ಟಿ ಪರಿ–**
**ಪೂರ್ಣವಪ್ಪುದು ರಾಮ ಸಂತುಷ್ಟಿಯಿಂದೆ**
**ಎನ್ನುವಾ ಸಾಜದಾ ದೈವಾತ್ಮಭಾವದಲಿ**
**ಧನ್ಯಳಾದಳು ಶಬರಿ ಮಂಕುತಿಮ್ಮ"**

ಶಬರಿಯು ಶ್ರೀರಾಮ ಭಕ್ತೆ. ತನ್ನ ಇಳಿವಯಸ್ಸನ್ನು ಕಾಡಿನಲ್ಲಿ ಕಳೆಯುತ್ತಾ ರಾಮನು ತನ್ನ ವನವಾಸ ಪ್ರಯಾಣದಲ್ಲಿ ತಾನಿರುವ ದಾರಿಯಲ್ಲೇ ಬರಲಿ ಎಂದು ಪ್ರಾರ್ಥಿಸಿ, ಆತನಿಗೆ ರುಚಿರುಚಿಯಾದ ಹಣ್ಣುಗಳನ್ನು ತಾನು ಮೊದಲು ರುಚಿ ನೋಡಿ ಸಿದ್ಧಪಡಿಸಿ, ಕಾಯುತ್ತಿದ್ದವಳು. ಅವಳ ನಿರೀಕ್ಷೆಯಂತೆಯೇ ರಾಮಾಗಮನವಾಯಿತು. "Prayers are certainly an ever present help in times of crisis" ಎನ್ನುವ ಉಕ್ತಿಯಂತೆ ಶಬರಿಯ ನಿರೀಕ್ಷೆಯ ಮಾತ್ರದಿಂದಲೇ ರಾಮ ಪಥವು ಬದಲಾಗಿ ಶಬರಿಯೆಡೆಗೆ ಬಂದದ್ದು ಬಹುಮುಖ್ಯವಾಗಿ ಗಮನಿಸಬೇಕಾದ ಅಂಶ. ರಾಮನಿಗೆ ನೀಡಿದ ರುಚಿಯುಕ್ತ ಹಣ್ಣುಗಳನ್ನು ಸ್ವೀಕರಿಸಿದ ಅವತಾರ ಪುರುಷ ರಾಮನು ಸಂತೃಪ್ತವಾದನೆಂಬ ಕಥೆಯಿಂದ ನಾವು ಅರಿಯಬೇಕಾದ ಅಂಶ ಬಹುಮುಖ್ಯ.

ಸಹಕಾರಿ ಸಂಸ್ಥೆಗಳು ಪ್ರಥಮತಃ ಜನ ಸೇವಾ ಸಂಸ್ಥೆಗಳು. ಸರ್ಕಾರದ ನೆರವಿನಿಂದ ಹೆಚ್ಚೆಚ್ಚು ಜನ ಸೇವೆಯಲ್ಲಿ ತೊಡಗಿಸಿಕೊಳ್ಳುವ ಸಂಸ್ಥೆಗಳು. ಇಂತಹ ಜನಸೇವಾ ಕೇಂದ್ರಗಳಲ್ಲಿ ಕಾರ್ಯತತ್ಪರರಾಗಿರುವ ಜನ ನಾಯಕರು ಅಂದರೆ ಸಹಕಾರಿಗಳು, ನೌಕರರು ಹಾಗೂ ಅಧಿಕಾರಿಗಳು ಇಂತಹ ಉದಾಹರಣೆಯಿಂದ ಪ್ರೇರಿತರಾಗಿ ಸುಖೀ ಸಮಾಜದ ಸ್ಥಾಪನೆಗಾಗಿ ಹೆಚ್ಚಿನ ತ್ಯಾಗ ಬುದ್ಧಿಯನ್ನು ಬಳಸಿಕೊಳ್ಳಲೆಂಬುದೇ ಆಗಿದೆ.

ಆದ್ದರಿಂದ, "Man gets and forgets" "God gives and forgives" ಎಂಬುದನ್ನರಿಯ ಬೇಕಾಗಿದೆ. ಪದ್ಯವನ್ನು ಆಳವಾಗಿ ಅವಲೋಕಿಸಿದಲ್ಲಿ ಸ್ವಜನಪಕ್ಷಪಾತ, ಭ್ರಷ್ಟಾಚಾರ, ಮತೀಯತೆಗೊಳಗಾಗಿರುವ ಇಂದಿನ ಕಾಲಘಟ್ಟದ ನಾಯಕರುಗಳ ಮನೋಚಿಂತನೆಯ ಮಜಲನ್ನು ಬದಲಿಸಿಕೊಳ್ಳಲು ನೀಡಿರುವ ನಿರ್ದೇಶನದಂತೆ ಕಂಡು ಬರುತ್ತದೆ. ತತ್ಕಾರಣ ಶಬರಿಯ ಉದಾಹರಣೆಯನ್ನು ಅನುಸರಿಸುತ್ತಾ ನಮ್ಮ ಶಕ್ತ್ಯಾನುಸಾರ ತ್ಯಾಗ ದಾನಗಳತ್ತ ಗಮನಹರಿಸೋಣ.

# ಕಛೇರಿ ಆಡಳಿತ

▶▶ ಬಿ. ಎ. ಮಹದೇವಪ್ಪ, ಸಹಕಾರಿಯ ತರಬೇತುದಾರರು.



"ಸಹಕಾರ" ಎಂದರೆ ಒಟ್ಟಾಗಿ ಪರಸ್ಪರ ನೆರವಾಗುವುದು ಮತ್ತು ಕಾರ್ಯನಿರ್ವಹಿಸುವುದು ಎನ್ನಬಹುದು. ಸಹಕಾರ ಮಾನವನ ಹುಟ್ಟುಗುಣವಾಗಿರುವುದಲ್ಲದೇ ರಕ್ತಗತವಾಗಿ ಬೆಳೆದು ಬಂದಿದೆ. "ಕೋ–ಆಪರೇಷನ್" ಎಂಬ ಆಂಗ್ಲ ಪದವು ಲ್ಯಾಟಿನ್ ಭಾಷೆಯ 'ಕೋ' ಮತ್ತು 'ಅಪರ್ರೈ' ಎಂಬ ಎರಡು ಪದಗಳಿಂದ ಬಂದಿದ್ದು, 'ಕೋ' ಎಂದರೆ ಒಟ್ಟಿಗೆ ಸೇರು ಮತ್ತು 'ಅಪರ್ರೈ' ಎಂದರೆ ಕೆಲಸ ಮಾಡುವುದು ಎಂದರ್ಥ. ಹಾಗಿದ್ದ ಮೇಲೆ ಒಂದು ಕಛೇರಿಯಲ್ಲಿ ಸಹಕಾರ ತುಂಬಾ ಮುಖ್ಯ. ಅದರಲ್ಲೂ ಸಹಕಾರಿಯಲ್ಲಿ ಸಹಕಾರ ತುಂಬಾ ಅಗತ್ಯ. ಏಕೆಂದರೆ ಸೌಹಾರ್ದ ಸಹಕಾರಿ ಚಳುವಳಿಗೆ... ಈಗ 17 ವರ್ಷ. ಈ ಅವಧಿಯಲ್ಲಿ ಸಾಧಿಸಿದ ಸಾಧನೆಗಳು... ಸಾಕಷ್ಟಿವೆ. ಆದರೆ, ಸಾಧಿಸಬೇಕಾದದ್ದು ಬೇಕಾದಷ್ಟಿದೆ. ಗಂಧ ವೃಕ್ಷವ ಕಡಿದಲ್ಲಿ ನೊಂದೆನೆಂದು ಗಂಧವ ಬಿಟ್ಟತ್ತೆ ಅಯ್ಯಾ? ಚಂದದ ಸುವರ್ಣವ ತಂದು ಕಾಸಿ ಒಡಿದಡೆ ನೊಂದನೆಂದು ಕಳಂಕ ಹಿಡಿಯಿತೆ ಅಯ್ಯಾ? ಸಂದು ಕಡಿದ ಕಬ್ಬು ಯಂತ್ರದಲ್ಲಿಟ್ಟು ತಿರುಹಿ ಕಾಸಿದಡೆ ನೊಂದನೆಂದು ಸಿಹಿಯಾಗುವುದ ಬಿಟ್ಟಿತ್ತೆ ಅಯ್ಯಾ? ತಂದು ಭವಕಟ್ಟಿಬಿಟ್ಟಡೆ ನಿಮ್ಮರಿವು ಬಿಟ್ಟನೆ ಅಯ್ಯಾ? ಎಂದು ಕಪಿಲಸಿದ್ದ ಮಲ್ಲಿಕಾರ್ಜುನಾ ವಚನಕಾರರು ಹೇಳಿದ್ದಾರೆ ಅಂದರೆ ನಮಗೆ ಬೇಡವೆಂದಾಗ, ನಮಗೆ ತೊಂದರೆಯಾಗಿದೆ ಎಂದಾಗ ನಾವು ನಮ್ಮ ತನವನ್ನು ಮರೆತು ಜೀವಿಸಬಾರದು. ಜೀವನದಲ್ಲಿ ಪರಸ್ಪರ ಸಹಕಾರ, ಹೊಂದಾಣಿಕೆನ್ನುವುದು ಈ ಆಧುನಿಕ ಜಗತ್ತಿಗೆ ಅತ್ಯವಶ್ಯಕ. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ – ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದು ಮಾತ್ರ ನಮ್ಮ ಕರ್ತವ್ಯ, ಫಲಾಫಲಗಳ ಬಗ್ಗೆ ನಾವು ಚಿಂತಿಸಬೇಕಾದ ಅಗತ್ಯವಿಲ್ಲ.

ಕಛೇರಿಗಳಲ್ಲಿ ನಾವು ಕೆಲಸ ಮಾಡುವಾಗ ನಮಗೆ ಸಹಕಾರ, ಹೊಂದಾಣಿಕೆ, ಪ್ರಾಮಾಣಿಕತೆ ಮತ್ತು ಕರ್ತವ್ಯ ಪ್ರಜ್ಞೆ, ಕೆಲಸದಲ್ಲಿ ಪರಿಪೂರ್ಣತೆ, ಸಮಯ ಪ್ರಜ್ಞೆ ಇವೆಲ್ಲವುಗಳ ಜೊತೆಗೆ ಕಛೇರಿಯಲಿ ಆಡಳಿತ, ಕಡತ ನಿರ್ವಹಣೆ ಮತ್ತು ದಾಖಲಾತಿ ನಿರ್ವಹಣೆ ಬಗ್ಗೆ ಹಾಗೂ ಕಛೇರಿಯು ಅದು ಮಾಹಿತಿ ಕೇಂದ್ರವಾಗಿ, ಸೇವೆಯ ಕೇಂದ್ರವಾಗಿ, ಆಡಳಿತ ಕೇಂದ್ರವಾಗಿ ಆಧುನಿಕ ತಂತ್ರಜ್ಞಾನದೊಂದಿಗೆ, ಪರಿಸ್ಥಿತಿಯ ಬದಲಾವಣೆಗಳೊಂದಿಗೆ ಕಛೇರಿಯ ಪರಿಪೂರ್ಣತೆಯಾಗಬೇಕಿದೆ. ಅದರಲ್ಲೂ ಸೌಹಾರ್ದ ಸಹಕಾರಿ ಕ್ಷೇತ್ರ... ಪರಿಪೂರ್ಣತೆಯತ್ತ ಇನ್ನೂ ಸಾಗಬೇಕಾಗಿದೆ. ಈ ಕೆಳಕಂಡ ಎರಡು ಕಾರಣಗಳಿಂದ ಪರಿಪೂರ್ಣತೆ ಸಾಧ್ಯವಾಗುವುದಿಲ್ಲ.

1. ವಿಷಯವನ್ನು ಪೂರ್ಣವಾಗಿ ತಿಳಿದುಕೊಳ್ಳದಿರುವಿಕೆ.
2. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳದಿರುವಿಕೆ.

ಈ ಎರಡೂ ಅಂಶಗಳ ಬಗ್ಗೆ ಒಂದು ಆತ್ಮಾವಲೋಕನ ಮಾಡಿಕೊಳ್ಳೋಣ.

1. **ವಿಷಯವನ್ನು ಪೂರ್ಣವಾಗಿ ತಿಳಿದುಕೊಳ್ಳದಿರುವಿಕೆ :** ಅನೇಕ ಸಹಕಾರಿಗಳಲ್ಲಿ ವೃತ್ತಿಪರತೆಯ ಕೊರತೆ ಇದೆ. ಹೆಚ್ಚಿನವರು ಅವರ ಸಹಕಾರಿಗಳ ಸಂವಿಧಾನವನ್ನು ಪೂರ್ಣವಾಗಿ ಓದಿಕೊಂಡಿಲ್ಲ; ಕೆಲವು ಮುಖ್ಯ ಕಾರ್ಯನಿರ್ವಾಹಕರಿಗೆ ಆಸ್ತಿ–ಜವಾಬ್ದಾರಿ, ಜಮಾ–ಖರ್ಚು ತಃಖ್ತೆಗಳನ್ನು ಸಿದ್ಧಪಡಿಸಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ಸಿದ್ಧಪಡಿಸಿದರೂ ಅವುಗಳು ತಾಳೆಯಾಗುತ್ತಿಲ್ಲ. ಅನೇಕ ಸಿಬ್ಬಂದಿಗಳಿಗೆ ದಾಖಲಾತಿಗಳ ನಿರ್ವಹಣೆ / ಟಿಪ್ಪಣಿ ಸಿದ್ಧಪಡಿಸುವಿಕೆ ಬಗ್ಗೆ ಪರಿಣಿತಿಯ ಕೊರತೆ ಇದೆ. ಈಗ ಅಳವಡಿಸಿಕೊಂಡಿರುವ ತಂತ್ರಜ್ಞಾನ ಪ್ರಸ್ತುತ ಸನ್ನಿವೇಶಕ್ಕೆ ಸಾಕಾಗುವುದಿಲ್ಲ.
2. **ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳದಿರುವಿಕೆ :** ಬದಲಾವಣೆ ಎಂದರೆ "ಹಳೆಯದನ್ನು ಕಳೆದುಕೊಳ್ಳುವುದಲ್ಲ; ಹೊಸತನ್ನು ಗೆದ್ದುಕೊಳ್ಳುವುದು" ಎಂದರ್ಥ. ಸಹಕಾರಿ ಕಾಯಿದೆಗೆ ತಿದ್ದುಪಡಿಗಳಾಗುತ್ತಿವೆ. ಆದಾಯ ತೆರಿಗೆ ಕಾಯಿದೆ ಬಿಗಿಯಾಗುತ್ತಿದೆ. ತಂತ್ರಜ್ಞಾನ ಅನಿವಾರ್ಯವಾಗುತ್ತಿದೆ. ಈ ಸನ್ನಿವೇಶದಲ್ಲಿ... ಹೊಸತನ್ನು ತಿಳಿದುಕೊಳ್ಳಬೇಕಾದ, ಬದಲಾವಣೆಗೆ ತೆರೆದುಕೊಳ್ಳಬೇಕಾದ ಅನಿವಾರ್ಯತೆ ಸಹಕಾರಿಗಳ ಮುಂದೆ ಒಂದು ಸವಾಲಾಗಿ ನಿಂತಿದೆ. ಹೊಸ ಐಡಿಯಾಗಳಿಗೆ ಕಾವು ಕೊಡದಿದ್ದರೆ, ನಮ್ಮನ್ನು ನಾವು reinvent ಮಾಡಿಕೊಳ್ಳದಿದ್ದರೆ, ಬೇರೆಯವರು ನಮ್ಮನ್ನು overtake ಮಾಡಿಬಿಡುತ್ತಾರೆ.

ಜಿಂಕೆ ಬದುಕಬೇಕಾದರೆ ವೇಗವಾಗಿ ಓಡುವುದನ್ನು ಕಲಿಯಬೇಕು, ಇಲ್ಲದಿದ್ದರೆ ಹುಲಿಗೆ ಆಹಾರವಾಗುತ್ತದೆ. ಹುಲಿಯು ಬದುಕಬೇಕಾದರೆ ಇನ್ನಷ್ಟು ವೇಗವಾಗಿ ಓಡುವುದನ್ನು ಕಲಿಯಬೇಕು. ಇಲ್ಲದಿದ್ದರೆ ಜಿಂಕೆ ತಪ್ಪಿಸಿಕೊಳ್ಳುತ್ತದೆ. ಇದಕ್ಕೆ ಅನುಗುಣವಾಗಿ ನಮಗೆ ತರಬೇತಿ ಬೇಕಾಗಿದೆ. ತರಬೇತಿ ನಮಗೆ Investment ಇದ್ದಂತೆ. ಸಹಕಾರಿಗಳಲ್ಲಿ... ಕಛೇರಿ ಆಡಳಿತ, ಕಡತ ನಿರ್ವಹಣೆ ಮತ್ತು ದಾಖಲಾತಿ ನಿರ್ವಹಣೆಯೊಂದಿಗೆ, ಕಛೇರಿಯು ಆಡಳಿತ ಕೇಂದ್ರವಾಗಿ ಅದು ಮಾಹಿತಿ ಕೇಂದ್ರ... ಸೇವೆಯ ಕೇಂದ್ರವಾಗಿ ಕಾರ್ಯನಿರ್ವಹಿಸಬೇಕಾಗಿದೆ. ಪ್ರತಿಯೊಂದು ಸಹಕಾರಿಯಲ್ಲಿ ಪತ್ರ ವ್ಯವಹಾರ, ನೌಕರರ ಕೆಲಸ ಕಾರ್ಯಗಳು, ಸದಸ್ಯತ್ವ ನೋಂದಣಿ, ಸಾಲ ನೀಡಿಕೆ, ಸಾಲ ಮರುಪಾವತಿ, ಠೇವಣಿ ಸಂಗ್ರಹಣೆ, ಸಭೆಗಳು, ಚುನಾವಣೆಗಳು, ವರದಿ ಸಲ್ಲಿಸುವಿಕೆ... ಇತ್ಯಾದಿ ವ್ಯವಹಾರಗಳು ಕಛೇರಿ ಮೂಲಕವೇ ನಡೆಯುತ್ತವೆ. ಇವುಗಳನ್ನು ಸಮರ್ಪಕವಾಗಿ ನಿರ್ವಹಿಸುವುದೇ... ಕಛೇರಿ ನಿರ್ವಹಣೆಯ ಮುಖ್ಯ ಉದ್ದೇಶ.

ಹಾಗಾದರೆ ನಮ್ಮ ಸಹಕಾರಿ ಕಛೇರಿ ಹೇಗಿರಬೇಕು...? ಕಛೇರಿಯು ಸುಭದ್ರವಾದ ಕೊಠಡಿಗಳನ್ನು ಹೊಂದಿರಬೇಕು. ಗಾಳಿ, ಬೆಳಕು ಸರಾಗವಾಗಿ ಬರುವಂತಹ ಕಿಟಕಿಗಳ ವ್ಯವಸ್ಥೆ ಇರಬೇಕು. ಜನರು ಕುಳಿತುಕೊಳ್ಳಲು ಆಸನ ವ್ಯವಸ್ಥೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಕೆಲಸಗಳ ನಿರ್ವಹಣೆಗಾಗಿ ಪೀಠೋಪಕರಣಗಳು ಮತ್ತು ಸುಭದ್ರವಾದ ಕಪಾಟುಗಳು ವ್ಯವಸ್ಥಿತ ರೀತಿಯಲ್ಲಿರಬೇಕು ಮತ್ತು ಕಛೇರಿಯಲ್ಲಿ ಸಿಬ್ಬಂದಿಯ ಹಾಜರಾತಿ, ನೋಂದಣಿ ಪತ್ರ, ಉಪವಿಧಿಗಳು, ಕಾಯಿದೆ ಪುಸ್ತಕ, ವ್ಯವಹಾರಗಳ ನಿಯಮಗಳು, ಸೇವಾ ನಿಯಮಗಳು, ಸದಸ್ಯತ್ವ ರಿಜಿಸ್ಟರ್, ಸಭಾ ನಡವಳಿಗಳ ರಿಜಿಸ್ಟರ್, ಜಮಾ–ಖರ್ಚು ಪುಸ್ತಕ, ವಿಮೆ, ಸಾಲ/ ಠೇವಣಿ ಕುಳುವಾರು, ಸ್ಥಿರಾಸ್ತಿ ರಿಜಿಸ್ಟರ್, ಪೀಠೋಪಕರಣಗಳ ರಿಜಿಸ್ಟರ್, ರಜೆಗಳ ರಿಜಿಸ್ಟರ್, ಜನರಲ್ ಲೆಡ್ಜರ್, ಡೇ ಬುಕ್, ಡಿವಿಡೆಂಡ್ ರಿಜಿಸ್ಟರ್, ಇನ್‌ವೆಸ್ಟ್‌ಮೆಂಟ್ ರಿಜಿಸ್ಟರ್, ಆಡಿಟ್ ವರದಿ, ವೇತನ ಬಟವಾಡೆ ರಿಜಿಸ್ಟರ್ ಇತ್ಯಾದಿ... ಕಛೇರಿಯಲ್ಲಿ ಇಡಬೇಕಾದ ದಾಖಲೆಗಳಾಗಿವೆ ಹಾಗೂ ಇದರೊಂದಿಗೆ ಸಿಬ್ಬಂದಿ ನೇಮಕಾತಿ, ತರಬೇತಿ, ಬಡ್ತಿ, ರಜೆ, ವೇತನ ಮತ್ತು ಶಿಸ್ತು ಕ್ರಮ ಮುಂತಾದ ಅಂಶಗಳನ್ನು

ಒಳಗೊಂಡ ಸೇವಾ ನಿಯಮಗಳು (Service Rules), ಠೇವಣಿ ಸಂಗ್ರಹಣೆ, ವಿನಿಯೋಗಕ್ಕೆ ಸಂಬಂಧಿಸಿದ ವ್ಯವಹಾರ ನಿಯಮಗಳು (Business Rules), ಸಾಲ ಮಂಜೂರಾತಿ ಬಿಡುಗಡೆ, ಸಾಲ ವಸೂಲಾತಿಗೆ ಸಂಬಂಧಿಸಿದ ಸಾಲದ ನಿಯಮಗಳು (Loan Rules), ಆಡಳಿತ ಮಂಡಲಿ ಅನುಮೋದನೆಯೊಂದಿಗೆ ಅನುಷ್ಠಾನಗೊಳ್ಳುವಂತಿರಬೇಕು. ಕೆಲಸದ ಹಂಚಿಕೆ (Job Chart), ಅಧಿಕಾರ ಪ್ರತ್ಯಾಯೋಜನೆ (Delegation of Power) ಹಾಗೂ ಕಾರ್ಯಾನುಷ್ಠಾನದ ಹೊಣೆಗಾರಿಕೆ (Entrustment) ಬಗ್ಗೆ ಕಛೇರಿ ಆದೇಶ ಇರತಕ್ಕದ್ದು. ಜಾಬ್ ಚಾರ್ಟ್‌ನ ಒಂದು ಪ್ರತಿಯನ್ನು ಸಂಬಂಧಿಸಿದ ಸಿಬ್ಬಂದಿಗೆ ತಲುಪಿಸಿ, ಇನ್ನೊಂದು ಪ್ರತಿಗೆ ಅವರಿಂದ ಸಹಿ ಪಡೆದು ಸುಪರ್ದಿನಲ್ಲಿಟ್ಟುಕೊಳ್ಳಬೇಕು.

ಕಛೇರಿಯಲ್ಲಿ ಪ್ರತಿ ಸಿಬ್ಬಂದಿಯು ತನಗೆ ವಹಿಸಿಕೊಟ್ಟಿರುವ ಕೆಲಸಗಳಿಗೆ ಪೂರ್ಣ ಹೊಣೆಗಾರನಾಗಿರುತ್ತಾನೆ. ಪ್ರತಿ ಸಿಬ್ಬಂದಿಯ ಸೇವಾ ರಿಜಿಸ್ಟರ್ ಜೊತೆಗೆ ಎಲ್ಲಾ ಸೇವಾ ದಾಖಲೆಗಳನ್ನು ವ್ಯವಸ್ಥಿತವಾಗಿ ಇಟ್ಟುಕೊಳ್ಳತಕ್ಕದ್ದು. ಅಟೆಂಡರ್ ಹುದ್ದೆಗೂ ಜಾಬ್ ಚಾರ್ಟ್ ಇದೆ. ಪ್ರತಿನಿತ್ಯವೂ... ಕಛೇರಿ ಆರಂಭಕ್ಕೆ ಕನಿಷ್ಠ ಅರ್ಧ ಗಂಟೆ ಮುಂಚೆ ಬಂದು ಕಛೇರಿಯನ್ನು ಸ್ವಚ್ಛವಾಗಿಡತಕ್ಕದ್ದು. ಟೇಬಲ್, ಕುರ್ಚಿಗಳು, ಟೆಲಿಫೋನ್, ಕಂಪ್ಯೂಟರ್‌ಗಳನ್ನು ಒರೆಸಿ ಸ್ವಚ್ಛವಾಗಿಡುವುದು. ಮೇಲಧಿಕಾರಿಗಳ ಟೇಬಲ್ ಮೇಲೆ ಕಾಲಿಂಗ್ ಬೆಲ್, ನೀರು ತುಂಬಿದ ಲೋಟ, ಪೆನ್‌ಸ್ಟಾಂಡ್ ಮುಂತಾದವುಗಳನ್ನು ಕ್ರಮವಾಗಿ ಇಡುವುದು. ಕಛೇರಿ ಕೆಲಸಗಳು ಆರಂಭವಾದ ನಂತರ... ಆಯಾ ವಿಷಯಕ್ಕೆ ಸಂಬಂಧಿಸಿದ ಕಡತ/ ಪತ್ರಗಳನ್ನು ಆಯಾ ವಿಭಾಗದವರಿಗೆ ತಂದುಕೊಡುವುದು. ಒಂದು ವಿಭಾಗದಿಂದ ಮತ್ತೊಂದು ವಿಭಾಗಕ್ಕೆ ಕಡತ/ ಪತ್ರಗಳನ್ನು ತಲುಪಿಸುವುದು. ಕಛೇರಿಗೆ ಭೇಟಿ ನೀಡುವ ಜನರನ್ನು ಮಾತನಾಡಿಸಿ, ಅವರ ಭೇಟಿಯ ಉದ್ದೇಶವನ್ನು ತಿಳಿದುಕೊಂಡು ಕಛೇರಿ ಮುಖ್ಯಸ್ಥರು ಅಥವಾ ಸಂಬಂಧಿಸಿದ ವಿಷಯ ನಿರ್ವಾಹಕರ ಬಳಿ ಕಳುಹಿಸುವ ವ್ಯವಸ್ಥೆ ಮಾಡುವುದು. ಪ್ರಕಟಣಾ ಫಲಕದಲ್ಲಿ ನೋಟೀಸು, ಸುತ್ತೋಲೆಗಳನ್ನು ಕ್ರಮಬದ್ಧವಾಗಿ ಹಾಕುವುದು. ರವಾನೆ ಗುಮಾಸ್ತನ ಕೆಲಸಗಳಾದ ಕವರ್‌ಗಳನ್ನು ಸಿದ್ಧಪಡಿಸುವುದು, ಪತ್ರವನ್ನು ಕವರಿಗೆ ಹಾಕಿ ಅಂಟಿಸುವುದು, ಸ್ಟಾಂಪ್ ಹಚ್ಚುವುದು, ವಿಳಾಸದ ಮೊಹರನ್ನು ಹಾಕುವುದು ಮುಂತಾದವುಗಳಿಗೆ ನೆರವು ನೀಡುವುದು. ಸ್ಥಳೀಯ ಪತ್ರಗಳನ್ನು ಮುದ್ದಾಂ ತಲುಪಿಸುವುದು ಮತ್ತು ರಿಜಿಸ್ಟರ್ಡ್/ ಕೊರಿಯರ್ ಪತ್ರಗಳನ್ನು ಸಂಬಂಧಿಸಿದ ಸಂಸ್ಥೆಯ ಮೂಲಕ ಸ್ವೀಕೃತಿಯೊಂದಿಗೆ ಕಳುಹಿಸಿಕೊಡುವುದು. ಜೆರಾಕ್ಸ್ ಪ್ರತಿಗಳ ಅಗತ್ಯವಿದ್ದಾಗ ಸಂಬಂಧಿಸಿದ ವಿಭಾಗಕ್ಕೆ ತಲುಪಿಸುವುದು. ಟೆಲಿಫೋನ್, ನೀರು, ವಿದ್ಯುತ್ ಬಿಲ್‌ಗಳನ್ನು ಸಕಾಲದಲ್ಲಿ ಪಾವತಿಸುವ ಬಗ್ಗೆ ನಿಗಾ ಇಡುವುದು. ಕಛೇರಿ ಕೆಲಸಗಳ ಮೇಲೆ ಮೇಲಧಿಕಾರಿಗಳು ಪ್ರಯಾಣಿಸುವಾಗ ರೈಲು/ ಬಸ್ಸು ಟಿಕೆಟ್‌ಗಳನ್ನು ರಿಸರ್ವ್ ಮಾಡಿಸಿ, ತಲುಪಿಸುವುದು. ಸಭೆಗಳು ನಡೆಯುವ ಸಂದರ್ಭಗಳಲ್ಲಿ ಸಭಾಂಗಣವನ್ನು ಸ್ವಚ್ಛವಾಗಿಡುವುದಲ್ಲದೇ, ಸಭೆಯ ಕಾರ್ಯಕಲಾಪಗಳು ಮುಗಿಯುವವರೆಗೆ, ಸಂಬಂಧಿಸಿದ ವಿಷಯ ನಿರ್ವಾಹಕರ ಜೊತೆ ಕೆಲಸ ಮಾಡುವುದು. ಟೆಲಿಫೋನ್, ಕಂಪ್ಯೂಟರ್, ಜೆರಾಕ್ಸ್ ಮಿಷನ್, ಪ್ರಿಂಟರ್ ಮುಂತಾದ ಉಪಕರಣಗಳನ್ನು ವ್ಯವಸ್ಥಿತವಾಗಿ ನೋಡಿಕೊಳ್ಳುವುದು. ಮೇಲಧಿಕಾರಿಗಳ ನಿಯಂತ್ರಣಕ್ಕೆ ಒಳಪಟ್ಟು ಅವರು ಸೂಚಿಸುವ ಕೆಲಸಗಳನ್ನು ನಿರ್ವಹಿಸತಕ್ಕದ್ದು.

ಸಹಕಾರಿಯ ಕಛೇರಿಯಲ್ಲಿ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಕೆಲವು ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಅವುಗಳಲ್ಲಿ ಪ್ರತಿ ಸಿಬ್ಬಂದಿಯ ಕೆಲಸಗಳನ್ನು ಗಮನಿಸುತ್ತಿರಬೇಕು. ಪ್ರತಿದಿನ ತುರ್ತಾಗಿ ನಿರ್ವಹಿಸಬೇಕಾದ ಕೆಲಸದ ಬಗ್ಗೆ ನಿರ್ದೇಶನ ನೀಡಬೇಕು. ತಿಂಗಳಿಗೊಮ್ಮೆ ಸಿಬ್ಬಂದಿ ಸಭೆ ಮತ್ತು ಮೇಜು ತಪಾಸಣೆ ನಡೆಸಿ ಕಾರ್ಯಕ್ಷಮತೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಸೂಕ್ತ ಮಾರ್ಗದರ್ಶನ ನೀಡಬೇಕು. ದಕ್ಷತೆ, ಮಿತವ್ಯಯ, ಸಕಾಲದಲ್ಲಿ ಕೆಲಸ ಇದಕ್ಕೆ ಆದ್ಯತೆ ನೀಡಬೇಕು. ಹಾಜರಾತಿ ಗಮನಿಸುವುದು. ಕಛೇರಿ ಕೆಲಸ ಸಿಬ್ಬಂದಿ ಹಾಜರಾತಿಯೊಂದಿಗೆ ಪ್ರಾರಂಭವಾಗುತ್ತದೆ. ವೇಳೆಗೆ ಸರಿಯಾಗಿ ಸಿಬ್ಬಂದಿಯು ಕೆಲಸಕ್ಕೆ ಹಾಜರಾಗತಕ್ಕದ್ದು. ಪೂರ್ವಾನುಮತಿಯಿಲ್ಲದೇ 15 ನಿಮಿಷ ತಡವಾಗಿ ಬಂದರೆ... ಕಛೇರಿ ಮುಖ್ಯಸ್ಥರು... ಸಿಬ್ಬಂದಿಯ ಹೆಸರಿನ ಮುಂದೆ ಸಣ್ಣ ಚುಕ್ಕಿ ಇಟ್ಟು "ನಿನ್ನ ತಡ ಹಾಜರಾತಿಯನ್ನು ಗಮನಿಸಲಾಗಿದೆ" ಎಂಬ ಸೂಚನೆ ನೀಡುವುದು. ಇದು ಪುನರಾವರ್ತನೆ ಆದರೆ 'X' ಮಾರ್ಕ್ ಹಾಕಿ 1/2 ದಿನದ ರಜೆ ಎಂದು ಪರಿಗಣಿಸುವುದು. ಮತ್ತೆ ವಿಳಂಬ ಆದಲ್ಲಿ... "ವೇತನ ರಹಿತ ರಜೆ" ಎಂದು ಶಿಸ್ತುಕ್ರಮ ಇಡುವುದು. ಸಿಬ್ಬಂದಿ ವರ್ಗದವರು ಕಛೇರಿ ಕೆಲಸದ ನಿಮಿತ್ತವಾಗಿ, ಹೊರಗಡೆ ಹೋಗಬೇಕಾದ ಸಂದರ್ಭದಲ್ಲಿ, ಕಛೇರಿ ಮುಖ್ಯಸ್ಥರ ಅನುಮತಿಯನ್ನು ಪಡೆದಿರತಕ್ಕದ್ದು ಮತ್ತು ಚಲನ ವಲನ ಪುಸ್ತಕದಲ್ಲಿ ತಪ್ಪದೇ ನಮೂದಿಸಿರತಕ್ಕದ್ದು.

### ಕಛೇರಿ ಆಡಳಿತದ ಆಧಾರ... ಪತ್ರಗಳು

- ಮೇಲಧಿಕಾರಿಗಳು/ ಸಹಕಾರ ಸಂಸ್ಥೆಗಳು/ ಸಾರ್ವಜನಿಕರು ಮತ್ತು ಸಿಬ್ಬಂದಿಗಳಿಂದ ಬರುವ ಪತ್ರಗಳು.
- ದೂರವಾಣಿ/ ಫ್ಯಾಕ್ಸ್/ ಇ-ಮೇಲ್ ಮೂಲಕ ಬರುವ ನಿರ್ದೇಶನಗಳು.
- ಇವೆಲ್ಲವೂ ಕಛೇರಿ ಆಡಳಿತದ ಚಾಲನಾ ಶಕ್ತಿಗಳು. ಇವುಗಳ ಸಕಾಲಿಕ ನಿರ್ವಹಣೆ... ಕಛೇರಿ ಆಡಳಿತದ ದಕ್ಷತೆಯನ್ನು ಬಿಂಬಿಸುತ್ತದೆ.

ಪ್ರತಿ ದಿನ ಕಛೇರಿಗೆ ಹಲವಾರು ಪತ್ರಗಳು ಬರುವುದುಂಟು. ಹೊಸದಾಗಿ ಉತ್ತರ ಕಳುಹಿಸಬೇಕಾದ ಪತ್ರಗಳು. ಹಿಂದೆ ಹೋಗಿದ್ದ ಪತ್ರಕ್ಕೆ ಬಂದ ಉತ್ತರಗಳು, ನಿಯತಕಾಲಿಕೆಗಳಿಗೆ ಸಂಬಂಧಪಟ್ಟ ಪತ್ರಗಳು, ಸುತ್ತೋಲೆ ಪತ್ರಗಳು ವಿಲೇವಾರಿಯಾಗಿದ್ದು, ಕಡತವನ್ನು ರೆಕಾರ್ಡ್ ರೂಮಿಗೆ ಕಳುಹಿಸಬೇಕಾದ ವಿಷಯಕ್ಕೆ ಸಂಬಂಧಿಸಿದ ಪತ್ರಗಳು... ಹೀಗೆ ಬೇರೆ ಬೇರೆ ಬಗೆಯ ಪತ್ರಗಳು ಬರುವುದು ಸಾಮಾನ್ಯ. ಕಛೇರಿಗೆ ಬರುವ ಎಲ್ಲಾ ಪತ್ರಗಳನ್ನು "ಟಪಾಲು" ಎಂದು ಕರೆಯಲಾಗುತ್ತದೆ. ಟಪಾಲನ್ನು ಕಛೇರಿ ಮುಖ್ಯಸ್ಥರೇ ತೆರೆಯಬೇಕೆ ಅಥವಾ ಅಧೀನ ಅಧಿಕಾರಿಗಳು ತೆರೆಯಬೇಕೆ ಎಂಬ ಬಗ್ಗೆ ಸ್ಪಷ್ಟವಾದ ಕಛೇರಿ ಆದೇಶ ಇರಬೇಕು. ಮಹತ್ವದ ವಿಷಯಗಳಲ್ಲಿ/ ತುರ್ತು ಸಂದರ್ಭಗಳಲ್ಲಿ ಕಛೇರಿ ಮುಖ್ಯಸ್ಥರೇ ಅಂತಹ ಟಪಾಲುಗಳನ್ನು ತೆರೆಯತಕ್ಕದ್ದು. ಟಪಾಲನ್ನು ಮುಖ್ಯಸ್ಥರು ನೋಡಿ ವಿಷಯಗಳಿಗೆ ಅನುಗುಣವಾಗಿ 'ಕೂಡಲೇ ಉತ್ತರಿಸಿ', 'ಜರೂರು' ಎಂದು ಅಥವಾ XXX ಸಂಕೇತದ ಮೂಲಕ "ಟಪಾಲು ಹಂತ" ದಲ್ಲಿಯೇ ಪತ್ರಗಳ ಮೇಲೆ ಸೂಚನೆ ನೀಡುವುದು ಸೂಕ್ತ. ನಂತರ, ಎಲ್ಲಾ ಕಾಗದ ಪತ್ರಗಳನ್ನು ಅವು ಬಂದ ದಿನವೇ ಸ್ವೀಕೃತಿ ವಹಿಯಲ್ಲಿ ನೋಂದಣಿ ಮಾಡಿ, ವಿಷಯವಾರು ವಿಂಗಡಿಸಿ, ಪ್ರತಿಯೊಂದು ಪತ್ರದ ಮೇಲೆ ಅವು ಬಂದ ದಿನಾಂಕದ ಮುದ್ರೆಯನ್ನು ಹಾಕಬೇಕು. ನಂತರ ಸ್ವೀಕೃತಿ ವಹಿಯ (Inward Register) ಕ್ರಮಾಂಕವನ್ನು ನಮೂದಿಸಿ, ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಅವರ ಸಹಿ ಪಡೆದು ತಲುಪಿಸಬೇಕು. ವಿಷಯ ನಿರ್ವಾಹಕರ ಹಂತದಲ್ಲಿ ವಿಷಯ ನಿರ್ವಾಹಕರು ಸ್ವೀಕೃತಿ ವಹಿಯಲ್ಲಿ ಸಹಿ ಮಾಡಿ ಸಂಬಂಧಿಸಿದ ಪತ್ರಗಳನ್ನು ಪಡೆದುಕೊಂಡು... ವಿಷಯ ವಹಿಯಲ್ಲಿ (Case Register) ಮೊದಲು ನೋಂದಣಿ ಮಾಡಿಕೊಳ್ಳಬೇಕು. ವಿಷಯವನ್ನು ಸಂಕ್ಷಿಪ್ತವಾಗಿ ನಮೂದಿಸಬೇಕು.

ಪತ್ರಗಳ ಚಲನ–ವಲನಗಳನ್ನು ಷರಾ ಅಂಕಣದಲ್ಲಿ ನಮೂದಿಸಬೇಕು. ವಿಷಯ ವಿಲೇ ಆಗುವವರೆಗೆ ವಿಷಯ ವಹಿಯ ಅಂಕಣ 4ರಲ್ಲಿ ಸಂಕ್ಷಿಪ್ತವಾಗಿ ಮಾಹಿತಿ ನಮೂದಿಸಬೇಕು. ಪತ್ರಗಳ ನಿರ್ವಹಣೆಯಲ್ಲಿ ಪ್ರತಿಯೊಂದು ಪತ್ರಗಳ ವಿಚಾರದಲ್ಲಿ ವಿಳಂಬವಿಲ್ಲದಂತೆ ಕ್ರಮ ಕೈಗೊಳ್ಳಬೇಕು. ಈ ದಿನ/ ತುರ್ತು/ ಪತ್ರಗಳನ್ನು ಅದೇ ದಿನ ಅಟೆಂಡ್ ಮಾಡಬೇಕು. ಜರೂರು ಪತ್ರಗಳನ್ನು 2 ದಿನಗಳ ಒಳಗೆ ವ್ಯವಹರಿಸಬೇಕು. ಉಳಿದ ಪತ್ರಗಳನ್ನು ಸ್ವೀಕೃತಿ ಪಡೆದ ದಿನದಿಂದ ಐದು ದಿನಗಳ ಒಳಗೆ ವಿಲೇ ಆಗುವ ಬಗ್ಗೆ ಕ್ರಮ ವಹಿಸಬೇಕು. ಮಾನ್ಯ ನಿಬಂಧಕರ ಕಛೇರಿಯಲ್ಲಿ ಪತ್ರ ಮತ್ತು ಕಡತ ವಿಲೇವಾರಿಯ ಹಂತಗಳು.

| ಮೊದಲನೆಯ ಹಂತ | |
|---|---|
| ಸ್ವೀಕೃತಿ ವಿಭಾಗದಿಂದ ಸಂಬಂಧಪಟ್ಟ ವಿಭಾಗಕ್ಕೆ | ಅದೇ ದಿನ |
| ವಿಷಯ ನಿರ್ವಾಹಕರು ಕಡತವನ್ನು ಮಂಡಿಸುವ ಅವಧಿ | 1 ರಿಂದ 3 ದಿನ |
| ಅಧೀಕ್ಷಕರು | 1 ರಿಂದ 2 ದಿನ |
| ಸಹಾಯಕ ನಿಬಂಧಕರು ಮತ್ತು ಉಪ ನಿಬಂಧಕರು | 1 ರಿಂದ 2 ದಿನ |
| ಸಂಯುಕ್ತ ನಿಬಂಧಕರು ಮತ್ತು ಅಪರ ನಿಬಂಧಕರು | 2 ದಿನ |
| ನಿಬಂಧಕರು | 2 ದಿನ |
| **ಎರಡನೇ ಹಂತ** | |
| ವಿಷಯ ನಿರ್ವಾಹಕರು ಕರಡು ಪ್ರತಿ ಮಂಡಿಸುವುದು | 1 ದಿನ |
| ಅಧೀಕ್ಷಕರು | 1 ದಿನ |
| ಸಹಾಯಕ ನಿಬಂಧಕರು/ ಉಪನಿಬಂಧಕರು/ಸಂಯುಕ್ತ ನಿಬಂಧಕರು | 1 ರಿಂದ 3 ದಿನ |
| ಬೆರಳಚ್ಚಿಗಾಗಿ | 1 ರಿಂದ 2 ದಿನ |
| ಶುದ್ಧ ಪ್ರತಿ ಮಂಡಿಸುವಿಕೆ, ಸಹಿ ಮತ್ತು ರವಾನೆ | 1 ರಿಂದ 2 ದಿನ |
| ಶುದ್ಧ ಪ್ರತಿಗಳಿಗೆ ನಿಬಂಧಕರಿಂದ ಸಹಿ ಬೇಕಾದಲ್ಲಿ ಮಾತ್ರ | 2 ದಿನ |

**ಕಡತ ನಿರ್ವಹಣೆ :** ಕಡತ ನಿರ್ವಹಣೆ ಎಂದರೇನು? ಒಂದು ಕಛೇರಿಯಲ್ಲಿ... ವಿಷಯ ನಿರ್ವಾಹಕರಿಂದ ಪ್ರಾರಂಭವಾಗಿ, ಕಛೇರಿ ಮುಖ್ಯಸ್ಥರವರೆಗೆ ಒಂದು ವಿಷಯಕ್ಕೆ ಸಂಬಂಧಪಟ್ಟಂತೆ ಆಂತರಿಕವಾಗಿ ನಡೆಯುವ ಸಂವಹನವೇ ಕಡತ ನಿರ್ವಹಣೆ.



ಕಡತವು ಕಛೇರಿ ನಿರ್ವಹಣೆಯ ಪ್ರಮುಖ ದಾಖಲೆ. ಕಛೇರಿಗೆ ಬರುವ ಪತ್ರಗಳಲ್ಲಿ ಎರಡು ವಿಧದಲ್ಲಿ ಗುರುತಿಸಬಹುದು. ಈಗಾಗಲೇ ಬಾಕಿ ಇರುವ ವಿಷಯಗಳಿಗೆ ಸಂಬಂಧಿಸಿದ್ದು ಹಾಗೂ ಹೊಸ ಉಲ್ಲೇಖಗಳು, ಬಾಕಿ ಇರುವ ವಿಷಯಗಳಿಗೆ ಬಂದ ಪತ್ರಗಳನ್ನು ಸಂಬಂಧಿಸಿದ ಕಡತದಲ್ಲಿಟ್ಟು ವ್ಯವಹರಿಸುವುದು. ಹೊಸ ಪತ್ರಗಳ ಬಗ್ಗೆ ಪ್ರತಿ ವಿಷಯಕ್ಕೆ ಒಂದೊಂದು ಪ್ರತ್ಯೇಕ ಕಡತವನ್ನು ಪ್ರಾರಂಭಿಸಬೇಕು. ಹೊಸ ಕಡತವನ್ನು ತೆರೆಯುವಾಗ ವಿಷಯ, ವರ್ಷ, ಕಡತದ ಸಂಖ್ಯೆ ನಮೂದಿಸಬೇಕು. ಕಡತಗಳ ರಿಜಿಸ್ಟರ್ ಇಡುವುದು ಅಗತ್ಯ. ಕಛೇರಿಯ ವಿಷಯಗಳನ್ನು ಮತ್ತು ಪತ್ರ ವ್ಯವಹಾರಗಳನ್ನು ಸುಲಭವಾಗಿ ಗುರುತಿಸಲು ಮತ್ತು ಕೆಲಸದ ಏಕರೂಪತೆಯನ್ನು ಸಾಧಿಸಲು ಮೂರು ಸೂಚ್ಯಾಕ್ಷರಗಳನ್ನು ಬಳಸುವುದು. ಉದಾ:– ಆಡಳಿತ, ಎಡಿಎಂ, ಲೆಕ್ಕ, ಎಸಿಟಿ, ತರಬೇತಿ, ಟಿಆರ್‌ಜಿ, ಆಡಿಟ್, ಎಡಿಟಿ ಹಾಗೂ ಕಡತ ಸಂಖ್ಯೆ ಉದಾ:– ಸಂಖ್ಯೆ: ಎಡಿಎಂ–18/2016–17 (2016–17ನೇ ಸಾಲಿನ ಆಡಳಿತ ವಿಷಯ ವಹಿಯ ಕ್ರಮ ಸಂಖ್ಯೆ 18 ಎಂದು ತಿಳಿಯಬೇಕು)

ಕಡತಗಳು ಅಚ್ಚುಕಟ್ಟಾಗಿ ಇರಬೇಕು. ಶೀಘ್ರ ಲಭ್ಯವಾಗುವಂತಿರಬೇಕು. ವಿಷಯ ಅರ್ಥವಾಗುವಂತಿರಬೇಕು. ಅಧಿಕಾರ ಹೊಂದಿದವರ ಮೂಲಕ ವ್ಯವಹರಿಸಿರುವಂತಿರಬೇಕು. ಭದ್ರತೆ ಹೊಂದಿರಬೇಕು. ಗಣಕೀಕರಣ ಕಡತದ ಸುರಕ್ಷತೆಯ ಬಗ್ಗೆ ಎಚ್ಚರ ಅಗತ್ಯ.

**ಕಡತದಲ್ಲಿ 2 ಭಾಗಗಳಿವೆ :**

- **ಟಿಪ್ಪಣಿ ಭಾಗ :** ಟಿಪ್ಪಣಿ ಭಾಗದಲ್ಲಿ ಮೊದಲ ಟಿಪ್ಪಣಿಗಳು ಮೇಲೆಯೇ ಇದ್ದು, ಇತ್ತೀಚಿನ ಟಿಪ್ಪಣಿಗಳು ಕೊನೆಯಲ್ಲಿ ಇರಬೇಕು. ಮೇಲಿನಿಂದ ಕೆಳಗಿನ ಅನುಕ್ರಮದಲ್ಲಿ ಜೋಡಿಸಬೇಕು, ಟಿಪ್ಪಣಿ ಭಾಗವು ಕಡತದ ಎಡ ಭಾಗದಲ್ಲಿರುತ್ತದೆ.
- **ಪತ್ರ ಭಾಗ :** ಪತ್ರ ಭಾಗದಲ್ಲಿ ಮೊದಲ ಪತ್ರ ತೀರಾ ಕೆಳಗಿರಬೇಕು. ಇತ್ತೀಚಿನ ಪತ್ರ ಮೇಲಿರಬೇಕು. ದಿನಾಂಕದ ಅನುಕ್ರಮದಲ್ಲಿ ಜೋಡಣೆಯಾಗಿರಬೇಕು. ಕೆಳಗಿನಿಂದ ಮೇಲಿನ ಅನುಕ್ರಮದಲ್ಲಿ ಜೋಡಿಸಬೇಕು. ಕಡತವನ್ನು ತೆಗೆದೊಡನೆಯೇ ಇತ್ತೀಚಿನ ಹಂತ ಸ್ಪಷ್ಟವಾಗಿ ಮತ್ತು ಸುಲಭವಾಗಿ ತಿಳಿಯುವಂತಿರಬೇಕು. ಪತ್ರ ಭಾಗವು ಕಡತದ ಬಲಭಾಗದಲ್ಲಿರುತ್ತದೆ.


**ಕಛೇರಿ ಟಿಪ್ಪಣಿ :** ಕಛೇರಿಗೆ ಒಂದು ಪತ್ರ ಬಂದ ನಂತರದಲ್ಲಿ ಅದು ವಿಲೇವಾರಿಯಾಗುವವರೆಗಿನ ಹಲವು ಹಂತದ ಹೆಜ್ಜೆ ಗುರುತುಗಳೇ ಕಛೇರಿ ಟಿಪ್ಪಣಿ. ಕೆಲಸಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ವಿಧಾನ ಮತ್ತು ಕೈಗೊಳ್ಳಬೇಕಾದ ತೀರ್ಮಾನ ಕಛೇರಿ ಟಿಪ್ಪಣಿಗಳ ಮೇಲೆ ಅವಲಂಬಿಸಿದೆ. ವಿಷಯದ ಹಿನ್ನೆಲೆ, ಸುತ್ತೋಲೆಗಳ ನಿರ್ದೇಶನ, ಆಡಳಿತ ಮಂಡಲಿಯ ನಿರ್ಣಯಗಳ ಬಗ್ಗೆ ಟಿಪ್ಪಣಿಯಲ್ಲಿ ಸ್ಪಷ್ಟವಾಗಿ ನಮೂದಿಸಿದರೆ ತೀರ್ಮಾನ ತೆಗೆದುಕೊಳ್ಳಲು ಸುಲಭವಾಗುತ್ತದೆ.

ಕಛೇರಿ ಟಿಪ್ಪಣಿಯ ಮಹತ್ವ – ಕಛೇರಿಗೆ ತಲುಪಿದ ಪತ್ರ, ಅರ್ಜಿ, ಮನವಿ ಅಥವಾ ಪ್ರಸ್ತಾವನೆಗಳು ಕಛೇರಿಯಿಂದ ಅಂತಿಮವಾಗಿ ವಿಲೇವಾರಿ ಆಗುವವರೆಗೆ ಹಲವು ಹಂತಗಳನ್ನು ದಾಟುತ್ತವೆ. ಈ ಹಂತಗಳಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಅಭಿಪ್ರಾಯಗಳನ್ನು ಹೊತ್ತು ಸಾಗುತ್ತವೆ. ಇದರಿಂದಾಗಿ ಸ್ಪಷ್ಟ ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತವೆ. ಇದು ಕಛೇರಿ ಆಡಳಿತದ ಕೀಲಿ ಕೈ ಇದದಂತೆ.

ಟಿಪ್ಪಣಿಯ ಮುಖ್ಯ ಲಕ್ಷಣಗಳು – ಸಂಕ್ಷಿಪ್ತತೆ, ಖಚಿತತೆ, ಸರಳತೆ, ಅರ್ಥಪೂರ್ಣತೆಗಳಿಂದ ಕೂಡಿರಬೇಕು.

**ಸಂಕ್ಷಿಪ್ತತೆ :** ಕಛೇರಿ ಟಿಪ್ಪಣಿಗಳಲ್ಲಿ ಮಿತ ಸಂಖ್ಯೆಯ ಶಬ್ದಗಳನ್ನು ಹಾಗೂ ಸರಳವಾದ ವಾಕ್ಯ ರಚನೆಗಳನ್ನು ಬಳಸವುದು ಉತ್ತಮ. ಪತ್ರದ ವಿಷಯವನ್ನು ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿ ನಮೂದಿಸಬೇಕು. ಅನಗತ್ಯ ಪದಗಳು ಇರಕೂಡದು. ಪತ್ರದಲ್ಲಿರುವ ಅಂಶಗಳನ್ನು ಯಥಾವತ್ತಾಗಿ ಟಿಪ್ಪಣಿಯಲ್ಲಿ ಸೇರಿಸುವುದು ಸೂಕ್ತವಲ್ಲ.

(ಮುಂದಿನ ಸಂಚಿಕೆಗೆ...)



# RBI NEWS - DECEMBER 2017

**K. Vittal Shetty,** Banking Consultant, kohimavittal@Hotmail.com, Mobile:9845699904

**Dec 06, 2017 : Fifth Bi-monthly Monetary Policy Statement, 2017-18 Resolution of the Monetary Policy Committee (MPC) Reserve Bank of India**

On the basis of an assessment of the current and evolving macroeconomic situation at its meeting today, the Monetary Policy Committee (MPC) decided to :

- keep the policy repo rate under the liquidity adjustment facility (LAF) unchanged at 6.0 per cent.

Consequently, the reverse repo rate under the LAF remains at 5.75 per cent, and the marginal standing facility (MSF) rate and the Bank Rate at 6.25 per cent.

The decision of the MPC is consistent with a neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

**The next meeting of the MPC is scheduled on February 6 and 7, 2018.**

IMPORTANT NEWS

**December 14, 2017: Customer Protection - Limiting Liability of Customers of Co-operative Banks in Unauthorised Electronic Banking Transactions**

Please refer to our circular UBD.BSD.I/PCB/No.45/ 12.05.00/2001-02 dated May 30, 2002 and para 13 of circular RPCD.CO.RCB.BC.No.36/07.51.010/2014-15 dated October 22, 2014 regarding reversal of erroneous debits arising from fraudulent or other transactions.

With the increased thrust on IT enabled financial inclusion and related customer protection issues, and considering the recent surge in customer grievances relating to unauthorised transactions resulting in debits to their accounts/cards, the criteria for determining the customer liability in these circumstances have been reviewed. The revised directions in this regard are set out below.

Strengthening of systems and procedures

**Broadly, the electronic banking transactions can be divided into two categories:**

i. Remote / online payment transactions (transactions that do not require physical payment instruments to be presented at the point of transactions e.g. internet banking, mobile banking, card not present (CNP) transactions), Pre-paid Payment Instruments (PPI), and

ii. Face-to-face/ proximity payment transactions (transactions which require the physical payment instrument such as card or mobile phone to be present at the point of transaction e.g. ATM, POS, etc.)

The systems and procedures in banks must be designed to make customers feel safe about carrying out electronic banking transactions. To achieve this, banks must put in place :

iii. appropriate systems and procedures to ensure safety and security of electronic banking transactions carried out by customers;

iv. robust and dynamic fraud detection and prevention mechanism;

v. mechanism to assess the risks (for example, gaps in the bank's existing systems) resulting from unauthorised transactions and measure the liabilities arising out of such events;

vi. appropriate measures to mitigate the risks and protect themselves against the liabilities arising therefrom; and

vii. a system of continually and repeatedly advising customers on how to protect themselves from electronic banking and payments related fraud.

**Reporting of unauthorised transactions by customers to banks**

Banks must ask their customers to mandatorily register for SMS alerts and, wherever available, register for e-mail alerts, for electronic banking transactions. The SMS alerts shall mandatorily be sent to the customers, while email alerts may be sent, wherever registered. The customers must be advised to notify their bank of any unauthorised electronic banking transaction at the earliest after the occurrence of such transaction, and informed that the longer the time taken to notify the bank, the higher will be the risk of loss to the bank/customer. To facilitate this, banks providing e-banking services must provide customers with 24x7 access through multiple channels (at a minimum, via website, phone banking, SMS, e-mail, IVR, a dedicated toll-free helpline, reporting to home branch, etc.) for reporting unauthorised transactions that have taken place and/ or loss or theft of payment instrument such as card, etc. Banks shall also enable customers to instantly respond by "Reply" to the SMS and e-mail alerts and the customers should not be required to search for a web page or an e-mail address to notify the objection, if any. Further, a direct link for lodging the complaints, with specific option to report unauthorised electronic transactions shall be provided by banks on home page of their website. The loss/fraud reporting system shall also ensure that immediate response (including auto response) is sent to the customers acknowledging the complaint along with the registered complaint number. The communication systems used by banks to send alerts and receive their responses thereto must record the time and date of delivery of the message and receipt of customer's response, if any, to them. This shall be important in determining the extent of a customer's liability. The banks may not offer facility of electronic transactions, other than ATM cash withdrawals, to customers who do not provide mobile numbers to the bank. On receipt of report of an unauthorised transaction from the customer, banks must take immediate steps to prevent further unauthorized transactions in the account.

**Limited Liability of a Customer**

**(a) Zero Liability of a Customer**

A customer's entitlement to zero liability shall arise where the unauthorised transaction occurs in the following events :

viii. Contributory fraud/ negligence/deficiency on the part of the bank (irrespective of whether or not the transaction is reported by the customer).

ix. Third party breach where the deficiency lies neither with the bank nor with the customer but lies elsewhere in the system, and the customer notifies the bank within three working days of receiving the communication from the bank regarding the unauthorised transaction.

**(b) Limited Liability of a Customer**

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 32



A customer shall be liable for the loss occurring due to unauthorised transactions in the following cases:

x. In cases where the loss is due to negligence by a customer, such as where he has shared the payment credentials, the customer will bear the entire loss until he reports the unauthorised transaction to the bank. Any loss occurring after the reporting of the unauthorised transaction shall be borne by the bank.

xi. In cases where the responsibility for the unauthorised electronic banking transaction lies neither with the bank nor with the customer, but lies elsewhere in the system and the customer notifies the bank of such a transaction within four to seven working days of receiving a communication of the transaction, the per transaction liability of the customer shall be limited to the transaction value or the amount mentioned in Table 1, whichever is lower.

**Table 1 : Maximum Liability of a Customer under paragraph 7 (ii)**

| Type of Account | Maximum liability |
|---|---|
| • **BSBD Accounts** | 5,000 |
| • All other SB accounts<br>• Pre-paid Payment Instruments and Gift Cards<br>• Current/Cash Credit/Overdraft Accounts of MSMEs<br>• Current Accounts/Cash Credit/Overdraft Accounts of Individuals with annual average balance (during 365 days preceding the incidence of fraud)/ limit up to Rs.25 lakh<br>• Credit cards with limit upto Rs. 5 lakh | 10,000 |
| • **All other Current/Cash Credit/Overdraft Accounts** | 25,000 |

Further, if the delay in reporting is beyond seven working days, the customer liability shall be determined as per the bank's Board approved policy. Banks shall provide the details of their policy in regard to customers' liability formulated in pursuance of these directions at the time of opening the accounts. Banks shall also display their approved policy in public domain for wider dissemination. The existing customers must also be individually informed about the bank's policy.

Overall liability of the customer in third party breaches, as detailed in paragraph 6 (ii) and paragraph 7 (ii) above, where the deficiency lies neither with the bank nor with the customer but lies elsewhere in the system, is summarised in the Table 2 :

**Table 2 : Summary of Customer's Liability**

| Time taken to report the fraudulent transaction from the date of receiving the communication | Customer's liability |
|---|---|
| Within 3 working days | Zero liability |
| Within 4 to 7 working days | The transaction value or the amount mentioned in Table1, whichever is lower |
| Beyond 7 working days | As per bank's Board approved policy |

The number of working days mentioned in Table 2 shall be counted as per the working schedule of the home branch of the customer excluding the date of receiving the communication.

**Board Approved Policy for Customer Protection**

Bank shall formulate / revise their customer relations policy with approval of their Boards, which should clearly define the rights and obligations of customers in case of unauthorized transactions in specified scenarios i.e. debits to customer accounts owning to customer negligence / bank negligence / banking system frauds/ third party breaches etc. The policy should also include mechanism of creating customer awareness on the risks and responsibilities involved in electronic banking transactions, and customer liability in case of unauthorized electronic banking transactions, procedure for reporting unauthorized electronic banking transactions and acknowledgement of complaints. It should also provide for a robust grievance redressal structure as per extant instructions, escalation matrix, clear timelines for resolution of customer complaints, and compensation keeping in view the instructions contained in paragraph 10 above. The instructions contained in this circular shall be incorporated in the policy, and the policy should be prominently displayed at branches.

Dec 21, 2017:- Primary (Urban) Co-operative Banks' Outlook 2016-17 : The Reserve Bank of India released the 4th volume of the annual publication titled 'Primary (Urban) Co-operative Banks' Outlook 2016-17'. It can be accessed at https://dbie.rbi.org.in/DBIE/dbie.rbi?site=publications. The publication has been brought out by the 'Department of Co-operative Bank Supervision' of the Reserve Bank of India. The publication covers the financial accounts of Scheduled and Non-Scheduled Primary (Urban) Co-operative Banks for the financial year 2016-17. The publication provides aggregate information on major items of balance sheet, profit and loss account, non-performing assets, financial ratios, state-wise distribution of offices and details of priority sector advances. In addition to that, the publication provides bank-wise information of Scheduled Primary (Urban) Co-operative Banks on select financial ratios on Capital Adequacy, Profitability, and Employee Productivity. The publication is being brought out in only electronic form on an annual basis on the Reserve Bank's website through the link https://dbie.rbi.org.in/ of Database on Indian Economy (DBIE). There will be no hard copies of the publication.

**Directions, Withdrawals, Penalties & Cancellation of Licences of Urban Co-operative Banks :**

1) Date: Dec 11, 2017:-RBI penalised a monetary penalty of 0.50 lakh (Rupees Fifty thousand only) onThe A P Mahajan's Co-operative Urban Bank Ltd., Hyderabad, Telangana,for violation of Reserve Bank of India directives and guidelines on Exposure Norms and Statutory/ Other Restrictions.

2) Date: Dec 13, 2017: -RBI has imposed on December 12, 2017, a monetary penalty of 30 million on IndusInd Bank Limited (the bank) for non-compliance with the directions issued by RBI on Income Recognition and Asset Classification (IRAC) norms and contravention of regulatory restrictions pertaining to non-fund based (NFB) facilities.

3) Date: Dec 15, 2017: -RBI has imposed, on December 12, 2017, a monetary penalty of 50 million on Syndicate Bank (the bank) for non-compliance with the directions/guidelines issued by RBI on cheque purchase/discounting, bill discounting, and Know Your Customer (KYC)/Anti-Money Laundering (AML) norms.

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055. ದೂ : 080-23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1-ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು - 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831-2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ - 585102. ದೂ: 08472-270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010